Editor: NITYANANDASWAMI Publisher: U. BASAVARAJA

RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ-17 ಸಂಚಿಕೆ-27 ಜುಲೈ 3-9, 2023 ಪುಟ 16 ರೂ. 10/-

Volume-17 Issue-27 July 3-9, 2023 Pages:16 Price: 10/-



ಮೋದಿ ಅಮೇರಿಕಾ ಭೇಟಿ: ಕೆಳ ಹಂತದ ಸ್ಥಾನಮಾನದ ವೈಭವೀಕರಣ

ಅಕ್ಕಿ ಬದಲು ನಗದು: ಎಚ್ಚರವಿರಲಿ

ಉತ್ತರ ಕನ್ನಡ : ಬಿಜೆಪಿಗೆ ಹೀನಾಯ ಸೋಲು ಅವಕಾಶ ಬಳಸಿಕೊಳ್ಳುವಲ್ಲಿ ಕಾಂಗ್ರೆಸ್ ವಿಫಲ

ಪಶ್ಚಿಮ ಬಂಗಾಳ : ಪ್ರಜಾಪ್ರಭುತ್ವ ಮತ್ತೆ ಉದಯವಾಗುವುದೇ?

ಪಾಟ್ನಾದಲ್ಲಿ ವಿರೋಧ ಪಕ್ಷಗಳ ಸಭೆ: ಅತ್ಯಂತ ಪ್ರಮುಖ ರಾಜಕೀಯ ನಡೆ



ಕಮ್ಯೂನಿಸ್ಟ್ ಪಕ್ಷಗಳ ಅಸ್ತಿತ್ವ ಅಪ್ರಸ್ತುತವೇ?

ರಾಜಕೀಯ ಧೃವೀಕರಣ ತೀವ್ರಗೊಂಡ ಈ ವಿಧಾನ ಸಭಾ ಚುನಾವಣೆಯಲ್ಲಿ ಕಮ್ಯೂನಿಸ್ಟ್ ಪಕ್ಷಗಳು ಒಂದು ಸ್ಥಾನವನ್ನು ಗೆಲ್ಲದ ಸ್ಥಿತಿ ಹಾಗೂ ಕಡಿಮೆ ಮತಗಳನ್ನು ಪಡೆದ ಬಗ್ಗೆ ಕೆಲವು ಬುದ್ಧಿಜೀವಿ ಗೆಳೆಯರು ಟೀಕೆ ಮಾಡಿದ್ದಾರೆ. ಸಂಸದೀಯ ರಾಜಕಾರಣದಲ್ಲಿ ಕಮ್ಯೂನಿಸ್ಟ್ ಪಕ್ಷಗಳಿಗೆ ಇನ್ನು ಜಾಗವಿಲ್ಲ ಎಂದೂ, ಅವು ಈ ರಾಜಕಾರಣಕ್ಕೆ ಅಪ್ರಸ್ತುತಗೊಳ್ಳುತ್ತಿವೆಯೇ ಎಂಬ ಪ್ರಶ್ನೆಯನ್ನೂ ಎತ್ತಿದ್ದಾರೆ. ಇವಕ್ಕೆಲ್ಲಾ ವಿಶ್ಲೇಷಣಾತ್ಮಕ ಉತ್ತರವನ್ನು ನೀಡಿದ್ದಾರೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಯು.ಬಸವರಾಜ್ ರವರು.

ಈ ವಿಧಾನ ಸಭಾ ಚುನಾವಣೆಯಲ್ಲಿ ಕಮ್ಯೂನಿಸ್ಟ್ ಪಕ್ಷಗಳು ಪಡೆದ ಕುಸಿದ ಮತಗಳ ಕುರಿತು ಕೆಲ ಬುದ್ಧಿಜೀವಿ ಗೆಳೆಯರು ಟೀಕೆ ಮಾಡಿದ್ದಾರೆ. ಕಮ್ಯೂನಿಸ್ಟ್ ಪಕ್ಷಗಳನ್ನು ಟೀಕಿಸುವ ಭರದಲ್ಲಿ ಒಂದು ಹೆಜ್ಜೆ ಮುಂದೆ ಹೋಗಿ, ಎಎಪಿ ಹಾಗೂ ಎಸ್.ಡಿ.ಪಿ.ಐ. ಗಳು ಪಡೆದ ಮತಗಳನ್ನು ಹೊಗಳುತ್ತಾ, ರಾಜ್ಯದಲ್ಲಿ ಕಮ್ಯೂನಿಸ್ಟ್ ಪಕ್ಷಗಳ ಅಸ್ಥಿತ್ವ ಅಪ್ರಸ್ತುತವಾಗುತ್ತಿದೆ ಎಂದೂ ಹೇಳಿದ್ದಾರೆ. ರಾಜ್ಯ ಹಾಗೂ ದೇಶ ಈ ದಿನ ಎದುರಿಸುತ್ತಿರುವ ದುಸ್ಥಿತಿಯ ಹಿಂದೆ, ಸುಮಾರು 50 ವರ್ಷಗಳ ಕಾಲ ಅಧಿಕಾರ ನಡೆಸಿದ ಇದೇ ಕಾಂಗ್ರೆಸ್ ಪಕ್ಷವೇ ಕಾರಣ ಎಂಬುದನ್ನು ಮರೆತು, ಕಾಂಗ್ರೆಸ್ ಮೇಲೆ ಅತಿಯಾದ ಪ್ರೀತಿ ತೋರಿಸಿದ್ದಾರೆ. ಕಮ್ಯುನಿಸ್ಟ ಬಗೆಗಿನ ತಮ್ಮಲ್ಲಿ ಬಚ್ಚಿಟ್ಟು ಕೊಂಡಿದ್ದ ಅಸಹನೆಯನ್ನು ಈ ರೀತಿಯಲ್ಲಿ ಹೊರಗೆಡಹಿದ್ದಾರೆ.

ಕಮ್ಯೂನಿಸ್ಟ್ ಪಕ್ಷಗಳು ಕಡಿಮೆ ಮತಗಳನ್ನು ಪಡೆಯಲು ಕಾರಣಗಳೇನು?

ಈ ಚುನಾವಣೆಯಲ್ಲಿ ಕಮ್ಯೂನಿಸ್ಟ್ ಪಕ್ಷಗಳು ಸಿಪಿಐ(ಎಂ)–4, ಸಿಪಿಐ–7 ಒಟ್ಟು ಸ್ಪರ್ಧಿಸಿದ ಕ್ಷೇತ್ರಗಳು 11 ಮಾತ್ರವೇ ಆಗಿತ್ತು. ಹೀಗಾಗಿ ಅವು ಪಡೆದ ಮತಗಳು ಅಲ್ಪವಾಗಿತ್ತು. ರಾಜ್ಯದ ಒಟ್ಟು 224 ವಿಧಾನ ಸಭಾ ಕ್ಷೇತ್ರಗಳಲ್ಲಿ ನಾವು ಸ್ಪರ್ಧಿಸಿದ ಕ್ಷೇತ್ರಗಳು ಕೇವಲ ಶೇ. 5 ಮಾತ್ರವೇ ಆಗಿದ್ದವು ಎಂಬುದನ್ನು ಗೆಳೆಯರು ಗಮನಿಸಬೇಕಿತ್ತು. ಉಳಿದ ಶೇ. 95 ಕ್ಷೇತ್ರಗಳಲ್ಲಿ ಸ್ಪರ್ಧಿಸಿರಲಿಲ್ಲ.

ಕಮ್ಯೂನಿಸ್ಟ್ ಪಕ್ಷಗಳು ಎಲ್ಲಾ ಕಡೆ ಸ್ಪರ್ದಿಸದಿರಲು ಕಾರಣಗಳೇನು?!

ಒಂದನೆಯದಾಗಿ, ಕಮ್ಯೂನಿಸ್ಟ್ ಪಕ್ಷಗಳಿಗೆ ಎಲ್ಲಾ ವಿಧಾನ ಸಭಾ ಕ್ಷೇತ್ರಗಳಲ್ಲಿ ಅಸ್ತಿತ್ವವಿಲ್ಲ. ವಾಸ್ತವಿಕವಾಗಿ, ಕಮ್ಯೂನಿಸ್ಟ್ ಪಕ್ಷಗಳು ಮತ್ತು ಅವುಗಳ ಅಸ್ಥಿತ್ವ ರಾಜ್ಯದಲ್ಲಿ ರಾಜಕೀಯವಾಗಿ ಸಣ್ಣದಾಗಿದೆ. ಆದರೆ ಕಮ್ಯೂನಿಸ್ಟರ ನೇತೃತ್ವದ ಜನ ಚಳುವಳಿಗಳು ಸಾಪೇಕ್ಷವಾಗಿ ಶಕ್ತಿಶಾಲಿಯಾದವುಗಳಾಗಿವೆ. ಅವುಗಳಿಗೆ ಹೋಲಿಸಿದರೆ, ಚಳುವಳಿಯ ಪ್ರಭಾವಗಳನ್ನು ಬಳಸಿಕೊಂಡು ರಾಜಕೀಯವಾಗಿ ವಿಸ್ತಾರಗೊಳ್ಳಲು ಅವುಗಳಿಗೆ ಸಾಧ್ಯವಾಗಿಲ್ಲ.

ಕಮ್ಯೂನಿಸ್ಟ್ ಪಕ್ಷಗಳು ನೈತಿಕ ನೆಲೆಯಲ್ಲಿ ಬಂಡವಾಳಶಾಹಿ – ಭೂಮಾಲಕ ಪಕ್ಷಗಳಿಗೆ ಎದುರಾಗಿ ಪರ್ಯಾಯ ರಾಜಕೀಯ ವಿಚಾರಗಳನ್ನು ಮುಂದೆ ಮಾಡಿ, ಜನರ ವಿಶ್ವಾಸವನ್ನು ಪಡೆದು ಬೆಳೆಯಬೇಕಾಗುತ್ತದೆ. ಹಾಗಾಗಿ ಅವು ಬಂಡವಾಳಶಾಹಿ–ಭೂಮಾಲಕರ ಪರವಾದ ರಾಜಕೀಯ ಪ್ರವಾಹದ ವಿರುದ್ಧ ಈಜಬೇಕಾಗುತ್ತದೆ. ಜನ ಚಳುವಳಿಯ ಪ್ರಭಾವವನ್ನು ಕ್ರೋಡೀಕರಿಸಿಕೊಳ್ಳಲು ಕೂಡಾ ಕಮ್ಯೂನಿಸ್ಟ್ ಪಕ್ಷಗಳು ಕಾರ್ಯಕರ್ತರ ಪಡೆಯನ್ನು ವಿಸ್ತರಿಸಿಕೊಳ್ಳಬೇಕಾಗುತ್ತದೆ. ಅದಕ್ಕೆಲ್ಲ ಅಗತ್ಯವಾದ ನಿಧಿಯನ್ನು ಕ್ರೋಢೀಕರಿಸಿಕೊಳ್ಳ ಬೇಕಾಗುತ್ತದೆ.

ಕಾಂಗ್ರೆಸ್ ಮತ್ತು ಬಿಜೆಪಿ ಮತ್ತಿತರೆ ಬಂಡವಾಳಶಾಹಿ ಪಕ್ಷಗಳು ಲೂಟಿಕೋರ ಕಾರ್ಪೋರೇಟ್ ಕಂಪನಿಗಳು, ಬಂಡವಾಳಶಾಹಿ, ಭೂಮಾಲಕರಿಂದ ಸಾವಿರಾರು ಕೋಟಿ ರೂ ಸಂಗ್ರಹಿಸಿಕೊಳ್ಳುತ್ತಿವೆ. ಅದಾಗಲೇ ಜನತೆಯ ಪಾರಂಪರಿಕ ನೇತಾರರಾಗಿರುವ ಜಾತಿ ಮುಖಂಡರು ಹಾಗೂ ಆರ್ಥಿಕ ಬಲ ಉಳ್ಳವರನ್ನೇ ಪಕ್ಷದ ತಳಹದಿಯನ್ನಾಗಿ ಮಾಡಿ ಕೊಂಡಿರುತ್ತಾರೆ. ಜಾತಿ ಹಾಗೂ ಮತೀಯ ರಾಜಕಾರಣವನ್ನು ತಳಹದಿಯಾಗಿಸಿ ಕೊಂಡು ಕಾರ್ಯ ನಿರ್ವಹಿಸುವುದು ಅವುಗಳ ಜನ ವಿರೋಧಿ ಕಾರ್ಯ ವಿಧಾನವಾಗಿದೆ.

ಕಮ್ಯೂನಿಸ್ಟ್ ಪಕ್ಷಗಳು ಅದಕ್ಕೆ ವ್ಯತಿರಿಕ್ತವಾಗಿ, ಕಾರ್ಮಿಕರು, ಕೂಲಿಕಾರರು, ರೈತರ ತಳಹದಿಯನ್ನು ಹೊಂದಿದ್ದು ಸಾಮಾಜಿಕ ಬದಲಾವಣೆಯ ಕರ್ತವ್ಯದಲ್ಲಿ ತೊಡಗಿಸಿ ಕೊಂಡಿವೆ. ಅವುಗಳ



ಸಂಪನ್ಮೂಲ ಸೀಮಿತವಾಗಿರುತ್ತದೆ.

ಈ ಅವಧಿಯಲ್ಲಿ ಜನತೆಯ ವೈರಿಗಳು ಹರಿಬಿಟ್ಟ ಕಮ್ಯೂನಿಸ್ಟ್ ವಿರೋಧಿ ಸಿದ್ಧಾಂತಗಳು, ತೀವ್ರವಾಗಿ ಬೆಳೆಯುತ್ತಿರುವ ವಿಭಜನಕಾರಿ ಮತಾಂಧತೆಯ ಹಾಗೂ ಜಾತಿವಾದಿ ಸಿದ್ಧಾಂತಗಳನ್ನು ನಿರಂತರವಾಗಿ ಎದುರಿಸಿ ಮುನ್ನಡೆಯ ಬೇಕಾದ ವಾಸ್ತವತೆಯಲ್ಲಿ ಕಮ್ಯೂನಿಸ್ಟ್ ಪಕ್ಷಗಳು ಇವೆ. ಹೀಗಾಗಿ, ಕಮ್ಯೂನಿಸ್ಟ್ ಪಕ್ಷಗಳು ಈ ದಿನದ ಕರ್ನಾಟಕದ ರಾಜಕಾರಣದಲ್ಲಿ ಬಿಜೆಪಿ, ಕಾಂಗ್ರೆಸ್ ಗಳ ಜೊತೆ ಹೋಲಿಸಿ ನೋಡಿಕೊಳ್ಳುವಷ್ಟು ದೊಡ್ಡ ಪಕ್ಷಗಳೇನಾಗಿರಲಿಲ್ಲ.

ಕಮ್ಯೂನಿಸ್ಟ್ ಪಕ್ಷಗಳು ಎಲ್ಲೂ ನಾವು ಜಿಲ್ಲಾ ಹಾಗೂ ತಾಲೂಕು ಪಂಚಾಯತ್ ಸ್ಥಾನಗಳನ್ನು ದೊಡ್ಡ ಪ್ರಮಾಣದಲ್ಲಿ ಗೆದ್ದುಕೊಂಡಿದ್ದೇವೆಂದು ಸುಳ್ಳು ಹೇಳಿ, ದೊಡ್ಡ ಪಕ್ಷಗಳೆಂದು ಪ್ರಚುರ ಪಡಿಸಿಕೊಂಡಿಲ್ಲ.

ಎರಡನೆಯದಾಗಿ, ಇನ್ನಷ್ಟು ಕ್ಷೇತ್ರಗಳಲ್ಲಿ ಸಿಪಿಐ(ಎಂ) ಹಾಗೂ ಸಿಪಿಐ ಗಳಿಗೆ ಸ್ಪರ್ಧಿಸಲು ಅವಕಾಶಗಳಿದ್ದರೂ ಅವುಗಳು ಸ್ಪರ್ಧಿಸಲಿಲ್ಲ. ಅದಕ್ಕೆ ಮುಖ್ಯ ಕಾರಣವೆಂದರೆ, ಈ ಚುನಾವಣೆಯಲ್ಲಿ ಕೋಮುವಾದಿ ಬಿಜೆಪಿಯನ್ನು ಸೋಲಿಸುವುದು ಪ್ರಮುಖ ಕರ್ತವ್ಯವೆಂದು ಅವು ಭಾವಿಸಿದ್ದವು, ಬಿಜೆಪಿಯನ್ನು ಏಕಾಂಗಿಯಾಗಿ ಸೋಲಿಸುವ ಕೆಲಸ ಎಡ ಪಕ್ಷಗಳಿಂದ ಸದ್ಯಕ್ಕೆ ಸಾಧ್ಯವಿಲ್ಲವೆಂದು ತಿಳಿದು, ನಮ್ಮಗಳ ಸ್ಪರ್ಧೆಯಿಂದ ಬಿಜೆಪಿಯನ್ನು ಸೋಲಿಸುವ ಜಾತ್ಯಾತೀತ ಶಕ್ತಿಗಳಿಗೆ ಸೋಲು ಉಂಟಾಗಬಾರದೆಂಬ ಜವಾಬ್ದಾರಿಯುತ ರಾಜಕೀಯ ಕರ್ತವ್ಯದ ಕಾರಣದಿಂದ ಸ್ಪರ್ಧಿಸಲಿಲ್ಲವೆಂಬುದನ್ನು ಗಮನಿಸಬೇಕು. ಈ ರಾಜಕೀಯ ಕರ್ತವ್ಯವನ್ನು ಬಿಟ್ಟಿದ್ದರೆ ಒಟ್ಟಾಗಿ 50 ಕ್ಷೇತ್ರಗಳಲ್ಲಿ ಸ್ಪರ್ಧಿಸಬಹುದಿತ್ತು. ಆದರೆ ಕಮ್ಯೂನಿಸ್ಟ್ ಪಕ್ಷಗಳಿಗೆ ರಾಜಕೀಯ ಅಸ್ಥಿತ್ವಕ್ಕಾಗಿ ಸ್ಪರ್ಧಿಸುವುದಕ್ಕಿಂತ ಈ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸುವ ಮೂಲಕ ರಾಜ್ಯದ ಸೌಹಾರ್ಧತೆ ರಕ್ಷಣೆ ಮಾಡುವುದು ಕರ್ತವ್ಯವೆಂದು ಭಾವಿಸಿ ಹೆಚ್ಚು ಸ್ಥಾನಗಳಲ್ಲಿ ಸ್ಪರ್ಧಿಸುವುದರಿಂದ ಹಿಂದೆ ಸರಿದಿವೆ.

ಮೂರನೆಯದಾಗಿ, ಈ ಚುನಾವಣೆಯ ಫಲಿತಾಂಶವು ಹೇಳುವುದನ್ನು ವಾಸ್ತವಿಕವಾಗಿ ಗಮನಿಸಿದರೆ, ಮತದಾರರು ಬಹುತೇಕ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳ ನಡುವೆ ಹಂಚಿ ಹೋಗಿರುವುದು, ಧೃವೀಕರಣ ಗೊಂಡಿರುವುದು ಕಂಡು ಬರುತ್ತದೆ. ರಾಜ್ಯದ ಜನತೆಗೆ ಬಿಜೆಪಿ ಸರಕಾರದ ಕುರಿತಂತೆ ಇದ್ದಂತಹ ಆಕ್ರೋಶ ಮತ್ತು ಕಾಂಗ್ರೆಸ್ ಪಕ್ಷ ನೀಡಿದ ಭರವಸೆಗಳು ಇಂತಹದೊಂದು ಪರಿಸ್ಥಿತಿ ನಿರ್ಮಾಣಗೊಳ್ಳಲು ಬಹುತೇಕ ಕಾರಣವಾಗಿದೆ. ಇದು, ಕಾಂಗ್ರೆಸ್ಸೇತರ ಜಾತ್ಯಾತೀತ ಶಕ್ತಿಗಳ ಮುನ್ನಡೆಗೆ ತೊಡಕಾಗಿ ಪರಿಣಮಿಸಿದೆ. ಇದರಿಂದಾಗಿ ಜೆಡಿಎಸ್ ಪಕ್ಷವೂ ಹಿನ್ನಡೆ ಅನುಭವಿಸಿದೆ. ಬಹುಶಃ ಜೆಡಿಎಸ್ ಪಕ್ಷ ಅತಂತ್ರ ವಿಧಾನ ಸಭೆ ನಿರ್ಮಾಣ ಗೊಂಡರೆ ತನ್ನ ನೇತೃತ್ವದ ಸರಕಾರ ಬರಲಿದೆ ಎಂದು ಪ್ರಕಟಿಸಿದ್ದು, ಅದರಲ್ಲೂ ಜೆಡಿಎಸ್ – ಬಿಜೆಪಿ ನೇತೃತ್ವದ ಸರಕಾರ ಬರಬಹುದೇನೋ ಎಂಬ ಭೀತಿಯೂ ಕೂಡಾ ಜೆಡಿಎಸ್ ಹಿನ್ನಡೆಗೆ ಕಾರಣವಾಗಿದೆ. ಈ ಎಲ್ಲದರ ಭಾಗವಾಗಿ, ಸಿಪಿಐ(ಎಂ) ಹಾಗೂ ಸಿಪಿಐ ಪಕ್ಷಗಳು ತಲಾ ಒಂದು ಸ್ಥಾನ ಗೆಲ್ಲಬಹುದೆಂದು ನಿರೀಕ್ಷಿಸಲಾದಂತಹ ಕ್ಷೇತ್ರಗಳಲ್ಲೂ ಹಿನ್ನಡೆ ಅನುಭವಿಸುವಂತಾಗಿದೆ.

ಬಂಡವಾಳಶಾಹಿ ಭೂಮಾಲಕ ರಾಜಕೀಯ ಪಕ್ಷಗಳು ಮತಗಳನ್ನು ಪಡೆಯಲು ಬಹುತೇಕ ಜಾತಿ ಹಾಗೂ ಕೋಮು ರಾಜಕಾರಣ ಮತ್ತು ಮತಗಳ ಖರೀದಿಗೆ ವ್ಯಾಪಕ ಬಂಡವಾಳ ತೊಡಗಿಸುವ ಅನೈತಿಕ ರಾಜಕೀಯಕ್ಕೆ ಎದುರಾಗಿ, ಕಮ್ಯೂನಿಸ್ಟ್ ಪಕ್ಷಗಳು ಪಡೆದ ಮತಗಳು ಕಡಿಮೆಯಾದರೂ ನೈತಿಕ ನೆಲೆಗಟ್ಟಿನಲ್ಲಿ ಪಡೆದ ಮತಗಳೆಂಬುದನ್ನು ಇಲ್ಲಿ ಸಕಾರಾತ್ಮಕವಾಗಿ ಗಮನಿಸಬೇಕಾಗಿದೆ.

ಕಾಂಗ್ರೆಸ್ ಜೊತೆ ಹೊಂದಾಣಿಕೆ ಸಿಪಿಐ(ಎಂ) ಮಾಡಿಕೊಂಡಿರಲಿಲ್ಲ

ಕಾಂಗ್ರೆಸ್ ಪಕ್ಷದ ಜೊತೆ ಈ ಚುನಾವಣೆಯಲ್ಲಿ ಸ್ಥಾನ ಹೊಂದಾಣಿಕೆಗಾಗಲಿ ಅಥವಾ ಕ್ಷೇತ್ರಗಳನ್ನು ಪಡೆದು ಮೈತ್ರಿಯಲ್ಲಿ ಕಾರ್ಯ ನಿರ್ವಹಿಸುವ ಪ್ರಯತ್ನವನ್ನಾಗಲಿ ಸಿಪಿಐ(ಎ) ಖಂಡಿತಾ ಮಾಡಿಲ್ಲ. ಇದು ಸಿಪಿಐ(ಎಂ) ರಾಜಕೀಯ ನಿಲುಮೆಯನ್ನು ಸರಿಯಾಗಿ ಅರ್ಥೈಸಿಕೊಳ್ಳದೇ ಪೂರ್ವಾಗ್ರಹದಿಂದ ಮಾಡಲಾದ ಆರೋಪವಾಗಿದೆ. ರಾಜ್ಯದಲ್ಲಿ ಸಿಪಿಐ(ಎಂ) ಪಕ್ಷ ಗೆಲ್ಲಲು ಅವಕಾಶವಿರುವ ಒಂದೇ ಒಂದು ಕ್ಷೇತ್ರವೆಂದು ಪರಿಗಣಿಸಲಾದ ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದಲ್ಲಿ ಸಿಪಿಐ(ಎಂ) ಗೆ ಎದುರಾಳಿ ಎಂದರೇ ಕಾಂಗ್ರೆಸ್ ಪಕ್ಷವೇ ಆಗಿತ್ತು. ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಈ ಕ್ಷೇತ್ರವನ್ನು ಕಾಂಗ್ರೆಸ್ ಗೆದ್ದು ಕೊಂಡಿದ್ದರೂ, ಸಿಪಿಐ(ಎಂ) 51 ಸಾವಿರಕ್ಕೂ ಅಧಿಕ ಮತಗಳಿಸಿ ಎರಡನೇ ಸ್ಥಾನದಲ್ಲಿತ್ತು. ಕಾಂಗ್ರೆಸ್ ಪಕ್ಷ ಈ ಕ್ಷೇತ್ರವನ್ನು ಎರಡು ಬಾರಿ ನಿರಂತರವಾಗಿ ಗೆದ್ದಿದ್ದ ಕ್ಷೇತ್ರವಾಗಿತ್ತು. ಹೀಗಾಗಿ ಸಿಪಿಐ(ಎಂ) ಸ್ಥಾನ ಹೊಂದಾಣಿಕೆಯ ಹೆಸರಿನಲ್ಲಿ ಈ ಕ್ಷೇತ್ರವನ್ನು ಬಿಟ್ಟು ಕೊಡುವಂತೆ ಕೇಳುವ ಪ್ರಸಂಗವಿರಲಿಲ್ಲ ಮಾತ್ರವಲ್ಲಾ, ರಾಜಕೀಯವಾಗಿಯೂ ಅದು ಸರಿಯಾದ ನಡೆಯಲ್ಲವೆಂದು ಪರಿಗಣಿಸಿತ್ತು. ಹೀಗಾಗಿ ಕಾಂಗ್ರೆಸ್ ಪಕ್ಷದ ಜೊತೆ ಮಾತುಕತೆ ಮಾಡುವ ಪ್ರಶ್ನೆ ಉದ್ಭವಿಸಲಿಲ್ಲ.

ಕಮ್ಯೂನಿಸ್ಟ್ ಪಕ್ಷಗಳು ಹಿಂದೆ ಇದ್ದ ಪ್ರಭಾವಗಳನ್ನು ಕಳೆದುಕೊಂಡವೇ

ನಿಜ! ಈ ಹಿಂದೆ ಚಿಕ್ಕಬಳ್ಳಾಪುರ, ಕೋಲಾರ, ದಕ್ಷಿಣ ಕನ್ನಡ, ದಾವಣಗೆರೆ, ಕಲಬುರ್ಗಿ, ಬಳ್ಳಾರಿ ಜಿಲ್ಲೆಗಳಲ್ಲಿ ಕಮ್ಯೂನಿಸ್ಟ್ ಪಕ್ಷಗಳಿಂದ ಆಯ್ಕೆಯಾದ ಶಾಸಕರಿದ್ದರು. ಈಗ ಆ ಕ್ಷೇತ್ರಗಳಲ್ಲಿ ಕಮ್ಯೂನಿಸ್ಟ್ ಪಕ್ಷಗಳು ಮತದಾರರ ಬೆಂಬಲ ಕಡಿಮೆಯಾಗಿದೆ.

ಮೊದಲನೆಯದಾಗಿ, ನಾವಿಲ್ಲಿ ಗಮನಿಸಬೇಕಾದ್ದು ಏನೆಂದರೆ ಆ ದಿನಗಳಲ್ಲಿ ಈ ಕ್ಷೇತ್ರಗಳಲ್ಲಿ ಕಮ್ಯೂನಿಸ್ಟ್ ಪಕ್ಷಗಳೇ ಕಾಂಗ್ರೆಸ್ ಪಕ್ಷಕ್ಕೆ ಪರ್ಯಾಯ ಪಕ್ಷಗಳಾಗಿದ್ದವು. ಹೀಗಾಗಿ ಒಂದೆಡೆ ಕಮ್ಯೂನಿಸ್ಟ್ ಪಕ್ಷವು ನಡೆಸಿದ ಚಳುವಳಿಗಳ ಶಕ್ತಿ, ರಾಜಕೀಯ ಪ್ರಭಾವ ಮತ್ತು ಇನ್ನೊಂದೆಡೆ ಇತರೆ ಕಾಂಗ್ರೆಸ್ ವಿರೋಧಿ ಮತಗಳು ಕೈ ಜೋಡಿಸಲ್ಪಟ್ಟು ಗೆಲುವು ಪಡೆಯುತ್ತಿದ್ದವು. ಆಗ ಕಮ್ಯೂನಿಸ್ಟ್ ಚಳುವಳಿಯ ಪ್ರಭಾವದಡಿ ಇತರೆ ಕಾಂಗ್ರೆಸ್ ವಿರೋಧಿ ಮತಗಳ ಕ್ರೋಢೀಕರಣವೂ ಇರುತ್ತಿತ್ತು.

ನಂತರದ ದಿನಗಳಲ್ಲಿ ಬಂಡವಾಳಶಾಹಿ ಭೂಮಾಲಕ ರಾಜಕೀಯ ಪಕ್ಷವಾದ ಕಾಂಗ್ರೆಸ್ ವಿಭಜನೆಗೊಂಡು ಒಡೆದುದು ಹೊಸ ಬಂಡವಾಳಶಾಹಿ ಪಕ್ಷಗಳು ಉದಯವಾದುದು ಮತ್ತು ಬಂಡವಾಳಶಾಹಿ, ಭೂಮಾಲಕರು ತಮ್ಮ ಶೋಷಣೆಯನ್ನು ಮುಂದುವರೆಸಲು ಮತ್ತು ತಮ್ಮ ರಾಜಕೀಯ ಶಕ್ತಿಗಳ ಬೆಳವಣಿಗೆಗಾಗಿ ಜಾತಿವಾದ, ಕೋಮುವಾದವನ್ನು ಅಪ್ಪಿಕೊಂಡು ವಿಸ್ತರಿಸುವ ಮೂಲಕ ಮತ್ತು ರಾಜಕಾರಣದಲ್ಲಿ ವ್ಯಾಪಕವಾದ ಬಂಡವಾಳ ತೊಡಗಿಸುವ ಮೂಲಕ ಕಮ್ಯೂನಿಸ್ಟ್ ಪಕ್ಷದ ನೆಲೆಯ ಮೇಲೆ ದಾಳಿ ನಡೆಸಿ ದುರ್ಬಲಗೊಳಿಸಿದವು. ಕಮ್ಯೂನಿಸ್ಟ್ ಪಕ್ಷಗಳ ಮತಗಳಿಕೆ ಕುಸಿಯಲು ಇದು ಒಂದು ಕಾರಣವಾದರೆ, ಆರ್ಥಿಕ ಬಿಕ್ಕಟ್ಟು ಮತ್ತು ನಂತರದ ಜಾಗತೀಕರಣದ ನೀತಿಗಳು, ಹಳೆಯ ಕೈಗಾರಿಕೆಗಳನ್ನು ನಾಶಗೊಳಿಸಿ ಕಮ್ಯೂನಿಸ್ಟರ ಚಳುವಳಿಯ ತಳಹದಿಯಾಗಿದ್ದ ಕಾರ್ಮಿಕರ ಶಕ್ತಿ ಕುಂಠಿತಗೊಂಡುದು ಮತ್ತೊಂದು ಕಾರಣವಾಗಿದೆ.

ಕಮ್ಯೂನಿಸ್ಟ್ ಪಕ್ಷಗಳು ತಮ್ಮ ಅಸ್ತಿತ್ವ ವನ್ನು ಕಳೆದುಕೊಂಡು ಬಿಟ್ಟವೇ?

ಕಮ್ಯೂನಿಸ್ಟ್ ಪಕ್ಷಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡು ಬಿಟ್ಟವು ಎಂಬುದರಲ್ಲಿ ಹುರುಳಿಲ್ಲ. ಬದಲಾದ ಸನ್ನಿವೇಶದಲ್ಲಿ ಹಿನ್ನಡೆಯಾಗಿರುವುದು ನಿಜವಾದರೂ, ಹೊಸ ಪ್ರದೇಶಗಳು, ಹೊಸ ಜನ ಸಮುದಾಯಗಳ ನಡುವೆ ಕಮ್ಯೂನಿಸ್ಟರು ಸಕ್ರಿಯವಾಗಿದ್ದಾರೆ.

ಎಲ್ಲಿಯವರೆಗೆ ದುಡಿಯುವ ಜನತೆ ಆರ್ಥಿಕ ಶೋಷಣೆ ಹಾಗೂ ಸಾಮಾಜಿಕ ದಬ್ಬಾಳಿಕೆಗೊಳಗಾಗಿ ಇರುತ್ತದೋ ಅಲ್ಲಿಯವರೆಗೆ ಕಮ್ಯೂನಿಸ್ಟ್ ಪಕ್ಷಕ್ಕೆ ಅದರ ಸಿದ್ಧಾಂತಕ್ಕೆ ಅಸ್ತಿತ್ವ ಇದ್ದೇ ಇರುತ್ತದೆ ಮತ್ತು ಅದು ಅವರ ವಿಮೋಚನೆಗಾಗಿ ಅವರಿಂದಲೇ ಬೆಳೆಯುತ್ತದೆ.

ಕಮ್ಯೂನಿಸ್ಟ್ ಪಕ್ಷಗಳು ತಮ್ಮ ಅಂಗಡಿಗಳನ್ನು ಬಂದ್ ಮಾಡಿಕೊಳ್ಳುವ ಕಾಲ ಸನ್ನಿಹಿತವಾಗಿದೆಯೇ?

ಇದು ಕಮ್ಯೂನಿಸ್ಟರ ಕುರಿತಂತೆ ಅವರನ್ನು ಕುಹಕವಾಡಿ ಅಪಮಾನಿಸುವ ಪ್ರಶ್ನೆಯಾಗಿದೆ. ಸಿಪಿಐ(ಎಂ) ಪಕ್ಷ ಕಾರ್ಮಿಕ ವರ್ಗದ ಕ್ರಾಂತಿಕಾರಿ ಮುಂದಳವಾಗಿದೆ. ತಕ್ಷಣಕ್ಕೆ ಭಾರತದಲ್ಲಿ ಜನತಾ ಪ್ರಜಾಪ್ರಭುತ್ವ ಕ್ರಾಂತಿಗಾಗಿನ ಕರ್ತವ್ಯ ನಿರ್ವಹಣೆಯಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ಇದು ಮಾತ್ರವೇ ಕಾರ್ಮಿಕ ವರ್ಗದ, ಎಲ್ಲ ಶೋಷಿತರ ವಿಮೋಚನೆಗೆ ಹಾದಿಯನ್ನು ತೆರೆಯಲಿದೆ ಎಂಬ ವೈಜ್ಞಾನಿಕ ಮಾರ್ಕ್ಸ್ ವಾದಿ ತಿಳುವಳಿಕೆಯೊಂದಿಗೆ ಕಾರ್ಯ ನಿರ್ವಹಿಸುತ್ತಿದೆ. ಆದ್ದರಿಂದ ಕಮ್ಯೂನಿಸ್ಟ್ ಕಾರ್ಯ ಈ ಚುನಾವಣೆಯಲ್ಲಿ ಮತಗಳು ಕಡಿಮೆ ಬಂದವೆಂಬ ಕಾರಣಕ್ಕೆ ನಿಂತು ಹೋಗಬಹುದೆಂದು ನಮ್ಮ ವಿರೋಧಿಗಳು ಬಯಸುವುದು ಕೇವಲ ಭ್ರಮೆಯಾಗಿದೆ.

ಸಂಪಾದಕೀಯ

ನಿಷ್ಠುರ ನಡೆ ಇಲ್ಲದ ಕಾಂಗ್ರೆಸ್ ಸರ್ಕಾರ ಎಡಹುವುದೇ?

ಹೊಸ ಜನಾದೇಶದಿಂದ ರಚಿತವಾದ ಕರ್ನಾಟಕ ಸರ್ಕಾರದ ಮುಂದೆ ಜನತೆಯ ಹಲವು ನಿರೀಕ್ಷೆಗಳು, ಭರವಸೆಗಳನ್ನು ಈಡೇರಿಸುವ ಹೊಣೆಗಾರಿಕೆ ಹಾಗೂ ಹಳಿತಪ್ಪಿದ ಆಡಳಿತವನ್ನು ಸರಿದಾರಿಗೆ ತರುವಂತಹ ಹಲವು ಸವಾಲುಗಳು ಇದ್ದವು. ಆರ್ಥಿಕ ಹೊರೆ ನಿರ್ವಹಿಸುವ ಸವಾಲು ಕೆಲವಾದರೆ ರಾಜಕೀಯ, ಸಾಂಸ್ಕೃತಿಕ, ಶೈಕ್ಷಣಿಕ ಸ್ವರೂಪದವು ಇನ್ನು ಕೆಲವು. ಆ ದಿಕ್ಕಿನಲ್ಲಿ ಕೆಲವನ್ನಾದರೂ ಈಡೇರಿಸುವ ಹಾದಿಯಲ್ಲಿ ಕಾಂಗ್ರೆಸ್ ಸರ್ಕಾರ ಹೆಜ್ಜೆ ಇಡುತ್ತಿದೆ. ಆದರೆ ಜಾರಿಯ ಹಾದಿಯಲ್ಲಿ ಹಲವು ಕಠಿಣತರ ಸವಾಲುಗಳೂ ಇರುವ ಅನುಭವವನ್ನು ಒಂದು ರಾಜ್ಯ ಸರ್ಕಾರವಾಗಿ, ಒಂದು ರಾಷ್ಟ್ರೀಯ ಪಕ್ಷವಾಗಿ ಅದು ಹೇಗೆ ಅರ್ಥ ಮಾಡಿಕೊಳ್ಳುತ್ತದೆ ಮತ್ತು ಅವನ್ನು ಹೇಗೆ ಎದುರಿಸಲಿದೆ ಎನ್ನುವುದೇ ಬಹು ಮುಖ್ಯ ಪ್ರಶ್ನೆ.

ಪ್ರಮಾಣ ವಚನ ಪಡೆದು ಅಧಿಕಾರಕ್ಕೆ ಬಂದ ಸರ್ಕಾರದ ಮುಂದೆ ವಿರೋಧ ಪಕ್ಷಗಳು ಹಾಗೂ ಮುಖ್ಯ ಪ್ರವಾಹದ ಮಾಧ್ಯಮಗಳು ಕಾಂಗ್ರೆಸ್ ಪಕ್ಷ ನೀಡಿದ್ದ ಚುನಾವಣಾ ಭರವಸೆಗಳನ್ನು ಈಡೇರಿಸಲಿದೆಯೇ ಎನ್ನುವ ಅನುಮಾನ ಹುಟ್ಟು ಹಾಕಿದವು. ವಿಶೇಷವಾಗಿ, ಬಿಜೆಪಿಯ ದುರಾಡಳಿತ ಕೊನೆಗಾಣಿಸಿದ ಜನತೆ ಜಯದ ಸಂಭ್ರಮ ಅನುಭವಿಸದಂತೆ ತಡೆಯುವ ಅವುಗಳ ರಾಜಕೀಯ ಹುನ್ನಾರವನ್ನು ನಿರಾಕರಿಸುವಂತಿರಲಿಲ್ಲ. ವಿರೋಧ ಪಕ್ಷಗಳಾದ ಬಿಜೆಪಿ, ಜೆಡಿಎಸ್ ಗಳು ಈ ಸರ್ಕಾರ ಐದು ಗ್ಯಾರಂಟಿಗಳನ್ನು ಹೇಗೆ ಈಡೇರಿಸುತ್ತದೆ ಎನ್ನುವುದಕ್ಕೆ ಒತ್ತು ನೀಡಿದ್ದವು. ಈ ಆಗ್ರಹದ ಹಿಂದೆ ಪ್ರಾಮಾಣಿಕ ಕಾಳಜಿಗಿಂತ ಈ ಸರಕಾರ ಸಂಕಷ್ಟಕ್ಕೆ ಸಿಲುಕುವುದನ್ನು ನೋಡಲು ಮತ್ತು ಜನತೆಯನ್ನು ಹಾದಿ ತಪ್ಪಿಸಿ ಎತ್ತಿ ಕಟ್ಟುವ ರಾಜಕೀಯ ಉದ್ದೇಶವೇ ಪ್ರಧಾನವಾಗಿತ್ತು. ಇದಕ್ಕೆದುರಾಗಿ ಸರ್ಕಾರ ತನ್ನ ಭರವಸೆಗಳ ಈಡೇರಿಕೆಗೆ ಕೆಲವು ಸಕಾರಾತ್ಮಕ ಕ್ರಮಗಳನ್ನು ವಹಿಸಿದ್ದು ಕೇವಲ ಟೀಕೆಗಳಿಗೆ ಉತ್ತರವಾಗಿರದೇ ಜನತೆಯ ನಿರೀಕ್ಷೆಗಳಿಗೆ ಸ್ಪಂದಿಸಲೇ ಬೇಕಾದ ಒತ್ತಡವೂ ಕೂಡ ಕಾರಣವಾಗಿದೆ.

ಸಿದ್ದರಾಮಯ್ಯನವರ ಸರ್ಕಾರ ಪೂರೈಸಿದ 50 ದಿನಗಳ ಆಡಳಿತ ವೈಖರಿ ವಿಮರ್ಶೆ ಮಾಡುವುದು ಅದು ಸಾಗುತ್ತಿರುವ ಹಾದಿಯನ್ನು ಅರಿಯಲು ಮತ್ತು ಎಚ್ಚರಿಸಲು ಅಗತ್ಯ ಎನಿಸುತ್ತದೆ. ಐದು ಗ್ಯಾರೆಂಟಿಗಳ ಈಡೇರಿಕೆಯೂ ಯಶಸ್ವಿಯಾಗದಂತೆ ತಡೆಯಲೇ ಬೇಕೆನ್ನುವ ರಾಜಕೀಯ ಉದ್ದೇಶವನ್ನು ಬಿಜೆಪಿ ಹೊಂದಿರುವುದು ನಿಚ್ಚಳ. ಹೀಗಾಗಿ ಪ್ರಧಾನಮಂತ್ರಿಗಳಿಂದ ಹಿಡಿದು, ಪ್ರಧಾನಿಗಳ ಆರ್ಥಿಕ ಸಲಹೆಗಾರರು ಎನ್ನುವ ಸಂಘ ಪರಿವಾರದ ಚಿಂತಕರಿಂದಲೂ ಈ ಗ್ಯಾರೆಂಟಿಗಳನ್ನು ಈಡೇರಿಸಿದರೆ ಆರ್ಥಿಕ ದಿವಾಳಿ ಖಚಿತ ಎನ್ನುವ ವಾದವನ್ನು ಪ್ರತಿಪಾದಿಸುತ್ತಿರುವುದು ಬಿಜೆಪಿ ಎಷ್ಟು ಗಂಭೀರವಾಗಿ ವಿಷಯವನ್ನು ತೆಗೆದುಕೊಂಡಿದೆ ಎನ್ನುವುದನ್ನು ಸೂಚಿಸುತ್ತದೆ. ಮಾತ್ರವಲ್ಲ, ಆಹಾರ ಧಾನ್ಯಗಳ ಪೂರೈಕೆಯಂತಹ ವಿಷಯದಲ್ಲಿ ಅಮಾನವೀಯವಾದ ಕ್ರಮಗಳನ್ನು ಕೈಗೊಳ್ಳಲು ಅದು ಹಿಂಜರಿದಿಲ್ಲ.

ಇನ್ನೊಂದು ಮಗ್ಗುಲಲ್ಲಿ ಸಿದ್ದರಾಮಯ್ಯನವರ ಸರ್ಕಾರ ಸುಮಾರು 60,000 ಕೋಟಿ ರೂ.ಗಳ ಮೊತ್ತದ ಈ ಹಣಕಾಸಿನ ಹೊರೆಯನ್ನು ಹೇಗೆ ನಿರ್ವಹಿಸಲಿದೆ ಎನ್ನುವುದು ವಾಸ್ತವದ ಮುಖ್ಯ ಪ್ರಶ್ನೆ. ಆಸ್ತಿ ತೆರಿಗೆಗಳಲ್ಲಿ ಹೆಚ್ಚಳ, ಅಬಕಾರಿ ಕ್ಷೇತ್ರದಿಂದ ಆದಾಯದ ಗಳಿಕೆ, ಆಡಳಿತ ವೆಚ್ಚದ ಕಡಿತ ಎನ್ನುವುದು ಕೂಡ ಮತ್ತೆ ಜನತೆಯ ಮೇಲೆ ನಡೆಯುವ ಪ್ರಹಾರ ಆಗಬಲ್ಲವು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆಂದು ಮೀಸಲಾಗಿರಿಸಿದ ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಹಾಗೂ ಇತರೆ ಅಭಿವೃದ್ಧಿ ಯೋಜನೆಗಳ ಹಣದ ಕಡಿತ, ಆರೋಗ್ಯದಂತಹ ಕೆಲವು ರಂಗಗಳ ಅಭಿವೃದ್ಧಿಗೆ ಅದರ ಬಳಕೆಗೆ ಯೋಚಿಸುತ್ತಿರುವುದು ಮತ್ತೊಂದು ಜನವಿರೋಧಿ ಅಂಶ. ಹಿಂದಿನ ಸರ್ಕಾರದ ಅವಧಿಯಲ್ಲಿ ವಿದ್ಯುತ್ ಪ್ರಾಧಿಕಾರ ಮಾಡಿದ್ದ ಶಿಫಾರಸ್ಸಾದರೂ ಈ ಸರ್ಕಾರ ಆಕ್ಷೇಪವೇ ಇಲ್ಲದೇ ಜಾರಿಗೆ ತರಲು ಹೊರಟಿರುವುದು ಜನತೆಗೆ ಮತ್ತು ಕೈಗಾರಿಕೋದ್ಯಮಕ್ಕೆ ಒಂದು ಹೊಡೆತ. ಈಗಾಗಲೇ ಕೈಗಾರಿಕೋದ್ಯಮಿಗಳು ತೀವ್ರ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಇಂತಹ ಆರ್ಥಿಕ ಸಂಕಷ್ಟಗಳ ಹೊರೆಗಳನ್ನು ಜನತೆಯ ಹೆಗಲಿಗೆ ದಾಟಿಸದೇ ಇರಬೇಕೆಂದರೆ ಅದು ಅನುಸರಿಸುತ್ತಿರುವ ಉದಾರೀಕರಣ, ಜಾಗತೀಕರಣದ ಆರ್ಥಿಕ ನೀತಿಗಳ ಚೌಕಟ್ಟಿನಿಂದ ಹೊರಬರಬೇಕು. ಹೊರ ಸಾಲಗಳನ್ನು ತಂದು ನಿಭಾಯಿಸುವ ಛಾಳಿಯನ್ನು ಕೈಬಿಡಬೇಕು. ಅದು ಸಾಧ್ಯವಾಗ ಬೇಕೆಂದರೆ ಕೇಂದ್ರದ ಎದುರು ರಾಜ್ಯದ ಆರ್ಥಿಕ ಹಕ್ಕಿಗಾಗಿ ಪ್ರಬಲ ಹೋರಾಟವನ್ನು ಸಾರಬೇಕು. ಇಂಥ ತೀರ್ಮಾನವನ್ನು, ಅದಕ್ಕೆ ಬೇಕಾಗುವ ಪರ್ಯಾಯ ಕ್ರಮಗಳನ್ನು ಕಾಂಗ್ರೆಸ್ ಸರ್ಕಾರ ಕೈಗೊಳ್ಳುವುದೇ ಎನ್ನುವುದು ಬಹು ಮುಖ್ಯ ಪ್ರಶ್ನೆ. ಕೃಷಿ ಕಾಯ್ದೆಗಳ ತಿದ್ದುಪಡಿ, ಎಪಿಎಂಸಿ ಕಾಯ್ದೆ ತಿದ್ದುಪಡಿಗಳ ರದ್ದತಿ ಸ್ವಾಗತಾರ್ಹ. ಆದರೆ ಕಾರ್ಷಿಕ ಬಿಕ್ಕಟ್ಟಿನ ಇತರೆ ಪರಿಣಾಮಗಳನ್ನು ಹೇಗೆ ಎದುರಿಸಲಾಗುತ್ತದೆ ಎನ್ನುವುದು ಕೂಡ ಅಷ್ಟೇ ಮುಖ್ಯ ಪ್ರಶ್ನೆ.

ಬಿಜೆಪಿಯ ಅತಿ ಕಡು ಭ್ರಷ್ಟ, ದುರಾಡಳಿತ ಮತ್ತು ಹಿಂದುತ್ವದ ಕೋಮುವಾದಿ ದ್ವೇಷದ ರಾಜಕಾರಣ, ಜನತೆಯ ನಡುವೆ ಆಳವಾಗಿ ಬೇರೂರಿಸಲು ಅದು ನಡೆಸಿದ ಪ್ರಯತ್ನಗಳು ಮತ್ತು ವಿವಿಧ ರೀತಿಯ ಧಾಳಿಗಳ ಎದುರಿನಲ್ಲಿ ಜನತೆ ಕಾಂಗ್ರೆಸಿಗೆ ಬೆಂಬಲಿಸಿದ್ದಾರೆ ಎನ್ನುವ ವಾಸ್ತವವನ್ನು ಅದು ಅರಿತಿದೆ ಎನ್ನುವುದು ನಿಜ. ಬಿಜೆಪಿ ಆಡಳಿತದ ಅವಧಿಯಲ್ಲಿ ನಡೆಸಲಾದ ವಿಕೃತಿಗಳು ಮತ್ತು ಸಂವಿಧಾನ ವಿರೋಧಿ ಕೃತ್ಯಗಳು, ಜನ ವಿಭಜಕ ಕ್ರಮಗಳನ್ನು ಸಂಪೂರ್ಣವಾಗಿ ಬದಲಾಯಿಸುವ ಬಹುದೊಡ್ಡ ಸವಾಲು ಈ ಸರ್ಕಾರದ ಮುಂದಿದೆ. ಆ ದೆಸೆಯಲ್ಲಿ ಹಲವು ಕ್ರಮಗಳ ಮೂಲಕ ಭರವಸೆಯ ವಾತಾವರಣವನ್ನು ಜನತೆಯಲ್ಲಿ ವಿಶೇಷವಾಗಿ ಅಲ್ಪಸಂಖ್ಯಾತರು, ಸಾಮಾಜಿಕವಾಗಿ ದಮನಕ್ಕೊಳಗಾದ ವಿಭಾಗಗಳ ನಡುವಿನಲ್ಲಿ ನೀಡಿದೆ. ಕೋಮು ದ್ವೇಷವನ್ನು ಹಬ್ಬಿಸುವ ಸಮಾಜಘಾತುಕ ಶಕ್ತಿಗಳ ದಮನದ ಎಚ್ಚರಿಕೆ ನೀಡಲಾಗಿದೆ. ಬಿಜೆಪಿ ಅವಧಿಯಲ್ಲಿ ತರಲಾದ ಮತಾಂತರ ನಿಷೇಧ ಕಾಯ್ದೆಯ ತಿದ್ದುಪಡಿಗಳನ್ನು ಹಿಂಪಡೆಯಲಾಗುವುದು ಎಂದಿದೆ. ಆದರೆ ಜಾನುವಾರು ಹತ್ಯೆ ನಿಷೇಧ ಮತ್ತು ಸಂರಕ್ಷಣೆಯ ಕಾಯ್ದೆಯ ತಿದ್ದುಪಡಿಗಳನ್ನು ರದ್ದುಪಡಿಸಲಾಗುವುದು ಎಂದು ಹೇಳಲಾಗಿದ್ದರೂ ತಕ್ಷಣದಲ್ಲಿ ಅಂತಹ ಕ್ರಮಗಳನ್ನು ಕೈಗೊಳ್ಳದೇ ವಿಳಂಬಿಸುವ ಸೂಚನೆ ನೀಡಿದೆ. ಕೋಮು ದ್ವೇಷದಲ್ಲಾದ ವ್ಯಕ್ತಿಗತ ಹತ್ಯೆಗಳ ಭಾದಿತವಾದ ಕುಟುಂಬಗಳಿಗೆ ಪರಿಹಾರ ಒದಗಿಸಿ ಸಮತೋಲನ ಮಾಡುವ ಕ್ರಮ ಕೈಗೊಳ್ಳಲಾಗಿದೆ ಎನ್ನಲಾದರೂ ಕಾನೂನಾತ್ಮಕ ಮತ್ತು ಚಾಲ್ತಿಯಲ್ಲಿರುವ ನಿಯಮಗಳ ಚೌಕಟ್ಟಿನಾಚೆಗೆ ವ್ಯವಹರಿಸಿದ್ದು ಸರಿಯೇ ಎನ್ನುವ ಪ್ರಶ್ನೆಯೂ ಹಲವರಿಂದ ಕೇಳಲ್ಪಟ್ಟಿದೆ. ಈಗ ಉಗ್ರ ಹಿಂದುತ್ವದ ಶಕ್ತಿಗಳನ್ನು ಅದರ ಕೋಮುವಾದದ ದಾಳಿಗಳನ್ನು ಮಟ್ಟ ಹಾಕುವ ಮಾತನಾಡುತ್ತಿರುವಾಗ ಮತ್ತು ಕೆಲವು ಸಕಾರಾತ್ಮಕ ಕ್ರಮಗಳನ್ನು ಕೈಗೊಳ್ಳುವಾಗಲೇ ಇನ್ನೊಂದು ಬದಿಯಲ್ಲಿ ಅಂತಹ ಶಕ್ತಿಗಳ ಜೊತೆಗೆ ರಾಜಿ ಸಂಧಾನದ ಅನ್ವಯ ಹಿಂದುತ್ವದ' ಹಳೆಯ ಮನೋಭಾವವನ್ನು ಅದು ಪ್ರಕಟಿಸಿದೆ. ಗೃಹ ಸಚಿವ ಪರಮೇಶ್ವರರವರಿಂದ ಉಡುಪಿ, ಮಠಾಧೀಶರ ಭೇಟಿ, ಬಜರಂಗದಳ ನಿಷೇಧಿಸುವುದಿಲ್ಲ ಎನ್ನುವ ಭರವಸೆಗಳು, ವಿಧಾನ ಸಭಾಧ್ಯಕ್ಷರು ಶಾಸಕರಿಗೆ ಸಂಘ ಪರಿವಾರದ ಧಾರ್ಮಿಕ ಪ್ರಮುಖರ ಪ್ರವಚನಗಳನ್ನು ಏರ್ಪಡಿಸಿದ್ದು, ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರ ಸಂಸ್ಕೃತ ಪ್ರೇಮ ಮತ್ತು ಮಹಿಳೆಯರ ಬಗ್ಗೆ ಮನುಸ್ಮೃತಿಯ ಪಾಳೇಗಾರಿ ಮೌಲ್ಯಗಳ ಪ್ರತಿಪಾದನೆ ಹಲವು ಅಪಾಯಗಳ ಮುನ್ಸೂಚನೆ ನೀಡುತ್ತಿವೆ.

ಆಡಳಿತಾತ್ಮಕವಾಗಿಯೂ ಇನ್ನೂ ಆಯಕಟ್ಟಿನ ಪ್ರಮುಖ ಸ್ಥಾನಗಳಲ್ಲಿ ಈ ಹಿಂದೆ ಬಿಜೆಪಿ ಸರ್ಕಾರ ನೇಮಿಸಿದ್ದ ಅಧಿಕಾರಿಗಳೇ ಮುಂದುವರೆದಿದ್ದಾರೆ. ಅಲ್ಲಿ ಸೂಕ್ತ ಬದಲಾವಣೆ ತಕ್ಷಣದ ಅವಶ್ಯಕತೆಯಾಗಿದೆ. ಈ ನಡುವಿನಲ್ಲಿ ವರ್ಗಾವಣೆಯ ವಿಷಯದಲ್ಲಿ ಹಣಕಾಸಿನ ವ್ಯವಹಾರದ ಟೀಕೆಗಳು ಕೇಳಿ ಬಂದಿವೆ. ರಾಜ್ಯದ ಸರಕಾರಿ ಕಚೇರಿಗಳಲ್ಲಿನ ಶೇಕಡ 40ರ ಪರ್ಸೆಂಟೇಜ್ ನ ಭ್ರಷ್ಟಾಚಾರ ವಹಿವಾಟಿನಂತಹ ಈ ಅನಾರೋಗ್ಯಕರ ಪ್ರವೃತ್ತಿ ಬದಲಾದಂತೆ ಕಾಣುತ್ತಿಲ್ಲ. ಕಚೇರಿಗಳಲ್ಲಿನ ನಿತ್ಯ ವ್ಯವಹಾರಗಳ ದಿನ ನಿತ್ಯದ ಭ್ರಷ್ಟಾಚಾರ, ಲಂಚಗುಳಿತನವನ್ನು ತಡೆಯದೆ ಹೋದಲ್ಲಿ ಜನತೆ ಬಹುಬೇಗ ಭ್ರಮನಿರಸನ ಗೊಳ್ಳುವರು. ಇಂತಹ ಒಟ್ಟು ಪರಿಸ್ಥಿತಿಗಳು ಸೃಷ್ಟಿಸಬಹುದಾದ ಅತೃಪ್ತಿ ಮತ್ತು ಅದನ್ನ ಬಿಜೆಪಿ ಬಳಸುವ ಅಪಾಯಗಳನ್ನು ಲಕ್ಷದಲ್ಲಿರಿಸಿ ಕಾಂಗ್ರೆಸ್ ಸರ್ಕಾರ ಹೆಜ್ಜೆ ಇಡಬೇಕಿದೆ. ಆದರೆ ಈ ಐವತ್ತು ದಿನಗಳ ಆಡಳಿತದಲ್ಲಿ ಕೆಲವು ಸರಿ ಹೆಜ್ಜೆ ಇಡಬಹುದು ಎನ್ನುವ ಸಕಾರಾತ್ಮಕ ನಿರೀಕ್ಷೆಗಳು ಇರುವಾಗಲೇ ಎಡಹುವ ಅಪಾಯವು ಇದೆ. ಬಿಜೆಪಿಯನ್ನು ಎದುರಿಸಬೇಕು ಎನ್ನುವಾಗ ಎಲ್ಲಾ ಆಯಾಮಗಳಲ್ಲಿ ಎಚ್ಚರ ಅಗತ್ಯ.

ಪತಿ–ಪತ್ನಿ ಗಳಿಸಿದ ಎಲ್ಲಾ ಆಸ್ತಿಗಳಲ್ಲಿ ಪತ್ನಿಗೆ ಸಮಾನ ಹಕ್ಕಿದೆ–ಮದ್ರಾಸ್ ಹೈಕೋರ್ಟಿನ ತೀರ್ಪು: ಎಐಡಿಡಬ್ಲ್ಯುಎ ಸ್ವಾಗತ

“ಈಗಲಾದರೂ ಪತ್ನಿಗೆ ಸಮಾನ ಹಕ್ಕು ಕೊಡುವ ಕಾನೂನು ತರಬೇಕು”

ಪತಿ ಹೊರಗೆ ಗಳಿಸುವ ಸಮಯದಲ್ಲಿ, ಮನೆಯಲ್ಲೇ ಉಳಿದು ಕುಟುಂಬಕ್ಕಾಗಿ ದುಡಿಯುವ, ಅದಕ್ಕಾಗಿ ತನ್ನ ಉದ್ಯೋಗಾವಕಾಶಗಳನ್ನು ತ್ಯಾಗ ಮಾಡುವ ಗೃಹಿಣಿಯೊಬ್ಬಳು ಅವರು ಗಳಿಸಿರುವ ಎಲ್ಲಾ ಆಸ್ತಿಗಳ 50% ಕ್ಕೆ ಅರ್ಹರಾಗಿರುತ್ತಾಳೆ ಎಂದು ಮದ್ರಾಸ್ ಹೈಕೋರ್ಟ್‌ನ ನ್ಯಾಯಮೂರ್ತಿ ಕೃಷ್ಣನ್ ರಾಮಸಾಮಿ ನೀಡಿರುವ ತೀರ್ಪು ಒಂದು ಹೊಸ ಹಾದಿ ತುಳಿದಿದೆ ಎಂದು ಆ ತೀರ್ಪನ್ನು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘ (ಎಐಡಿಡಬ್ಲ್ಯುಎ) ಸ್ವಾಗತಿಸಿದೆ. ಗೃಹಿಣಿಯಾಗಿ ಹೆಂಡತಿಯ ಕೊಡುಗೆಯು ಕೆಲಸಕ್ಕೆ ಹೋಗುವ ಗಂಡನ ಕೊಡುಗೆಯಷ್ಟೇ ಮೌಲ್ಯಯುತವಾಗಿದೆ ಎಂಬುದನ್ನು ಈ ತೀರ್ಪು ಗುರುತಿಸುತ್ತದೆ ಎಂದು ಎಐಡಿಡಬ್ಲ್ಯುಎ ಹೇಳಿದೆ.

ಈ ನಿರ್ದಿಷ್ಟ ಪ್ರಕರಣದಲ್ಲಿ, ಪತಿ 1983 ರಿಂದ 1994 ರವರೆಗೆ ಅಬುಧಾಬಿಯಲ್ಲಿ ಕೆಲಸ ಮಾಡಲು ಭಾರತವನ್ನು ತೊರೆದಾಗ ಹೆಂಡತಿ ಕುಟುಂಬ ಮತ್ತು ಮೂವರು ಚಿಕ್ಕ ಮಕ್ಕಳನ್ನು ನೋಡಿಕೊಂಡಳು. ಈ ಅವಧಿಯಲ್ಲಿ, ಆಕೆ ಟ್ಯೂಟರ್ ಮತ್ತು ಟೈಲರ್ ಆಗಿ ಕೆಲಸ ಮಾಡುವುದನ್ನು ನಿಲ್ಲಿಸಿದಳು, ಮಾತ್ರವಲ್ಲ, ಕುಟುಂಬದ ವ್ಯವಹಾರಗಳನ್ನು ನೋಡಿಕೊಳ್ಳಲು ಮತ್ತು ನಿರ್ವಹಿಸಲು ಮತ್ತು ಮಕ್ಕಳ ಪಾಲನೆಗೆ ಮನೆಯಲ್ಲಿಯೇ ಉಳಿದಳು. ಖಾತೆಗಳನ್ನು ಮತ್ತು ಉಳಿತಾಯವನ್ನು ಕೌಶಲ್ಯದಿಂದ ನಿರ್ವಹಿಸುವ ಮೂಲಕ ಆಕೆ ತನ್ನ ಹೆಸರಿನಲ್ಲಿ ಮೂರು ಆಸ್ತಿಗಳನ್ನು ಮತ್ತು ತನ್ನ ಆಭರಣಗಳನ್ನು ಗಿರವಿ ಇಟ್ಟು ಮತ್ತೊಂದು ಆಸ್ತಿಯನ್ನು ಖರೀದಿಸಿದಳು. ಪತಿ ಆಕೆಗೆ ಉಡುಗೊರೆಯಾಗಿ ನೀಡುತ್ತಿದ್ದ ಆಭರಣಗಳು ಮತ್ತು ಸೀರೆಗಳು ಮತ್ತು ಇತರ ಚರ ಆಸ್ತಿಗಳನ್ನು ಅವಳು ತನ್ನ ಲಾಕರ್‌ನಲ್ಲಿ ಇರಿಸಿದ್ದಳು. ಪತಿ ಹಿಂತಿರುಗಿದಾಗ, ಈ ಆಸ್ತಿಗಳನ್ನೆಲ್ಲ ವಹಿಸಿಕೊಂಡು, ಅವು ವಾಸ್ತವವಾಗಿ ತನಗೆ ಸೇರಿದ್ದು, ಏಕೆಂದರೆ, ಆಕೆಗೆ ಸ್ವಂತ ಗಳಿಕೆಯಿಲ್ಲ, ತನ್ನ ಏಜೆಂಟಳಾಗಿ ಆಕೆ ಅವನ್ನು ಖರೀದಿಸಿದ್ದಾಳೆ ಎಂದು ದಾವೆ ಹೂಡಿದನು. ವ್ಯಾಜ್ಯದ ವಿಚಾರಣೆಯ ನಡುವೆಯ್ಲೇ ಪತಿ ನಿಧನಗೊಂಡಾಗ, ಆಕೆಯ ಇಬ್ಬರು ಪುತ್ರರು ಆಕೆಯ ವಿರುದ್ಧದ ಈ ಮೊಕದ್ದಮೆಯಲ್ಲಿ ಫಿರ್ಯಾದಿಗಳಾದರು.

ಈ ಆಸ್ತಿಗಳ ಖರೀದಿಗೆ ಯಾರ ಹಣ ನೀಡಲಾಗಿದೆ ಎಂಬುದು ಮುಖ್ಯವಲ್ಲ ಮತ್ತು ಪತಿಗೆ ಸಮಾನವಾಗಿ ಆಸ್ತಿಗೆ ಪತ್ನಿಯೂ ಅರ್ಹಳು ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿತು. ಹೆಂಡತಿ ಗೃಹಿಣಿಯಾಗಿ ಯಾವುದೇ ನೇರ ಆರ್ಥಿಕ ಕೊಡುಗೆ ನೀಡದಿದ್ದರೂ, ಮಕ್ಕಳನ್ನು ನೋಡಿಕೊಳ್ಳುವುದು, ಅಡುಗೆ ಮಾಡುವುದು, ಶುಚಿಗೊಳಿಸುವುದು ಮತ್ತು ದೈನಂದಿನ ವ್ಯವಹಾರಗಳನ್ನು ನಿರ್ವಹಿಸುವ ಮೂಲಕ ಮನೆಕೆಲಸಗಳನ್ನು ನಿರ್ವಹಿಸುವಲ್ಲಿ ಆಕೆ ಪ್ರಮುಖ ಪಾತ್ರ ವಹಿಸಿದ್ದಾಳೆ. ವಿದೇಶದಲ್ಲಿದ್ದ ಫಿರ್ಯಾದಿಗೆ ಯಾವುದೇ ಅನಾನುಕೂಲತೆಯನ್ನುಂಟು ಮಾಡದೆ, ಕುಟುಂಬವನ್ನು ನೋಡಿಕೊಂಡಿದ್ದಾಳೆ ಮತ್ತು ಮೇಲಾಗಿ, ಅವಳು ತನ್ನ ಕನಸುಗಳನ್ನು ತ್ಯಾಗ ಮಾಡಿದ್ದಾಳೆ ಮತ್ತು ತನ್ನ ಇಡೀ ಜೀವನವನ್ನು ಕುಟುಂಬ ಮತ್ತು ಮಕ್ಕಳಿಗಾಗಿ ಕಳೆದಿದ್ದಾಳೆ ಎಂದ ನ್ಯಾಯಾಲಯ, "ಗಂಡ ಮತ್ತು ಹೆಂಡತಿಯನ್ನು ಕುಟುಂಬದ ಬಂಡಿಯ ಎರಡು ಚಕ್ರಗಳಂತೆ ಪರಿಗಣಿಸಿದಾಗ, ಪತಿ ಸಂಪಾದಿಸುವ ಮೂಲಕ ಅಥವಾ ಹೆಂಡತಿ ಕುಟುಂಬ ಮತ್ತು ಮಕ್ಕಳ ಸೇವೆ ಮಾಡುವ ಮೂಲಕ ಮತ್ತು ನೋಡಿಕೊಳ್ಳುವ ಮೂಲಕ ನೀಡಿದ ಕೊಡುಗೆ ಎರಡೂ ಕುಟುಂಬದ ಕಲ್ಯಾಣಕ್ಕಾಗಿ, ಇಬ್ಬರೂ ತಮ್ಮ ಜಂಟಿ ಪ್ರಯತ್ನದಿಂದ ಗಳಿಸಿದ್ದಕ್ಕೆ ಸಮಾನವಾಗಿ ಅರ್ಹರಾಗಿರುತ್ತಾರೆ. ಅದರ ಫಲಗಳು ಜಂಟಿಯಾಗಿ ಅವರಿಬ್ಬರಿಗೂ ಸೇರಿದ್ದು, ಆಸ್ತಿಯನ್ನು ಗಂಡ ಅಥವಾ ಹೆಂಡತಿಯ ಹೆಸರಿನಲ್ಲಿ ಮಾತ್ರ ಖರೀದಿಸಿರಬಹುದು, ಅದೇನೇ ಇದ್ದರೂ ಅದನ್ನು ಅವರ ಜಂಟಿ ಪ್ರಯತ್ನಗಳಿಂದ ಉಳಿಸಿದ ಹಣದಿಂದ ಖರೀದಿಸಲಾಗಿದೆ ಎಂದು ತೀರ್ಪಿನಲ್ಲಿ ಹೇಳಿದೆ.

“ಮಕ್ಕಳನ್ನು ಪೋಷಿಸುವುದು, ಆಹಾರವನ್ನು ತಯಾರಿಸುವುದು, ಶಾಲೆಗೆ ಕರೆದೊಯ್ಯುವುದು, ಅವರ ಅಗತ್ಯಗಳನ್ನು ನೋಡುವುದು ಮತ್ತು ಅವರ ಆರೋಗ್ಯ, ಮನೆಕೆಲಸ ಇತ್ಯಾದಿಗಳನ್ನು ನೋಡಿಕೊಳ್ಳುವ ಮೂಲಕ ಹೆಂಡತಿಯು ಕುಟುಂಬಕ್ಕೆ 24 ಗಂಟೆಗಳ ಕಾಲ ನಿರಂತರ ಸೇವೆ ಸಲ್ಲಿಸಿದ್ದಾಳೆ. ಇದರ ತೂಕ ವಿದೇಶದಲ್ಲಿ ಫಿರ್ಯಾದಿ/ಪತಿಯ ಹಣ ಗಳಿಕೆಗಿಂತ ಕಡಿಮೆಯದ್ದೇನಲ್ಲ" ಎಂದಿರುವ ತೀರ್ಪು ಪತ್ನಿ ತನ್ನ ಚಿನ್ನಾಭರಣಗಳನ್ನು ಒತ್ತೆ ಇಟ್ಟು ಖರೀದಿಸಿದ ಆಸ್ತಿಯು, ಆಕೆಗೆ ಉಡುಗೊರೆಯಾಗಿ ನೀಡಿದ ಆಭರಣಗಳು ಮತ್ತು ಚರ ವಸ್ತುಗಳಂತೆ ಆಕೆಗೆ ಮಾತ್ರ ಸೇರಿದ್ದು ಎಂದೂ ಹೇಳಿದೆ.

ಕುಟುಂಬಕ್ಕೆ ಹೆಂಡತಿ/ಜತೆಗಾರ್ತಿಯ ಸಮಾನ ಕೊಡುಗೆಯನ್ನು ಗುರುತಿಸುವ ಮತ್ತು ಮದುವೆ ಊರ್ಜಿತದಲ್ಲಿರುವಾಗ ಗಳಿಸಿದ ಎಲ್ಲ ಸೊತ್ತುಗಳಲ್ಲಿ ಆಕೆಗೆ ಸಮಾನ ಹಕ್ಕನ್ನು ಕೊಡುವ ಒಂದು ಕಾನೂನನ್ನು ತರಬೇಕು ಎಂದು ಎಐಡಿಡಬ್ಲ್ಯುಎ ಕಳೆದ 15 ವರ್ಷಗಳಿಂದ ಸತತವಾಗಿ ಸರ್ಕಾರಗಳಿಗೆ ಅರ್ಜಿ ಮನವಿ ಸಲ್ಲಿಸುತ್ತ ಬಂದಿದೆ. ಮಹಿಳೆಯರಿಗೆ ಮನೆಯಲ್ಲಿ ನ್ಯಾಯ ಸಿಗುವಂತೆ ಮಾಡಲು ಇಂತಹ ಕಾನೂನು ಜಾರಿಗೆ ತರಬೇಕೆಂದು ಈಗ ಮತ್ತೊಮ್ಮೆ ಆಗ್ರಹಿಸುವುದಾಗಿ ಅದು ಹೇಳಿದೆ.



ಜನರ ಹಣದ ಲೂಟಿಯನ್ನು ಕಾನೂನು ಬದ್ಧಗೊಳಿಸುವ ಕ್ರಮ

ಮಣಿಪುರ: ಪರಿಸ್ಥಿತಿ ನಿರ್ವಹಿಸುವಲ್ಲಿ ಅಸಮರ್ಥತೆ


– ಸಿಪಿಐ(ಎಂ) ಪೊಲಿಟ್ ಬ್ಯೂರೋ ವಿಶ್ಲೇಷಣೆ

ಜೂನ್ 23 ರಂದು ಬಿಹಾರ ಸಿಎಂ ನಿತೀಶ್ ಕುಮಾರ್ ಅವರ ಆಹ್ವಾನದ ಮೇರೆಗೆ 15 ವಿರೋಧ ಪಕ್ಷಗಳು ಪಾಟ್ನಾದಲ್ಲಿ ಸಭೆ ಸೇರಿದ್ದವು. ನಮ್ಮ ಗಣರಾಜ್ಯದ ಜಾತ್ಯತೀತ ಪ್ರಜಾಸತ್ತಾತ್ಮಕ ಸ್ವರೂಪವನ್ನು ಮತ್ತು ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳು ಮತ್ತು ಮೂಲಭೂತ ಹಕ್ಕುಗಳ ಕುರಿತು ಜನರಿಗೆ ನಮ್ಮ ಸಂವಿಧಾನವು ಒದಗಿಸಿರುವ ಖಾತರಿಗಳನ್ನು ಕಾಪಾಡಿಕೊಳ್ಳಲು ಒಟ್ಟಾಗಿ ಕೆಲಸ ಮಾಡಬೇಕು ಎಂಬ ಬಗ್ಗೆ ಒಮ್ಮತ ಆ ಸಭೆಯಲ್ಲಿ ವ್ಯಕ್ತಗೊಂಡಿತು. ಮೋದಿ ಸರಕಾರದಿಂದ ಈ ಹಕ್ಕುಗಳ ಮೇಲೆ ದಾಳಿಗಳು ನಡೆಯುತ್ತಿರುವುದರಿಂದ ಬಿಜೆಪಿಯನ್ನು ಸರಕಾರದಿಂದ ಮತ್ತು ಪ್ರಭುತ್ವದ ಅಧಿಕಾರದಿಂದ ದೂರ ಮಾಡುವುದು ಹೇಗೆ ಎಂದು ಯೋಚಿಸಬೇಕು. ಈ ಉದ್ದೇಶದಿಂದ ಪರಸ್ಪರ ಸಹಕರಿಸಬೇಕು ಎಂದು ಈ 15 ಪಕ್ಷಗಳು ಅಭಿಪ್ರಾಯ ಪಟ್ಟವು. ಈ ಸಹಕಾರ ಹೇಗಿರಬೇಕು ಎಂಬ ಬಗ್ಗೆ ವಿಚಾರ-ವಿಮರ್ಶೆಗಳನ್ನು ಮುಂದುವರೆಸಲು ನಿರ್ಧರಿಸಲಾಯಿತು. ಈ ನಿಟ್ಟಿನಲ್ಲಿ ಜುಲೈ ಮಧ್ಯಭಾಗದಲ್ಲಿ ಶಿಮ್ಲಾದಲ್ಲಿ ಮತ್ತೆ ಸಭೆ ಸೇರಲು ನಿರ್ಧರಿಸಲಾಗಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಯೆಚುರಿ ಹೇಳಿದ್ದಾರೆ. ಅವರು ಜೂನ್ 2-25ರಂದು ನಡೆದ ಪಕ್ಷದ ಪೊಲಿಟ್‌ಬ್ಯುರೊ ಸಭೆಯ ನಂತರ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುತ್ತ ಹೀಗೆ ಹೇಳಿದರು.

ಸಿಪಿಐ(ಎಂ) ಪೊಲಿಟ್‌ಬ್ಯೂರೋ ಮಣಿಪುರದ ಜನಾಂಗೀಯ ಹಿಂಸಾಚಾರದ ಪರಿಸ್ಥಿತಿ, ಪ್ರಧಾನಿಗಳ ಅಮೆರಿಕಾ ಭೇಟಿ, ಏಕರೂಪ ನಾಗರಿಕ ಸಂಹಿತೆ ಮುಂತಾದ ರಾಷ್ಟ್ರೀಯ ಮಹತ್ವದ ಪ್ರಶ್ನೆಗಳ ಬಗ್ಗೆ ಚರ್ಚೆ ನಡೆಸಿತು.

ಸಭೆಯ ನಂತರ ನೀಡಲಾದ ಹೇಳಿಕೆಯ ಪೂರ್ಣ ಪಾಠವನ್ನು ಈ ಮುಂದೆ ಕೊಡಲಾಗಿದೆ.

ಜನರ ಹಣದ ಲೂಟಿಯನ್ನು ಕಾನೂನುಬದ್ಧಗೊಳಿಸುವ ಕ್ರಮ



ದೊಡ್ಡ ಮೊತ್ತದ ಬ್ಯಾಂಕ್ ಸಾಲಗಳನ್ನು ಪಡೆದಿರುವ ಮತ್ತು ಪಾವತಿಸುವ ಸಾಮರ್ಥ್ಯವಿದ್ದರೂ ಮರುಪಾವತಿ ಮಾಡಲು ನಿರಾಕರಿಸುವ ಉದ್ದೇಶಪೂರ್ವಕ ಸುಸ್ತಿದಾರರಿಂದ ಜನರ ಉಳಿತಾಯದ ಲೂಟಿಯನ್ನು ಕಾನೂನುಬದ್ಧಗೊಳಿಸುವ ಆರ್‌ಬಿಐ ಸುತ್ತೋಲೆಯನ್ನು ಹಿಂಪಡೆಯಬೇಕು ಎಂದು ಪೊಲಿಟ್ ಬ್ಯುರೊ ಒತ್ತಾಯಿಸಿದೆ. ಆರ್‌ಬಿಐ ಸುತ್ತೋಲೆಯು ಅಂತಹ ಸುಸ್ತಿದಾರರಿಗೆ ಬ್ಯಾಂಕ್‌ಗಳೊಂದಿಗೆ ರಾಜಿ ಇತ್ಯರ್ಥಕ್ಕೆ ಹೋಗಲು ಅನುಮತಿ ನೀಡುತ್ತದೆ. ಅಂತಹವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಮತ್ತು ಬ್ಯಾಂಕ್ ಸಾಲವನ್ನು ಪೂರ್ಣ ಪ್ರಮಾಣದಲ್ಲಿ ವಸೂಲಿ ಮಾಡಬೇಕು ಎಂದು ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಮಣಿಪುರ

ಮೇ 3 ರಂದು ಪ್ರಾರಂಭವಾದ ಮಣಿಪುರದ ಜನಾಂಗೀಯ ಹಿಂಸಾಚಾರ 7 ವಾರಗಳ ನಂತರವೂ ಮುಂದುವರೆಯುತ್ತಿರುವ ಬಗ್ಗೆ ಪೊಲಿಟ್‌ಬ್ಯುರೊ ತೀವ್ರ ಕಳವಳ ವ್ಯಕ್ತಪಡಿಸಿದೆ.

"ಡಬಲ್ ಇಂಜಿನ್" ಬಿಜೆಪಿ ಸರ್ಕಾರವು ಪರಿಸ್ಥಿತಿಯನ್ನು ನಿಯಂತ್ರಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಪರಿಸ್ಥಿತಿಯ ಬಗ್ಗೆ ಪ್ರತಿಕ್ರಿಯಿಸಲು ಸಹ ಪ್ರಧಾನಿ ಮೋದಿ ನಿರಾಕರಿಸಿದರು! ಹಿಂಸಾಚಾರ ಆರಂಭವಾಗಿ ಪೂರ್ಣ 26 ದಿನಗಳ ನಂತರ ಮೇ 29ರಂದು ಗೃಹ ಸಚಿವರ ಭೇಟಿ ಕಾನೂನು-ಸುವ್ಯವಸ್ಥೆಯ ಮೇಲೆ ಯಾವುದೇ ಪರಿಣಾಮ ಬೀರಿಲ್ಲ. ಈ ಹಿಂಸಾಚಾರದಲ್ಲಿ ಶಾಮೀಲಾಗಿರುವ ಮತ್ತು ಪರಿಸ್ಥಿತಿಯನ್ನು ನಿಯಂತ್ರಿಸುವಲ್ಲಿ ಅಸಮರ್ಥವಾಗಿರುವ ರಾಜ್ಯದ ಬಿರೇನ್ ಸಿಂಗ್ ನೇತೃತ್ವದ ಬಿಜೆಪಿ ಸರ್ಕಾರವನ್ನು ವಜಾಗೊಳಿಸಲು ಮೋದಿ ಸರ್ಕಾರ ನಿರಾಕರಿಸಿದ್ದರಿಂದ ಗೃಹ ಸಚಿವರು ಕರೆದ ಸರ್ವಪಕ್ಷ ಸಭೆಯು ಯಾವುದೇ ಪರಿಣಾಮ ಬೀರಲಿಲ್ಲ.

ಹಿಂಸಾಚಾರ ತಕ್ಷಣವೇ ನಿಲ್ಲಬೇಕು ಮತ್ತು ಸಹಜ ಸ್ಥಿತಿ ಮರಳುವಂತಾಗಬೇಕು ಎಂದು ಪೊಲಿಟ್‌ಬ್ಯುರೊ ಕರೆ ನೀಡಿದೆ.

ಪ್ರಧಾನಿ ಮೋದಿಯವರ ಅಮೇರಿಕಾ ಭೇಟಿ

ಪ್ರಧಾನಿ ಮೋದಿಯವರ ಅಧಿಕೃತ ಅಮೆರಿಕ ಸಂಯುಕ್ತ ಸಂಸ್ಥಾನಗಳ(ಯುಎಸ್‌ಎ) ಭೇಟಿಯು ಭಾರತವು ಅಮೆರಿಕನ್ ಸಾಮ್ರಾಜ್ಯಶಾಹಿಯ ಅಡಿಯಾಳು ಕಿರಿಯ ಪಾಲುದಾರನೆಂಬುದನ್ನು ಮತ್ತಷ್ಟು ಗಟ್ಟಿಗೊಳಿಸಿದೆ. ಅಮೆರಿಕ ಸಂಯುಕ್ತ ಸಂಸ್ಥಾನಗಳ ಒಂದು 'ಪ್ರಮುಖ ರಕ್ಷಣಾ ಪಾಲುದಾರ' ಎಂದೆನಿಸಿಕೊಳ್ಳುವಂತೆ ಮಾಡಿರುವ ಹಿಂದಿನ ಪ್ರಮುಖ ಮಿಲಿಟರಿ ಮತ್ತು ರಕ್ಷಣಾ ಒಪ್ಪಂದಗಳ ಬೆನ್ನಿಗೆ ಈಗ GE-F 414 ಜೆಟ್ ಎಂಜಿನ್‌ನ ಜಂಟಿ ಉತ್ಪಾದನೆಯಂತಹ ತೀರ್ಮಾನಿಸಲಾದ ರಕ್ಷಣಾ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ.

ಅಮೆರಿಕವು ಭಾರತವನ್ನು ತನ್ನ ಜಾಗತಿಕ ಪ್ರಾಬಲ್ಯವನ್ನು ಬಲಪಡಿಸುವ ಅನ್ವೇಷಣೆಯಲ್ಲಿ ಚೀನಾವನ್ನು ಒಬ್ಬಂಟಿಯಾಗಿಸುವಲ್ಲಿ ಒಂದು ನಿರ್ಣಾಯಕ ಆಯಕಟ್ಟಿನ ಮತ್ತು ಮಿಲಿಟರಿ ಪಾಲುದಾರನಾಗಿ ನೋಡುತ್ತದೆ. ಮೋದಿ ಸರ್ಕಾರದ ಅಡಿಯಲ್ಲಿ ಭಾರತದಲ್ಲಿ ಮಾನವ ಹಕ್ಕುಗಳು ಮತ್ತು ಪ್ರಜಾಪ್ರಭುತ್ವದ ಸಮಸ್ಯೆಗಳನ್ನು ಎತ್ತಲು ಬೈಡೆನ್ ಆಡಳಿತದ ನಿರಾಕರಣೆಯು ವ್ಯಾಪಕ ಟೀಕೆಗೆ ಒಳಗಾಗಿದೆ, ಮಾಜಿ ಅಧ್ಯಕ್ಷ ಬರಾಕ್ ಒಬಾಮಾ ಕೂಡ ಈ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ಮಾನವ ಹಕ್ಕುಗಳು ಮತ್ತು ಪ್ರಜಾಪ್ರಭುತ್ವದ ಕುರಿತ ಮೋದಿ ಸರ್ಕಾರದ ದಾಖಲೆಯ ಬಗ್ಗೆ ಯು.ಎಸ್. ಕಾಂಗ್ರೆಸ್‌ನ 75 ಸದಸ್ಯರು ಕಳವಳದ ವಿಷಯಗಳನ್ನು ಎತ್ತಿದ್ದಾರೆ.


ಏಕರೂಪ ನಾಗರಿಕ ಸಂಹಿತೆ

ಏಕರೂಪ ನಾಗರಿಕ ಸಂಹಿತೆ ಕುರಿತು ಕಾನೂನು ಆಯೋಗ ಮತ್ತೊಮ್ಮೆ ಸಮಾಲೋಚನೆ ಆರಂಭಿಸಿದೆ. ಹಿಂದಿನ ಕಾನೂನು ಆಯೋಗವು ಇದೇ ರೀತಿಯ ಕಸರತ್ತನ್ನು ನಡೆಸಿದ್ದು, 2018 ರಲ್ಲಿ "ಈ ಹಂತದಲ್ಲಿ ಅದರ ಅಗತ್ಯವೂ ಇಲ್ಲ ಅಥವಾ ಅಪೇಕ್ಷಣೀಯವೂ ಅಲ್ಲ" ಎಂಬ ತೀರ್ಮಾನಕ್ಕೆ ಬಂದಿತ್ತು. ಸಿಪಿಐ(ಎಂ) ಈ ನಿಲುವನ್ನು ಅನುಮೋದಿಸುತ್ತದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಏಕರೂಪತೆ ಎಂದರೆ ಸಮಾನತೆ ಎಂದು ಸಮೀಕರಿಸಲು ಸಾಧ್ಯವಿಲ್ಲ. ಸಿಪಿಐ(ಎಂ) ಎಲ್ಲಾ ಸಮುದಾಯಗಳ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ಪ್ರತಿಪಾದಿಸುತ್ತದೆ. ಈ ಸಮುದಾಯಗಳ ಎಲ್ಲಾ ಪುರುಷರು ಮತ್ತು ಮಹಿಳೆಯರ ಸಕ್ರಿಯ ಪ್ರಜಾಸತ್ತಾತ್ಮಕ ಭಾಗವಹಿಸುವಿಕೆಯೊಂದಿಗೆ ವಿವಿಧ ಸಮುದಾಯಗಳಿಗೆ ಅನ್ವಯವಾಗುವ ವೈಯಕ್ತಿಕ ಅಥವಾ ಸಾಂಪ್ರದಾಯಿಕ ಕಾನೂನುಗಳ ಸುಧಾರಣೆಯ ಮೂಲಕ ಇದನ್ನು ಉತ್ತಮವಾಗಿ ಪ್ರತಿಪಾದಿಸಲು ಸಾಧ್ಯವಿದೆ ಎಂದು ಸಿಪಿಐ(ಎಂ) ಅಭಿಪ್ರಾಯ ಪಡುವುದಾಗಿ ಹೇಳಿಕೆ ತಿಳಿಸಿದೆ.

ರಾಜ್ಯಗಳಿಗೆ ಅಕ್ಕಿ ಪೂರೈಕೆಯನ್ನು ಮರುಸ್ಥಾಪಿಸಿ

ಅತ್ಯಂತ ಸರ್ವಾಧಿಕಾರಿ ಮತ್ತು ಪ್ರಜಾಸತ್ತಾತ್ಮಕವಲ್ಲದ ರೀತಿಯಲ್ಲಿ ಮೋದಿ ಸರ್ಕಾರವು ರಾಜ್ಯ ಸರ್ಕಾರಗಳಿಗೆ ಅಕ್ಕಿಯನ್ನು ಮಾರಾಟ ಮಾಡದಂತೆ ಭಾರತೀಯ ಆಹಾರ ನಿಗಮಕ್ಕೆ ನಿರ್ದೇಶನ ನೀಡಿದೆ. ಬಿಜೆಪಿಯೇತರ ಸರ್ಕಾರಗಳು ಜನರಿಗೆ ಪರಿಹಾರ ನೀಡುವ ಭರವಸೆಗಳನ್ನು ಈಡೇರಿಸುವುದನ್ನು ತಡೆಯುವ ಗುರಿಯನ್ನು ಈ ಕ್ರಮ ಹೊಂದಿದೆ ಎಂದು ಪೊಲಿಟ್‌ಬ್ಯುರೊ ಟೀಕಿಸಿದೆ.



ಪೂರ್ವ-ಪಾವತಿ ಸ್ಮಾರ್ಟ್ ಮೀಟರ್ ಗಳ ಯೋಜನೆ

ವಿದ್ಯುತ್ ಗ್ರಾಹಕರಿಗಾಗಿ ಪೂರ್ವ ಪಾವತಿ ವ್ಯವಸ್ಥೆಯೊಂದಿಗೆ ಸ್ಮಾರ್ಟ್ ಮೀಟರ್ ಯೋಜನೆಯನ್ನು ಮೋದಿ ಸರ್ಕಾರ ಜಾರಿಗೊಳಿಸುತ್ತಿದೆ. ಅನೇಕ ರಾಜ್ಯಗಳ ಮೇಲೆ ಈ ಯೋಜನೆಯನ್ನು ಜಾರಿಗೊಳಿಸಲು ಮತ್ತು ಆ ಮೂಲಕ ವಿದ್ಯುತ್ ವಿತರಣೆಯ ಜವಾಬ್ದಾರಿಯಿಂದ ಹಿಂದೆ ಸರಿಯಲು ಹಾಗೂ ಅದನ್ನು ಖಾಸಗಿ ಕಾರ್ಪೊರೇಟ್‌ಗಳಿಗೆ ಗರಿಷ್ಠ ಲಾಭಗಳಿಕೆಗಾಗಿ ಹಸ್ತಾಂತರಿಸುವ ಒತ್ತಾಯ ಹಾಕಲಾಗುತ್ತಿದೆ. ಇದರಿಂದ ಬಡವರು ಹಾಗೂ ರೈತರ ಮೇಲೆ ಅಸಹನೀಯ ಹೊರೆ ಬೀಳಲಿದೆ. ಕೂಡಲೇ ಈ ಯೋಜನೆಯನ್ನು ಕೈಬಿಡಬೇಕು ಎಂದು ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಅಸ್ಸಾಂ ಚುನಾವಣಾ ಕ್ಷೇತ್ರ ಮರುವಿಂಗಡಣೆ

2001 ರ ಜನಗಣತಿಯ ಆಧಾರದ ಮೇಲೆ 2023 ರಲ್ಲಿ ಅಸ್ಸಾಂನ ವಿಧಾನಸಭಾ ಕ್ಷೇತ್ರಗಳ ಮರು ವಿಂಗಡಣೆಯನ್ನು ಮಾಡಬೇಕೆಂಬುದನ್ನು ಪೊಲಿಟ್‌ಬ್ಯುರೊ ವಿರೋಧಿಸುತ್ತದೆ. ಸ್ಪಷ್ಟವಾಗಿಯೂ, ಚುನಾವಣಾ ಆಯೋಗವು ಕ್ಷೇತ್ರಮರುವಿಂಗಡಣೆಗೆ ಒಂದು ಪ್ರತ್ಯೇಕ ಆಯೋಗವನ್ನು ರಚಿಸದೆ ಆಡಳಿತಾರೂಢ ಬಿಜೆಪಿಯ ರಾಜಕೀಯ ಉದ್ದೇಶಗಳನ್ನು ಪೂರೈಸಲು ಮತ್ತು ಮುನ್ನಡೆಸಲು ಈ ಕಸರತ್ತನ್ನು ನಡೆಸಿದೆ ಎಂದು ಪಿಬಿ ಹೇಳಿದೆ.

ಕುಸ್ತಿಪಟುಗಳ ಪ್ರತಿಭಟನೆ

ಮಹಿಳಾ ಕುಸ್ತಿಪಟುಗಳು ಬಿಜೆಪಿಯ ಸಂಸದನ ವಿರುದ್ಧ ಮಾಡಿರುವ ಲೈಂಗಿಕ ಕಿರುಕುಳದ ಆರೋಪಗಳಲ್ಲಿ ಮೇಲ್ನೋಟಕ್ಕೇ

ಪುಟ 10 ಕ್ಕೆ

ವಿದೇಶದಲ್ಲಿ ಗಾಂಧೀಜಿ, ದೇಶದಲ್ಲಿ ಗೋಡ್ಸೆ ಇದು ಮೋದಿ ಸೂತ್ರ

– ಸೀತಾರಾಂ ಯೆಚುರಿ

ತನ್ನ ಜಾಗತಿಕ ಪ್ರಾಬಲ್ಯವನ್ನು ಬಲಪಡಿಸುವ ಪ್ರಯತ್ನದಲ್ಲಿರುವ ಅಮೆರಿಕ ಸಂಯುಕ್ತ ಸಂಸ್ಥಾನಕ್ಕೆ ಇದರಲ್ಲಿ ದೊಡ್ಡ ಅಡ್ಡಿಯಾಗಿ ಕಾಣಿಸುತ್ತಿರುವುದು ಚೀನಾದ ಶಕ್ತಿ. ಆದ್ದರಿಂದ ಅಮೆರಿಕಾದ ಪ್ರಸಕ್ತ ಬೈಡನ್ ಆಡಳಿತ ಅದನ್ನು ಒಬ್ಬಂಟಿಯಾಗಿಸುವ ಕಾರ್ಯತಂತ್ರದಲ್ಲಿ ಭಾರತ ಒಂದು ಮುಖ್ಯ ಅಂಶ ಎಂಬ ಆದ್ಯತೆ ನೀಡುತ್ತದೆ ಎಂಬುದು ಈ ಬಾರಿಯ ಮೋದಿಯವರ ಅಮೆರಿಕಾ ಭೇಟಿಯಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಆದ್ದರಿಂದ ಅದು ಮೋದಿ ಸರಕಾರದ ಮಾನವ ಹಕ್ಕು-ವಿರೋಧಿ, ಅಲ್ಪಸಂಖ್ಯಾತ-ವಿರೋಧಿ ಕೃತ್ಯಗಳನ್ನು ಕಂಡೂ ಕಾಣದಂತೆ ಮಾಡುತ್ತಿದೆ, ಬದಿಗೊತ್ತುತ್ತಿದೆ. ಭಾರತದಿಂದ ಹೊರ ಹೋದಾಗ, ವಿದೇಶಗಳಲ್ಲಿ ಗಾಂಧೀ, ದೇಶದಲ್ಲಿ ಗೋಡ್ಸೆ ಎಂಬುದು ಮೋದಿಯವರ ಸೂತ್ರ ತಾನೇ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಪತ್ರಿಕಾಗೋಷ್ಠಿಯಲ್ಲಿ ಟಿಪ್ಪಣಿ ಮಾಡಿದ್ದಾರೆ.



ಉತ್ತರ ಕನ್ನಡದಲ್ಲಿ ಬಿಜೆಪಿಗೆ ಹೀನಾಯ ಸೋಲು:

ಹವಾ ಬದಲಿಸದ ಮೋದಿ-ಅಮಿತ್ ಷಾ-ಯೋಗಿ ಆಗಮನ ಅವಕಾಶ ಸರಿಯಾಗಿ ಬಳಸಿಕೊಳ್ಳುವಲ್ಲಿ ವಿಫಲವಾದ ಕಾಂಗ್ರೆಸ್

ಕೋಮುವಾದದ ಕೆಂಡ ಉಗುಳುತ್ತಿದ್ದ ಉತ್ತರ ಕನ್ನಡ ಜಿಲ್ಲೆಯ ಬಿಜೆಪಿ ಈ ಚುನಾವಣೆಯಲ್ಲಿ ಹಿಂದಕ್ಕೆ ತಳ್ಳಲ್ಪಟ್ಟಿದೆ. ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ, ಉ.ಪ್ರ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಮತ್ತು ಡಜನ್ ಗಟ್ಟಲೇ ಆಮದಾದ ಮಂತ್ರಿಗಳು ಠಿಕಾಣಿ ಹೂಡಿ, ಅಬ್ಬರದ ಪ್ರಚಾರ, ಹಣದ ಹೊಳೆ ಹರಿಸಿದರೂ ಮೇಲುಗೈ ಸಾಧಿಸಲಿಲ್ಲ, ಫೈರ್ ಬ್ರಾಂಡ್‌ಗಳೂ ಸ್ಥಾನಗಳನ್ನು ಕಳೆದು ಕೊಳ್ಳ ಬೇಕಾಯಿತು ಯಾಕೆ? ಕಾಂಗ್ರೆಸ್ ಹೆಚ್ಚಿನ ಅವಕಾಶಗಳನ್ನು ಕಳೆದುಕೊಂಡಿದ್ದೇಗೆ? ಜಿಲ್ಲೆಯೊಳಗಿನ ರಾಜಕೀಯ ಸೂಕ್ಷ್ಮ ಸಂಗತಿಗಳ ವಿಶ್ಲೇಷಣೆ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ

ಯಮುನಾ ಗಾಂವ್ಕರ್ ಅವರಿಂದ. ನಮ್ಮ ಓದುಗರಿಗೆ **ವಿಶೇಷ ಲೇಖನ ಸರಣಿಯಲ್ಲಿ.**

ವಿಧಾನಸಭಾ ಚುನಾವಣೆ ಮುಗಿದು ಕಾಂಗ್ರೆಸ್ ನೇತೃತ್ವದಲ್ಲಿ ಹೊಸ ಸರ್ಕಾರದ ಆಡಳಿತ ವೈಖರಿ ನೋಡುತ್ತಿದ್ದೇವೆ. ಉತ್ತರ ಕನ್ನಡದಲ್ಲಿ 4 ಸ್ಥಾನಗಳಲ್ಲಿ ಕಾಂಗ್ರೆಸ್, 2 ಸ್ಥಾನಗಳಲ್ಲಿ ಬಿಜೆಪಿ ಜಯ ಸಾಧಿಸಿವೆ. ಒಂದು ಲಕ್ಷಕ್ಕೂ ಅಧಿಕ ಮತ ಪಡೆದ ಭಟ್ಕಳದ ಶಾಸಕರಾದ ಮಂಕಾಳು ವೈದ್ಯ ರವರು ಮೀನುಗಾರಿಕೆ ಇಲಾಖೆಯ ಸಚಿವರಾಗಿ ಮತ್ತು ಉಕ ಜಿಲ್ಲಾ ಉಸ್ತುವಾರಿ ಸಚಿವರಾಗಿ ನೇಮಕವಾಗಿದ್ದಾರೆ.

ಕರಾವಳಿ ಜಿಲ್ಲೆಗಳ ಮೇಲೆ ನಾಡಿನ ಪ್ರಜ್ಞಾವಂತ ಜನತೆಯ ಕಣ್ಣು ನೆಟ್ಟಿತ್ತು ಎಂಬುದು ಸತ್ಯ. ಕಳೆದ ಬಾರಿ ಈ ಪ್ರದೇಶದಲ್ಲಿ ಸಂಘಪರಿವಾರ ಮತ್ತು ಬಿಜೆಪಿ ನಡೆಸಿದ ದಾಂಧಲೆ, ಕೋಮುಹಿಂಸೆ ಉತ್ತರ ಕನ್ನಡದಲ್ಲಿ ಬಿಜೆಪಿಗೆ ಐದು ಸ್ಥಾನ ತಂದು ಕೊಟ್ಟಿತು. ಈ ಬಾರಿ ಅವರ ಲೆಕ್ಕದ ಆಟ ಊಹಿಸಿದಂತೆ ಆಗಲಿಲ್ಲ. ಆದರೆ ಕಾಂಗ್ರೆಸ್ ಎಲ್ಲಾ ಸ್ಥಾನಗಳನ್ನು ಗೆಲ್ಲುವ ಸಾಧ್ಯತೆ ಇತ್ತಾದರೂ ಅವಕಾಶವನ್ನು ಸರಿಯಾಗಿ ಬಳಸಿಕೊಳ್ಳುವಲ್ಲಿ ವಿಫಲವಾಯಿತು.

ಉತ್ತರ ಕನ್ನಡ ಜಿಲ್ಲೆಯ ಮತದಾರರ ಸಂಖ್ಯೆ: 11,94,714 ಆದರೆ ಚಲಾವಣೆಯಾದ ಒಟ್ಟು ಮತಗಳು: 9,30,882. ನೋಟಾ 9127 ಮತ.

ಶೇಕಡಾವಾರು: ಕಾಂಗ್ರೆಸ್ 43.18, ಬಿಜೆಪಿ 42.92, ಜೆಡಿಎಸ್ 11.08, ಉಳಿದ ಪಕ್ಷಗಳು ಮತ್ತು ಪಕ್ಷೇತರರು ಸೇರಿ ಶೇ. 22.82 ಪಡೆದಿದ್ದಾರೆ. ಮುಂದಿನ ಚುನಾವಣೆ ಗಮನದಲ್ಲಿಟ್ಟು ಲೋಕಸಭಾ ಕ್ಷೇತ್ರವಾರು ನೋಡಿದಾಗ ಬಿಜೆಪಿಯ ಅಪಾಯಕಾರಿ ಬೆಳವಣಿಗೆ ಗಮನಿಸಬಹುದು.

ಒಟ್ಟಾರೆ ಸ್ಪರ್ಧೆಯಲ್ಲಿದ್ದವರು

ಕಾರವಾರ ಕ್ಷೇತ್ರದಲ್ಲಿ ಒಟ್ಟು 11 ಅಭ್ಯರ್ಥಿಗಳು, ಇದರಲ್ಲಿ 6 ಪಕ್ಷೇತರರು, ಕುಮಟಾ ಕ್ಷೇತ್ರದಲ್ಲಿ 9 ಅಭ್ಯರ್ಥಿಗಳಲ್ಲಿ 4 ಪಕ್ಷೇತರರು, ಭಟ್ಕಳ ಕ್ಷೇತ್ರಕ್ಕೆ 9 ಅಭ್ಯರ್ಥಿಗಳಲ್ಲಿ 1 ಪಕ್ಷೇತರ, ಶಿರಸಿ ಕ್ಷೇತ್ರದಲ್ಲಿ 10 ಅಭ್ಯರ್ಥಿಗಳಲ್ಲಿ 3 ಪಕ್ಷೇತರರು, ಯಲ್ಲಾಪುರ 9 ಅಭ್ಯರ್ಥಿಗಳ ಪೈಕಿ 3 ಪಕ್ಷೇತರರು, ಹಳಿಯಾಳ ಕ್ಷೇತ್ರಕ್ಕೆ 9 ಅಭ್ಯರ್ಥಿಗಳು ಇವರಲ್ಲಿ 2 ಪಕ್ಷೇತರರು. ಒಟ್ಟು 57 ಜನ ಸ್ಪರ್ಧಿಗಳಿದ್ದರು.

ಹೀಗೆ ನಾಲ್ಕು ಕ್ಷೇತ್ರದಲ್ಲಿ ಕಾಂಗ್ರೆಸ್ ಗೆದ್ದಿದೆ. 1) ಕುಮಟಾ ಹೊನ್ನಾವರ 2) ಯಲ್ಲಾಪುರ ಮುಂಡಗೋಡ ಬನವಾಸಿ ಕ್ಷೇತ್ರದಲ್ಲಿ ಬಿಜೆಪಿ ಗೆದ್ದಿದೆ. ಆದರೆ, ಕುಮಟಾದಲ್ಲಿ ಜೆಡಿಎಸ್ ಹಾಗೂ ಬಿಜೆಪಿ ತೀವ್ರ ಪೈಪೋಟಿ ನಂತರ 673 ಮತಗಳಿಂದ ಜೆಡಿಎಸ್ ಸೋತಿದೆ. (ಬಿಜೆಪಿಗೆ 59,966 ಜೆಡಿಎಸ್ ಗೆ 59,293 ಮತಗಳು) ಯಲ್ಲಾಪುರ ಕ್ಷೇತ್ರದಲ್ಲಿ ಕೂಡ ಕಾಂಗ್ರೆಸ್ ತೀವ್ರ ಪೈಪೋಟಿ ನಡೆಸಿತ್ತಾದರೂ ಬಿಜೆಪಿ 74,699 ಕಾಂಗ್ರೆಸ್ ಗೆ 70,695 ಮತ ಚಲಾವಣೆಯಾಗಿ 4,004 ಮತಗಳಿಂದ ಬಿಜೆಪಿ ಗೆದ್ದಿದೆ.

ಆಯಾ ಕ್ಷೇತ್ರವಾರು ಒಮ್ಮೆ ಕಣ್ಣು ಹಾಯಿಸೋಣ

ಕಾರವಾರದಲ್ಲಿ ಬಿಜೆಪಿ ಹಾಲಿ ಶಾಸಕಿ ಬಿಜೆಪಿಯ ರೂಪಾಲಿ ನಾಯ್ಕ, ಇಲ್ಲಿ ಮಾಜಿ ಶಾಸಕ ಸತೀಶ್ ಸೈಲ್ ಕಾಂಗ್ರೆಸ್ ನಿಂದ, ಚೈತ್ರಾ ಕೊಟಾರ್ಕರ್ ಜೆಡಿಎಸ್ ನಿಂದ, ಬಿಜೆಪಿ ಬಂಡಾಯ ಅಭ್ಯರ್ಥಿಯಾಗಿ ಗಂಗಾಧರ ಭಟ್ ಪೈಪೋಟಿ ನೀಡುವ ಸಾಧ್ಯತೆ ಇತ್ತು. ಬಿಜೆಪಿ ಶಾಸಕಿಗೆ ಮೇಲ್ನೋಟಕ್ಕೆ ಬೆಂಬಲ ಇಲ್ಲದಿದ್ದರೂ ನಗರ ಸಭೆ ಮತ್ತು ಬಹುತೇಕ ಗ್ರಾ.ಪಂ. ಚುಕ್ಕಾಣಿ ಬಿಜೆಪಿ ಕೈಯಲ್ಲೇ ಇದೆ. ಹಾಗೂ ಮಾಜಿ ಮಂತ್ರಿ ಆನಂದ್ ಅಸ್ನೋಟಿಕರ್ ಸ್ಪರ್ಧಿಸುವ ಸಾಧ್ಯತೆ ಬಗ್ಗೆ ಹೇಳಿದ್ದರಾದರೂ ಸ್ಪರ್ಧಿಸಿಲ್ಲ. ಕಾಂಗ್ರೆಸ್ ನ ಸೈಲ್ ಜೊತೆಗೆ ಒಳ ಒಪ್ಪಂದ ಮಾಡಿ ಬಿಜೆಪಿ ಸೋಲಿಸಲು ಪ್ರಚಾರ ನಡೆಸಿದರು.

ಕುಮಟಾ ಹೊನ್ನಾವರ (ಅರ್ಧ ತಾಲೂಕು) ಕ್ಷೇತ್ರ ಹಾಲಿ ಶಾಸಕ ಬಿಜೆಪಿಯ ದಿನಕರ ಶೆಟ್ಟಿ, ಜೆಡಿಎಸ್ ನ ಸೂರಜ್ ನಾಯ್ಕ ಸೋನಿ ಈ ಹಿಂದೆ ಚಂದಾವರ ಮತ್ತು ಪರೇಶ್ ಮೇಸ್ತಾ ಗಲಾಟೆಯಲ್ಲಿದ್ದು ಹೊರಬಂದು ಜೆಡಿಎಸ್ ಸೇರಿದವರು, ಮತ್ತು ಕಾಂಗ್ರೆಸ್ ನಿಂದ ನಿವೇದಿತ್ ಆಳ್ವಾ (ಕ್ಷೇತ್ರದ ನಿವಾಸಿ ಅಲ್ಲ ಎಂಬ ಅಂಶ ಅಪಪ್ರಚಾರ ಮುನ್ನೆಲೆಯಲ್ಲಿ ತಂದಿದ್ದಾರೆ. ಹಿಂದೆ ಒಂದೆರಡು ಮಂಡಳಿಯಲ್ಲಿ ಕೆಲಸ ಮಾಡಿದ್ದಾರೆ.) ಇಬ್ಬರೂ ಪ್ರಬಲ ಸ್ಪರ್ಧಿಗಳೇ ಆಗಿದ್ದರು. ಸೂರಜ್ ಕಳೆದ ಬಾರಿಯಿಂದಲೇ ತಳಮಟ್ಟದಿಂದ ಕೆಲಸ ಮಾಡುತ್ತ ಬಂದಿದ್ದರು. ನಾಮಧಾರಿ ಜಾತಿಯನ್ನೇ ಹೆಚ್ಚು ಬಳಸಿಕೊಳ್ಳುವಲ್ಲಿ ಮುಂದಾದುದರಿಂದ ಸೋಲು ಸನಿಹವಾಯಿತು ಎಂಬುದು ಚರ್ಚೆಯಲ್ಲಿದೆ. ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿ ಶಾರದಾ ಶೆಟ್ಟಿ ನಾಮಪತ್ರ ಸಲ್ಲಿಸಿದಾಗ ಬೆಂಬಲಕ್ಕೆ ನಿಂತ ಶಿವಾನಂದ ಹೆಗಡೆ ಬಿಜೆಪಿಗೆ ಜಿಗಿದರು. ಅವರು ಹಿಂದೆ ವಿವಿಧ ಸಂದರ್ಭಗಳಲ್ಲಿ ಬಿಜೆಪಿ ಪ್ರಾಯೋಜಿತ ಸಹಕಾರಿ ಚುನಾವಣೆ ಇತ್ಯಾದಿಗಳಲ್ಲಿ ಇದ್ದವರೇ ಆಗಿದ್ದಾರೆ. ವ್ಯತ್ಯಾಸವೇನೂ ಇರಲಿಲ್ಲ. ಶಾರದಾ ಶೆಟ್ಟಿಯವರು ನಾಮಪತ್ರ ಹಿಂತೆಗೆದು ರಾಜಕೀಯ ನಿವೃತ್ತಿ ಘೋಷಿಸಿದ ನಂತರ ಚಿತ್ರಣ ಬದಲಾಗಿದ್ದು ಬಿಜೆಪಿ ವಿರುದ್ಧ ಜೆಡಿಎಸ್ ಮತ್ತು ಕಾಂಗ್ರೆಸ್ ತ್ರಿಕೋನ ಸ್ಪರ್ಧೆ ಏರ್ಪಟ್ಟಿತು.



ಭಟ್ಕಳ ಹೊನ್ನಾವರ (ಹೊನ್ನಾವರ ಉಳಿದ ಅರ್ಧ) ಕ್ಷೇತ್ರ ಹಾಲಿ ಶಾಸಕನಾಗಿದ್ದ ಸುನಿಲ್ ನಾಯ್ಕ ಸೋಲಿಸಲು ತಂತ್ರ ರೂಪಿಸಿದರು. ಜೆಡಿಎಸ್ ನ ಪ್ರಬಲ ಸಂಭ್ಯಾವ್ಯ ಅಭ್ಯರ್ಥಿಯಾಗುವ ಇನಾಯತುಲ್ಲಾ ಶಾಬಂದ್ರಿಯವರಿಗೆ ಸ್ಪರ್ಧಿಸದಂತೆ ನೋಡಿಕೊಳ್ಳಲಾಯಿತು. ಭಟ್ಕಳದಲ್ಲಿ ಅಲ್ಪಸಂಖ್ಯಾತರ ಪ್ರತಿನಿಧಿ ಎಂಬಂತೆ ಇರುವ ತಂಜೀಂ ಸಂಸ್ಥೆ ಈ ಬಾರಿ ತಮ್ಮಿಂದ ಯಾರೂ ನಿಲ್ಲಬಾರದೆಂದು ಬಿಜೆಪಿ ಸೋಲಿಸುವದೇ ಮುಖ್ಯ ಗುರಿಯಾಗಿಸಿಕೊಂಡಿತು. ಹಾಗಾಗಿ ಕಾಂಗ್ರೆಸ್ ಅತಿ ಹೆಚ್ಚು ಮತಗಳು ಬಂದು ಮಂಕಾಳು ವೈದ್ಯ ರವರು ದಾಖಲೆ ಬರೆದರು.

ಶಿರಸಿ ಸಿದ್ದಾಪುರ ಕ್ಷೇತ್ರ ಬಿಜೆಪಿಯ ಶಾಸಕ ಸಭಾಧ್ಯಕ್ಷ, ಮಾಜಿ ಮಂತ್ರಿ ವಿಶ್ವೇಶ್ವರ ಹೆಗಡೆ ಕಾಗೇರಿ, ಕಾಂಗ್ರೆಸ್ ನಿಂದ ಭೀಮಣ್ಣ ನಾಯ್ಕ, ಜೆಡಿಎಸ್ ಉಪೇಂದ್ರ ಪೈ ಸ್ಪರ್ಧಾ ಕಣದಲ್ಲಿದ್ದರು. ಕಾಂಗ್ರೆಸ್ ಟಿಕೆಟ್ ಪ್ರಬಲ ಆಕಾಂಕ್ಷಿ ದತ್ತಾತ್ರೇಯ ಹೆಗಡೆ ಹೊಸಬಾಳೆ ಬಂಡಾಯವಾಗಿ ನಾಮಪತ್ರ ಸಲ್ಲಿಸಿದರಾದರೂ ತಕ್ಷಣವೇ ಹಿಂತೆಗೆದುಕೊಂಡು ಕಾಂಗ್ರೆಸ್‌ಗೆ ನಿಷ್ಠೆ ವ್ಯಕ್ತಪಡಿಸಿದರು. ಹಾಗಾಗಿ ಕಾಗೇರಿಯರನ್ನು ಮತ್ತೆ ಗೆಲ್ಲದಂತೆ ತಡೆ ಹಾಕುವಲ್ಲಿ ಯಶಸ್ವಿಯಾಯಿತು.

ಯಲ್ಲಾಪುರ ಮುಂಡಗೋಡ (ಶಿರಸಿಯ ಬನವಾಸಿ ಭಾಗದ ಐದು ಪಂಚಾಯತ್) ಹಾಲಿ ಬಿಜೆಪಿ ಶಾಸಕ, ಮಂತ್ರಿ ಶಿವರಾಮ ಹೆಬ್ಬಾರ್, ಮಾಜಿ ಶಾಸಕ ಬಿಜೆಪಿಯಿಂದ ಕಾಂಗ್ರೆಸ್ ಗೆ ಹೋದಾತ ವಿ ಎಸ್ ಪಾಟೀಲ್ ಮಧ್ಯೆ ಭಾರೀ ಪೈಪೋಟಿ ನಡೆಯಿತು. ಆದರೆ ಬಿಜೆಪಿ ಗೆದ್ದು ಬಂದುದು ಅಭ್ಯರ್ಥಿಯ ವರ್ಚಸ್ಸಿನಿಂದ ಹೊರತು ಬಿಜೆಪಿಯ ಕಾರಣಕ್ಕಾಗಿ ಅಲ್ಲ ಎಂಬುದು ಅನೇಕರ ಮಾತು.

ಹಳಿಯಾಳ ಜೋಯಿಡಾ ದಾಂಡೇಲಿ ಕ್ಷೇತ್ರದಲ್ಲಿ ಹಾಲಿ ಶಾಸಕ ಕಾಂಗ್ರೆಸ್ ನ ಆರ್.ವಿ. ದೇಶಪಾಂಡೆಯವರ ಗೆಲುವು ಸುಲಭದ್ದಾಗಿರಲಿಲ್ಲ. ಬಿಜೆಪಿಯ ಸುನಿಲ್ ಹೆಗ್ಡೆ, ಜೆಡಿಎಸ್ ನ ಎಸ್ ಎಲ್ ಘೋಟ್ನೇಕರ್ ಪ್ರಬಲ ಸ್ಪರ್ಧೆ ನೀಡಿದ್ದರು. ಮತ ಗಳಿಕೆಯ ಮೇಲೆ ಪ್ರಭಾವ ಬೀರುವ ಸ್ಥಾನದಲ್ಲಿರುವ ಜೆಡಿಎಸ್ ನ ಚಂದ್ರಶೇಖರ ಹಾಗೂ ರಮೇಶ್ ಕಾಂಗ್ರೆಸ್ ಸೇರಿದ್ದರು. ಕಾಂಗ್ರೆಸ್ ನಲ್ಲಿ ಎಂಎಲ್ ಸಿ ಯೂ ಆಗಿದ್ದ ಶ್ರೀಕಾಂತ ಘೋಟ್ನೇಕರ್ ಜೆಡಿಎಸ್ ಗೆ ಜಿಗಿದಿದ್ದರು. ಅದು ಮರಾಠಾ ಮತ ಪಡೆಯುವಲ್ಲಿ ಮಾತ್ರ ಯಶಸ್ವಿಯಾಯಿತು.

ಕಾಂಗ್ರೆಸ್ ಸೋತ ಎರಡು ಕ್ಷೇತ್ರಗಳ ಕುರಿತು

ಕುಮಟಾ ವಿಧಾನ ಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ನಿಂದ 11 ಆಕಾಂಕ್ಷಿಗಳಲ್ಲಿ ನಿವೇದಿತ ಆಳ್ವ (ಮಾರ್ಗರೇಟ್ ಆಳ್ವ ರವರ ಮಗ) ಸ್ಪರ್ಧಿಸಿದರಾದರೂ ಕ್ಷೇತ್ರದ ಹೊರಗಿನವರೆಂಬ ಪ್ರಚಾರ ಮತ್ತು ಕಾಂಗ್ರೆಸ್ ನ ಮಾಜಿ ಶಾಸಕಿ ಶಾರದಾ ಶೆಟ್ಟಿಯವರು ರಾಜಕೀಯ ನಿವೃತ್ತಿ ಘೋಷಿಸಿರುವುದು, ಕಾಂಗ್ರೆಸ್ ನ ಕೆಲವರು ಪಕ್ಷಬಿಟ್ಟು ಬಿಜೆಪಿ ಮತ್ತು ಜೆಡಿಎಸ್ ನಲ್ಲಿ ಆಶ್ರಯ ಪಡೆದಿರುವುದು, ಪ್ರಾರಂಭದಲ್ಲಿ ಆಳ್ವಾ ರವರ ಜೊತೆಯೇ ಇದ್ದ ಕೆಲವರು ಪ್ರಧಾನಿಯವರ ಉತ್ತರ ಕನ್ನಡ ಭೇಟಿ ನಂತರ ಬಿಜೆಪಿಗೆ ಜಿಗಿದಿರುವುದು ಹಾಗೂ ಆಳ್ವಾರವರು ಸ್ಥಳೀಯವಾಗಿ ಜನರೊಂದಿಗೆ ಸಂಪರ್ಕ ಕೊರತೆ ಇರುವುದು ಕಡಿಮೆ ಮತ ಬರಲು, ಮೂರನೇ ಸ್ಥಾನಕ್ಕೆ ಸರಿಯಲು ಕಾರಣವಿರಬಹುದು.

ಇನ್ನು ಯಲ್ಲಾಪುರ–ಮುಂಡಗೋಡ ಕ್ಷೇತ್ರದಲ್ಲಿ, ಕಾಂಗ್ರೆಸ್ ನಿಂದ ಗೆದ್ದು ಅಪರೇಶನ್ ಕಮಲ ನಡೆಸಿ ಬಿಜೆಪಿಗೆ ಹೋಗಿದ್ದ ಶಿವರಾಮ ಹೆಬ್ಬಾರ್ ಯಲ್ಲಾಪುರ ತಾಲೂಕಿನವರು. ಹಿಂದೆ ಬಿಜೆಪಿಯಲ್ಲಿದ್ದು ಇತ್ತೀಚೆಗೆ ಕಾಂಗ್ರೆಸ್ ಗೆ ಬಂದಿದ್ದ ವಿಎಸ್ ಪಾಟೀಲರು ಮುಂಡಗೋಡ ಭಾಗದವರು. ಇಲ್ಲಿ ಕಾಂಗ್ರೆಸ್ ತಂತ್ರ ನಡೆಸಿತಾದರೂ ಇಷ್ಟು ಪೈಪೋಟಿಯನ್ನು ಬಿಜೆಪಿ ನಿರೀಕ್ಷಿಸಿರಲಿಲ್ಲ ಎಂಬುದು ಕೊನೆಯ ಗಳಿಗೆಯ ಕಾದಾಟದಲ್ಲಿ ಕಂಡುಬಂತು. ಅವಕಾಶ ಬಳಸಲು ಕಾಂಗ್ರೆಸ್ ಹಲವು ರೀತಿಯಲ್ಲಿ ವಿಫಲವಾಯಿತು.

ಜೆಡಿಎಸ್ ಪ್ರಭಾವದ ಕುರಿತು: ಪಕ್ಷವಾಗಿ ಜೆಡಿಎಸ್ ಗೆ ಪ್ರಭಾವವಿಲ್ಲ. ಪಕ್ಷದ ಸಮಿತಿಗಳಲ್ಲಿ ಕೆಲಸ ಮಾಡಿದವರಿಗಿಂತ ಕಾಲಕಾಲಕ್ಕೆ ಬೇರೆ ಪಕ್ಷ ಬಿಟ್ಟುಬರುವ ಧನವಂತರಿಗೆ ಕೊನೆಗಳಿಗೆಯಲ್ಲಿ ಟಿಕೆಟ್ ಕೊಡಲಾಗುತ್ತದೆ ಎಂಬುದು ಆ ಪಕ್ಷದೊಳಗಿನವರ ಅಳಲು.

–ಹಳಿಯಾಳದಲ್ಲಿ ಕೊನೆಯ ಗಳಿಗೆಯಲ್ಲಿ ಕಾಂಗ್ರೆಸ್ ನಿಂದ ಹೊರಬಂದ ಎಸ್.ಎಲ್. ಘೋಟ್ನೇಕರ್ ಜೆಡಿಎಸ್ ನಿಂದ ಸ್ಪರ್ಧಿಸಿ 28,814 ಮತ ಪಡೆದರು.

–ಕುಮಟಾ ಕ್ಷೇತ್ರದಲ್ಲಿ ಜೆಡಿಎಸ್ ಕೇವಲ 673 ಮತಗಳಿಂದ ಸೋತಿದೆ. ಜೆಡಿಎಸ್ ಅಭರ್ಥಿ ಸೂರಜ್ ನಾಯ್ಕ ಸಂಘ ಪರಿವಾರ ತೊರೆದ ಪ್ರಾರಂಭದಿಂದ ಚುನಾವಣೆಗಾಗಿಯೇ ಕೆಲಸ ಮಾಡಿದರು, ಹಾಲಿ ಶಾಸಕರಂತೆ ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮ ಹೀಗೆ ಹಣ ನೀಡುತ್ತ ಬಂದರು. ಚುನಾವಣೆಯಲ್ಲಿ ಸಾಕಷ್ಟು ಚೆಲ್ಲಿದರು. ಆದರೆ ಸ್ವಲ್ಪ ಅಂತರದಲ್ಲಿ ಸೋತರು.

–ಶಿರಸಿಯಲ್ಲಿ ಜೆಡಿಎಸ್ ನ ಉಪೇಂದ್ರ ಪೈ 9,138 ಮತ ಪಡೆದರು. ಇದು ಬಿಜೆಪಿ ಸೋಲಿಸಲು ಒಳ್ಳೆಯ ಕೊಡುಗೆ ಕೊಟ್ಟಿದೆ ಎನ್ನಬಹುದು. ಉಳಿದಂತೆ ಜೆಡಿಎಸ್ ಭಟ್ಕಳದಲ್ಲಿ 1502 ಮತಗಳನ್ನು, ಯಲ್ಲಾಪುರದಲಿ ನಾಗೇಶ್ ನಾಯ್ಕ 1662 ಮತಗಳನ್ನು, ಕಾರವಾರದ

ಪುಟ 15 ಕ್ಕೆ

ಉತ್ತರ ಕನ್ನಡದಲ್ಲಿ ಗೆಲುವು ಮತ್ತು ಸೋಲಿನ ಅಂತರ

ವಿಧಾನ ಸಭಾ ಕ್ಷೇತ್ರ	ಒಟ್ಟು ಮತದಾರರು	ಗಂಡು	ಹೆಣ್ಣು	ಕಾಂಗ್ರೆಸ್	ಬಿಜೆಪಿ	ಜೆಡಿಎಸ್	ಗೆಲುವಿನ ಅಂತರ
ಕಾರವಾರ–ಅಂಕೋಲಾ –77	219267	108142	111125	77445	75307	2918	2138
ಕುಮಟಾ–ಹೊನ್ನಾವರ	188735	94247	94485 (ಇತರೇ 3)	19279	59966	59293	673
ಭಟ್ಕಳ–ಹೊನ್ನಾವರ	222708	112988	109720	100442	67771	1502	32671
ಶಿರಸಿ–ಸಿದ್ದಾಪುರ– 80	200615	100780	99833 (ಇತರೇ 2)	76887	68175	9138	8172
ಯಲ್ಲಾಪುರ ಮುಂಡಗೋಡ (ಶಿರಸಿಯ ಬನವಾಸಿ ಭಾಗ)–81	182356	92238	90118	70695	74699	1662	4004
ಹಳಿಯಾಳ–ದಾಂಡೇಲಿ–ಜೋಯಿಡಾ 76	181033	91132	89899	57240	53617	28814	3623

ಗ್ರೇಟರ್ ನೋಯ್ಡಾ ರೈತರ ಭೂ ಹೋರಾಟಕ್ಕೆ ಮಹತ್ವಪೂರ್ಣ ಯಶಸ್ಸು

ಜೂನ್ 28 ರಂದು ನೋಯ್ಡಾದ ಹಳ್ಳಿಗಳಲ್ಲಿ, ಜುಲೈ 10 ರ ಮೊದಲು ದೇಶದ ಎಲ್ಲಾ ಹಳ್ಳಿಗಳಲ್ಲಿ ವಿಜಯ ದಿನಾಚರಣೆ–ಎಐಕೆಎಸ್

ಉತ್ತರ ಪ್ರದೇಶದ ನೋಯ್ಡಾದಲ್ಲಿ ಏಪ್ರಿಲ್ 25ರಂದು ಗ್ರೇಟರ್ ನೋಯ್ಡಾ ಕೈಗಾರಿಕಾ ಅಭಿವೃದ್ಧಿ ಪ್ರಾಧಿಕಾರದ (ಜಿಎನ್‌ಐಡಿಎ) ಎದುರು ಆರಂಭವಾದ ಆ ಪ್ರದೇಶದ ರೈತರ ಹೋರಾಟ 61 ದಿನಗಳ ಹಗಲು ರಾತ್ರಿ ಧರಣಿಯ ನಂತರ ಕೊನೆಗೂ ಜಯಶಾಲಿಯಾಗಿದೆ.



ಈ ಸಾಧನೆಗೆ ಗ್ರೇಟರ್ ನೋಯ್ಡಾದ ರೈತರನ್ನು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಅಭಿನಂದಿಸುತ್ತ ಇದು ಅಖಿಲ ಭಾರತ ಮಹತ್ವ ಹೊಂದಿರುವ ಒಂದು ವಿಜಯ ಎಂದು ಹೇಳಿದೆ.

ಈ ಗೆಲುವು ಮಹತ್ವದ್ದಾಗಿದೆ. ಈ ಸಾಧನೆಯು ದೇಶಾದ್ಯಂತ ಭೂ ಸ್ವಾಧೀನದಿಂದ ಹಾನಿಗೊಳಗಾದ ಮತ್ತು 'ಭೂಮಿಯಲ್ಲಿ ನ್ಯಾಯಯುತ ಪರಿಹಾರ ಮತ್ತು ಪಾರದರ್ಶಕತೆಯ ಹಕ್ಕು (ಸ್ವಾಧೀನ, ಪುನರ್ವಸತಿ ಮತ್ತು ಮುನರ್ವ್ಯವಸ್ಥೆ) (LARR) ಕಾಯಿದೆ 2013' ನೀಡಿದ ಹಕ್ಕುಗಳಿಂದ ವಂಚಿತರಾದ ಎಲ್ಲಾ ರೈತರು ಮತ್ತು ಹಿಡುವಳಿದಾರರಿಗೆ ಸಹಾಯಕಾರಿಯಾಗಿದೆ.

ಗ್ರೇಟರ್ ನೋಯ್ಡಾ ಗ್ರಾಮಗಳ ರೈತರಿಗೆ 28ನೇ ಜೂನ್ 2023 ಅನ್ನು ವಿಜಯ ದಿನವನ್ನಾಗಿ ಆಚರಿಸಲು ಎಐಕೆಎಸ್ ಕರೆ ನೀಡಿದೆ. ದೇಶಾದ್ಯಂತ ಎಐಕೆಎಸ್‌ನ ರಾಜ್ಯ ಘಟಕಗಳು 10ನೇ ಜುಲೈ 2023 ರ ಮೊದಲು ಇತರೆಲ್ಲ ಹಳ್ಳಿಗಳಲ್ಲಿ ವಿಜಯ ದಿನವನ್ನು ಆಚರಿಸುತ್ತವೆ ಎಂದು ಅದು ಹೇಳಿದೆ.

ಎರಡನೇ ಯುಪಿಎ ಸರ್ಕಾರವು LARR ಕಾಯಿದೆ 2013 ಅನ್ನು ದೇಶದಲ್ಲಿ ಬಲವಂತದ ಭೂಸ್ವಾಧೀನದ ವಿರುದ್ಧ ರೈತರ ಹಲವಾರು ಹೋರಾಟಗಳ ಫಲವಾಗಿ ರೂಪಿಸಿ ಜಾರಿಗೆ ತಂದಿತು. ಈ ಹೋರಾಟಗಳಲ್ಲಿ ಅನೇಕ ರೈತರು ಹುತಾತ್ಮರಾದರು. ಗ್ರೇಟರ್ ನೋಯ್ಡಾದಲ್ಲಿ 2008 ರಲ್ಲಿ ಐದು ರೈತರು ಮತ್ತು 2011 ರಲ್ಲಿ ನೋಯ್ಡಾ ಪ್ರದೇಶದ ಭಟ್ಟ ಪರ್ಸುವಲ್ ಗ್ರಾಮದಲ್ಲಿ ಇಬ್ಬರು ರೈತರು ಈ ಹೋರಾಟದಲ್ಲಿ ಕೊಲ್ಲಲ್ಪಟ್ಟರು.

ಈ 2013 ರ ಕಾಯಿದೆಯು ಸರ್ಕಲ್ ದರದ ಮೇಲೆ ನಗರ ಪ್ರದೇಶದಲ್ಲಿ ಎರಡು ಪಟ್ಟು ಮತ್ತು ಗ್ರಾಮೀಣ ಪ್ರದೇಶದಲ್ಲಿ ನಾಲ್ಕು ಪಟ್ಟು ಹೆಚ್ಚಿನ ಪರಿಹಾರವನ್ನು ಒದಗಿಸಿದೆ, ಸಾಮಾಜಿಕ ಪರಿಣಾಮದ ಅಧ್ಯಯನ ನಡೆಸಬೇಕು ಎಂಬ ಕಲಮನ್ನು ಮತ್ತು ಪುನರ್ವಸತಿ, ಪುನರ್ವ್ಯವಸ್ಥೆ ಉದ್ದಿಮೆಗಳಲ್ಲಿ ಮತ್ತು ಸೇವೆಗಳಲ್ಲಿ ಸಂತ್ರಸ್ತರಿಗೆ ಉದ್ಯೋಗ ಮತ್ತು ಗ್ರಾಮಗಳಲ್ಲಿ ಭೂರಹಿತ ಕುಟುಂಬಗಳಿಗೆ ಮನೆ ನಿವೇಶನ, ಶಿಕ್ಷಣ ಮತ್ತು ಆರೋಗ್ಯದ ಲಭ್ಯತೆ ಇತ್ಯಾದಿಗಳನ್ನು ಕುರಿತಂತೆ ಉಪಬಂಧಗಳನ್ನು ಇದರಲ್ಲಿ ಸೇರಿಸಲಾಗಿತ್ತು.

ಆದರೆ, 2014ರ ಸಾರ್ವತ್ರಿಕ ಚುನಾವಣೆಯ ನಂತರ ಅಧಿಕಾರಕ್ಕೆ ಬಂದ ನರೇಂದ್ರ ಮೋದಿಯವರ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ಕಾರ್ಪೊರೇಟ್ ಶಕ್ತಿಗಳ ಒತ್ತಡಕ್ಕೆ ಮಣಿದು 2013ರ ಈ ಕಾಯ್ದೆ ಕೊಡಮಾಡಿದ ಹಕ್ಕುಗಳನ್ನು ನಿರಾಕರಿಸುವ ಕುಖ್ಯಾತ ಭೂಸ್ವಾಧೀನ ಸುಗ್ರೀವಾಜ್ಞೆಯನ್ನು 2015 ರಲ್ಲಿಯೇ ತಂದಿತು. ಇದರ ವಿರುದ್ಧ ರೈತರು 'ಭೂಮಿ ಅಧಿಕಾರ ಆಂದೋಲನ'ದ ಬ್ಯಾನರ್ ಅಡಿಯಲ್ಲಿ ನಡೆಸಿದ ವ್ಯಾಪಕ ಹೋರಾಟಗಳಿಂದಾಗಿ ಮೋದಿ ಸರಕಾರಕ್ಕೆ ಇದನ್ನು ಕಾನೂನಾಗಿ ಪರಿವರ್ತಿಸುವುದು ಸಾಧ್ಯವಾಗಲಿಲ್ಲ. ವಾಸ್ತವವಾಗಿ ಇದು ರೈತರು ಮೋದಿ ಸರಕಾರಕ್ಕೆ ಉಣ್ಣಿಸಿದ ಮೊತ್ತಮೊದಲ ಸೋಲು. ಈ ಸೋಲಿನ ನಂತರ ಎನ್‌ಡಿಎ ಸರಕಾರ ರಾಜ್ಯ ಸರಕಾರಗಳಿಗೆ ರೈತರಿಗೆ 2013ರ ಕಾಯ್ದೆ ಕೊಡಮಾಡಿದ ಹಕ್ಕುಗಳನ್ನು ನಿರಾಕರಿಸಲು ವಿಧಾನಸಭೆಗಳಲ್ಲಿ ಭೂಸ್ವಾಧೀನ ಕಾನೂನುಗಳನ್ನು ರೂಪಿಸಿ ಜಾರಿಗೊಳಿಸಲು ನಿರ್ದೇಶನ ನೀಡಿತ್ತು. ಈ ಹಿನ್ನೆಲೆಯಲ್ಲಿ ದೇಶದ ವಿವಿಧ ಭಾಗಗಳಲ್ಲಿ ಭೂಸ್ವಾಧೀನದಲ್ಲಿ ನ್ಯಾಯಯುತ ಪರಿಹಾರ ಮತ್ತು ಇತರ ಹಕ್ಕುಗಳಿಗಾಗಿ ಹಲವಾರು ಹೋರಾಟಗಳು ನಡೆಯುತ್ತಿವೆ.

ಗ್ರೇಟರ್ ನೋಯ್ಡಾದಲ್ಲಿ ನಡೆದ ಈ 61 ದಿನಗಳ ಹೋರಾಟದ ಫಲವಾಗಿ 2011ರ ಒಪ್ಪಂದದ ಭಾಗವಾಗಿದ್ದ ತಮ್ಮ ನಿಜವಾದ ಬೇಡಿಕೆಗಳನ್ನು ಒಪ್ಪಿಕೊಳ್ಳುವಂತೆ ಉತ್ತರ ಪ್ರದೇಶದ ಯೋಗಿ ಆದಿತ್ಯನಾಥ್ ಸರ್ಕಾರವನ್ನು ಒತ್ತಾಯಿಸುವಲ್ಲಿ ಇಲ್ಲಿಯ ರೈತರ ಯಶಸ್ಸು ಈ ಸಂದರ್ಭದಲ್ಲಿ ಗಮನಾರ್ಹವಾಗಿದೆ.



ಉತ್ತರ ಪ್ರದೇಶ ಸರ್ಕಾರವು 2023 ರ ಜೂನ್ 30 ರ ಮೊದಲು ಅಧಿಸೂಚನೆಯ ಮೂಲಕ ಉನ್ನತಾಧಿಕಾರವುಳ್ಳ ಸಮಿತಿಯನ್ನು ರಚಿಸಲು ಒಪ್ಪಿದೆ. ರೈತರ ಎಲ್ಲಾ ಬೇಡಿಕೆಗಳನ್ನು ಚರ್ಚಿಸಲು ಮತ್ತು ಕಾನೂನಿನ ಪ್ರಕಾರ ಅದರ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು ಈ ಸಮಿತಿಯು ಜುಲೈ 15, 2023 ರ ಮೊದಲು ತನ್ನ ಸಭೆಯನ್ನು ನಡೆಸುತ್ತದೆ ಎಂದೂ ಹೇಳಲಾಗಿದೆ.

ಗೌತಮ ಬುದ್ಧನಗರದ ಜಿಲ್ಲಾಧಿಕಾರಿಗಳು 2010ರ ಸೆ.3ರ ಒಪ್ಪಂದದಲ್ಲಿ ಭೂಮಿ ಸರ್ಕಲ್ ದರ ಪರಿಷ್ಕರಿಸಿ ಸಂತ್ರಸ್ತ ರೈತ ಕುಟುಂಬಗಳಿಗೆ ಉದ್ಯೋಗ ಕಲ್ಪಿಸುವ ಕುರಿತು ಆಡಳಿತ ನೀಡಿದ ಭರವಸೆಯ ಮೇರೆಗೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ಸಮಿತಿ ರಚಿಸಿದ್ದಾರೆ.

ಭೂಮಿ ಅಧಿಕಾರ ಆಂದೋಲನದ ಬ್ಯಾನರ್ ಅಡಿಯಲ್ಲಿ ಭೂ ಸ್ವಾಧೀನ ಯೋಜನೆಗಳಿಂದ ಹಾನಿಗೊಳಗಾದ ರೈತರ ರಾಷ್ಟ್ರಮಟ್ಟದ ಸಮಾವೇಶವನ್ನು ಆಗಸ್ಟ್ 2023 ರ ದ್ವಿತೀಯಾರ್ಧದಲ್ಲಿ ಮಧ್ಯಪ್ರದೇಶದಲ್ಲಿ ನಡೆಸಲಾಗುವುದು ಎಂದೂ ಜೂನ್ 26ರಂದು ನಡೆದ ಎಐಕೆಎಸ್‌ನ ಪತ್ರಿಕಾಗೋಷ್ಠಿಯಲ್ಲಿ ತಿಳಿಸಲಾಯಿತು.

ಈ ಗೋಷ್ಠಿಯಲ್ಲಿ ಎಐಕೆಎಸ್ ಮುಖಂಡರು ಈ ಹೋರಾಟವನ್ನು ಯಶಸ್ವಿಗೊಳಿಸಿದ ವೀರ ಹೋರಾಟಗಾರರನ್ನು ವಿಶೇಷವಾಗಿ ಗ್ರೇಟರ್ ನೋಯ್ಡಾ ಗ್ರಾಮಗಳ ಮಹಿಳೆಯರು ಮತ್ತು ಯುವಕರನ್ನು ಅಭಿನಂದಿಸಿದ್ದಾರೆ. ಅವರು ಭಾರತದಾದ್ಯಂತ ರೈತರ ಭೂಮಿಯ ಹಕ್ಕುಗಳಿಗಾಗಿ ಈ ಅತ್ಯಂತ ಮಹತ್ವದ ಹೋರಾಟವನ್ನು ಗೆದ್ದಿದ್ದಾರೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಅಡಿಯಲ್ಲಿ ಭೂ ಸ್ವಾಧೀನದ ಕಾರ್ಪೊರೇಟ್ ಪರ ನೀತಿಗಳಿಂದ ಸಂತ್ರಸ್ತರಾಗಿರುವ ಎಲ್ಲ ರೈತ ಕುಟುಂಬಗಳಿಗೆ ನ್ಯಾಯವನ್ನು ಖಚಿತಪಡಿಸಲು ಮುಂದಿನ ದಿನಗಳಲ್ಲಿ ದೇಶಾದ್ಯಂತ ಹೆಚ್ಚಿನ ಹೋರಾಟಗಳು ನಡೆಯಲಿವೆ ಎಂದು ಎಐಕೆಎಸ್ ಮುಖಂಡರು ಹೇಳಿದ್ದಾರೆ.

ಎಐಕೆಎಸ್ ಪ್ರಧಾನ ಕಾರ್ಯದರ್ಶಿ ಡಾ.ವಿಜು ಕೃಷ್ಣನ್, ಉಪಾಧ್ಯಕ್ಷರಾದ ಹನ್ನನ್ ಮೊಲ್ಲ, ಹಣಕಾಸು ಕಾರ್ಯದರ್ಶಿ ಪಿ.ಕೃಷ್ಣಪ್ರಸಾದ್, ಸಿಕೆಸಿ ಸದಸ್ಯ ಪುಷ್ಪೇಂದ್ರ ತ್ಯಾಗಿ ಮತ್ತು ತಳಮಟ್ಟದ ಹೋರಾಟದ ಮುಖಂಡರಾದ ಡಾ.ರೂಪೇಶ್ ವರ್ಮ, ವೀರ್ ಸಿಂಗ್ ನಾಗರ್ ಮತ್ತು ಬ್ರಹ್ಮಪಾಲ್ ಸುಭೆಲ್ದಾರ್ ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿದ್ದರು.

ಮಂಗಳೂರು: ಸ್ಥಗಿತಗೊಂಡ ಸರಕಾರಿ ಬಸ್ ಗಳನ್ನು ಪುನರಾರಂಭಿಸಲು ಒತ್ತಾಯಿಸಿ ಮಹಿಳಾ ಸಂಘಟನೆಯಿಂದ ಪ್ರತಿಭಟನೆ

ಸ್ಥಗಿತಗೊಂಡ ಸರಕಾರಿ ನರ್ಮ್ ಬಸ್‌ಗಳನ್ನು ಪುನರಾರಂಭಿಸಲು ಒತ್ತಾಯಿಸಿ, ಜಿಲ್ಲೆಯ ವಿವಿಧ ಭಾಗಗಳಿಗೆ ಸರಕಾರಿ ಬಸ್ ಗಳನ್ನು ಒದಗಿಸಲು ಆಗ್ರಹಿಸಿ ಹಾಗೂ ಮಂಗಳೂರು ಮೂಡಬಿದ್ರಿ ಕಾರ್ಕಳ ಮತ್ತು ಮಂಗಳೂರು ಉಡುಪಿ ನಡುವೆ ಸರಕಾರಿ ಬಸ್ ಸೇವೆ ಪ್ರಾರಂಭಿಸಲು ಒತ್ತಾಯಿಸಿ ಜೂನ್ 30, 2023 ರಂದು ಮಂಗಳೂರಿನಲ್ಲಿ ಜನವಾದಿ ಮಹಿಳಾ ಸಂಘಟನೆ(ಜೆಎಂಎಸ್)ಯ ನೇತೃತ್ವದಲ್ಲಿ ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು. ನಗರದ ಕ್ಲಾಕ್ ಟವರ್ ಬಳಿಯಲ್ಲಿ ಸೇರಿದ್ದ ಮಹಿಳಾ ಪ್ರತಿಭಟನಾಕಾರರು ಘೋಷಣೆಗಳನ್ನು ಕೂಗುವ ಮೂಲಕ ತಮ್ಮ ಬೇಡಿಕೆಗಳ ಬಗ್ಗೆ ಜನತೆಯ ಗಮನ ಸೆಳೆದರು.

ಪ್ರತಿಭಟನಾ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದ ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾಧ್ಯಕ್ಷರಾದ ಜಯಂತಿ ಬಿ ಶೆಟ್ಟಿಯವರು, ಕರ್ನಾಟಕ ರಾಜ್ಯಾದ್ಯಂತ ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣಕ್ಕೆ ಶಕ್ತಿ ಭಾಗ್ಯ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಓಡಾಡುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ಸುಗಳು ಕೊರೋನಾ ಕಾಲದ ನಂತರ ತನ್ನ ಸಂಚಾರವನ್ನು ಸ್ಥಗಿತಗೊಳಿಸಿದೆ. ಈ ಕಾರಣದಿಂದ ಸೇವೆಯಲ್ಲಿ ಬಹಳಷ್ಟು ವ್ಯತ್ಯಯ ಉಂಟಾಗಿ, ಪ್ರಯಾಣಿಕರು ಬಹಳಷ್ಟು ಸಂಕಷ್ಟವನ್ನು ಅನುಭವಿಸುತ್ತಿದ್ದಾರೆ. ಮಾತ್ರವಲ್ಲ ಈಗ ಮಹಿಳೆಯರು ಉಚಿತ ಬಸ್ ಪ್ರಯಾಣದ ಸೌಲಭ್ಯದಿಂದಲೂ ವಂಚಿತರಾಗುತ್ತಿದ್ದಾರೆ. ನರ್ಮ್ ಯೋಜನೆಯಡಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು 68 ರಷ್ಟು ಕೆಎಸ್‌ಆರ್‌ಟಿಸಿ ನಗರ ಸಾರಿಗೆ ಬಸ್ಸುಗಳು ಸಂಚಾರ ಸೇವೆ ಒದಗಿಸಲು ಮಂಜೂರಾಗಿದ್ದವು. ಆದರೆ ಮಂಜೂರಾದ 68 ಬಸ್ಸುಗಳಲ್ಲಿ 18 ಬಸ್ಸು ನಗರದ ಸ್ಟೇಟ್ ಬ್ಯಾಂಕ್ ಪ್ರವೇಶಿಸಲು ಅವಕಾಶ ಕಲ್ಪಿಸಲಾಗಿತ್ತು. ಬಾಕಿ ಉಳಿದ ಬಸ್ಸು ನಗರದ ಹೊರಭಾಗದಿಂದ ಸೇವೆ ಸಲ್ಲಿಸಲು ಸಾರಿಗೆ ಪ್ರಾಧಿಕಾರ ಒಪ್ಪಿಗೆ ನೀಡಿದ್ದವು. ಆ ಸಂದರ್ಭ ಖಾಸಗೀ ಬಸ್ ಮಾಲಕರು ಹೈಕೋರ್ಟ್ ಮೆಟ್ಟಿಲೇರಿ ತಡೆ ಹೇರಿದ್ದರು. ಮುಂದೆ ನರ್ಮ್ ಸಾರಿಗೆ ಸೇವೆಗೆ ಸಂಬಂಧಿಸಿದ



ಹೈಕೋರ್ಟ್ ದೂರನ್ನು ಜಿಲ್ಲಾಧಿಕಾರಿ ಹಂತದಲ್ಲಿ ಇತ್ಯರ್ಥ ಪಡಿಸಲು ನಿರ್ದೇಶನ ನೀಡಿತ್ತು ಎಂದು ಹೇಳಿದರು.

ಜೆಎಂಎಸ್ ನ ಹಿರಿಯ ಮುಖಂಡರಾದ ಪದ್ಮಾವತಿ ಶೆಟ್ಟಿಯವರು ಮಾತನಾಡುತ್ತಾ, ಜಿಲ್ಲೆಯಲ್ಲಿ ಖಾಸಗೀ ಬಸ್ಸುಗಳ ಭರಾಟೆಯ ನಡುವೆ ಸರಕಾರಿ ಬಸ್ಸುಗಳು ಮೂಲೆಗುಂಪಾಗತೊಡಗಿದೆ. ಇದರಿಂದಾಗಿ ಕಡಿಮೆ ಆದಾಯಕ್ಕೆ ದುಡಿಯುವ ಜನ ಸಾಮಾನ್ಯರು ಸಮಸ್ಯೆಯನ್ನು ಅನುಭವಿಸುವಂತಾಗಿದೆ. ಸರಕಾರಿ ಬಸ್ ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಸೇವೆಯು ದಕ್ಷಿಣ ಕನ್ನಡ ಜಿಲ್ಲೆಯ ಮಹಿಳೆಯರಿಗೂ ಸಿಗುವಂತಾಗಬೇಕು. ಸದ್ಯ ಜಿಲ್ಲೆಯಲ್ಲಿ ಬೀಡಿ ಉದ್ದಿಮೆ ನೆಲಕಚ್ಚಿದ ನಂತರ ಈಗ ಮಹಿಳೆಯರೂ ದೊಡ್ಡ ಸಂಖ್ಯೆಯಲ್ಲಿ ಸಣ್ಣ ಪುಟ್ಟ ಅಂಗಡಿ ಮುಗ್ಗಟ್ಟುಗಳಲ್ಲಿ, ಬಟ್ಟೆಯಂಗಡಿಗಳಲ್ಲಿ, ಆಸ್ಪತ್ರೆ, ಕಾಲೇಜುಗಳಲ್ಲಿ ಕಡಿಮೆ ಸಂಬಳಕ್ಕೆ ದುಡಿಯುತ್ತಿದ್ದು ಅಂತಹ ಮಹಿಳೆಯರಿಗೆ ಸರಕಾರದ ಈ ಯೋಜನೆಯು ಒಂದಷ್ಟು ಅನುಕೂಲಕರವಾಗಲಿದೆ ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಜೆಎಂಎಸ್ ಜಿಲ್ಲಾ ಕಾರ್ಯದರ್ಶಿ ಭಾರತಿ ಬೋಳಾರರವರು, ಜನರ ಬೇಡಿಕೆಯ ಅನುಗುಣವಾಗಿ ಮಂಜೂರಾಗದೆ ಬಾಕಿ ಇರುವ ಪ್ರದೇಶಗಳಿಗೂ ಶೀಘ್ರವೇ ಬಸ್ ಸಂಚಾರ ಸೇವೆ ಒದಗಿಸಬೇಕು. ಇಲ್ಲದಿದ್ದಲ್ಲಿ ಜಿಲ್ಲೆಯಾದ್ಯಂತ ಪ್ರಬಲ ಜನಾಂದೋಲನವನ್ನು ನಡೆಸಲು ಜನವಾದಿ ಮಹಿಳಾ ಸಂಘಟನೆ ಸಜ್ಜಾಗಲಿದೆ ಎಂದು ಜಿಲ್ಲಾಡಳಿತಕ್ಕೆ ಎಚ್ಚರಿಕೆ ನೀಡಿದರು. ಬೀಡಿ ಕಾರ್ಮಿಕರ ಸಂಘಟನೆಯ ಜಿಲ್ಲಾಧ್ಯಕ್ಷರಾದ ವಸಂತ ಆಚಾರಿಯವರು ಮಾತನಾಡಿ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಜೆಎಂಎಸ್ ಜಿಲ್ಲಾ ನಾಯಕರಾದ ವಿಲಾಸಿನಿ ತೊಕ್ಕೊಟ್ಟು, ಜಯಲಕ್ಷ್ಮಿ, ಪ್ರಮೀಳಾ ಶಕ್ತಿನಗರ, ಭವ್ಯ, ರಶ್ಮಿ, ಲೀಲಾ ಜೆ, ದೀಕ್ಷಿತ ಜಲ್ಲಿಗುಡ್ಡ, ಪ್ರಮೀಳ ದೇವಾಡಿಗ, ಸಿಐಟಿಯು ಜಿಲ್ಲಾ ನಾಯಕರಾದ ಸುನಿಲ್ ಕುಮಾರ್ ಬಜಾಲ್, ಯೋಗೀಶ್ ಜಪ್ಪಿನಮೊಗರು, ಸುಂದರ ಕುಂಪಲ, ನಾರಾಯಣ ತಲಪಾಡಿ, ದಯಾನಂದ ಶೆಟ್ಟಿ ಮುಂತಾದವರು ಉಪಸ್ಥಿತರಿದ್ದರು.



ಮೋದಿ ಅಮೆರಿಕ ಭೇಟಿ ಫಲವೇನು?
ಕೆಳ ಹಂತದ ಸ್ಥಾನಮಾನದ ವೈಭವೀಕರಣ

ಪ್ರಕಾಶ್ ಕಾರತ್

ಅಮೆರಿಕದೊಂದಿಗೆ ವ್ಯೂಹಾತ್ಮಕ ಮತ್ತು ಮಿಲಿಟರಿ ಸಂಬಂಧಗಳಲ್ಲಿ ಭಾರತದ ಬಂಧ ಮತ್ತಷ್ಟು ಹೆಚ್ಚಾಗಿವೆ ಎನ್ನುವುದು ಅಮೆರಿಕಕ್ಕೆ ಪ್ರಧಾನಿ ನರೇಂದ್ರ ಮೋದಿಯವರ ಈಚಿನ ಭೇಟಿಯಿಂದ ಸ್ಪಷ್ಟವಾಗಿರುವ ಅಂಶವಾಗಿದೆ. 'ಎರಡು ಪ್ರಜಾಪ್ರಭುತ್ವಗಳ ನಡುವಿನ ಪಾಲುದಾರಿಕೆ' ಮತ್ತು ಹಂಚಿಕೊಂಡ ಮೌಲ್ಯಗಳು ಎಂಬಿತ್ಯಾದಿ ಅಬ್ಬರದ ಮಾತುಗಳು ಏನೇ ಇರಬಹುದು, ಚೀನಾವನ್ನು ಆರ್ಥಿಕವಾಗಿಯೂ ಮಿಲಿಟರಿಯಾಗಿಯೂ ಎದುರಿಸಲು ಅಗತ್ಯವಾದ ತನ್ನ ಕಾರ್ಯವ್ಯೂಹದಲ್ಲಿ ಭಾರತವನ್ನು ಒಂದು ದೃಢವಾದ ಪಾಲುದಾರನನ್ನಾಗಿ ಮಾಡಿಕೊಳ್ಳಬೇಕಾದ ಅನಿವಾರ್ಯತೆಯಿಂದ ಈ ಆಳವಾದ ಹಾಗೂ ಸಮಗ್ರವಾದ ಬಾಂಧವ್ಯವನ್ನು ಹೊಂದಲಾಗಿದೆ.

ಭಾರತ ಕುರಿತ ಅಮೆರಿಕ ಧೋರಣೆ ಏನೆಂಬುದು 2002ರಲ್ಲಿ ಪೆಂಟಗನ್ ಪ್ರಾಯೋಜಿಸಿದ್ದ ಅಧ್ಯಯನದಲ್ಲಿ ಗೊತ್ತಾಗುತ್ತದೆ. ಭಾರತವು ಚೀನಾವನ್ನು ಎದುರಿಸಲು ಇರುವ ಗುರಾಣಿಯಂತೆ ಎಂಬುದಾಗಿ ಆ ವರದಿ ಹೇಳಿತ್ತು. ಅಧಿಕೃತ ಭೇಟಿ ವೇಳೆ ಮೋದಿಗೆ ವಾಷಿಂಗ್ಟನ್‌ನಲ್ಲಿ ಸಿಕ್ಕ ಸ್ವಾಗತ, ಸರ್ಕಾರಿ ಔತಣಕೂಟ ಮತ್ತು ಕಾಂಗ್ರೆಸ್ (ಸಂಸತ್) ಉದ್ದೇಶಿಸಿ ಭಾಷಣ ಮಾಡಲು ಎರಡನೇ ಬಾರಿಗೆ ಸಿಕ್ಕ ಅವಕಾಶ –ಇವೇ ಮೊದಲಾದವು ಚೀನಾವನ್ನು ತಡೆಯಲು ಹಾಗೂ ಪ್ರತ್ಯೇಕಿಸಲು ಹಿಂದೆ ಮಾಡಿದ ಪ್ರಯತ್ನಗಳು ಅಪೇಕ್ಷಿತ ಫಲ ನೀಡಿಲ್ಲ ಎನ್ನುವುದನ್ನು ಜೋ ಬೈಡೆನ್ ಆಡಳಿತ ಮನವರಿಕೆ ಮಾಡಿಕೊಂಡುವಂತಹ ಸಂದರ್ಭದಲ್ಲಿ ಘಟಿಸಿವೆ.

ಭಾರತಕ್ಕೆ ಅಮೆರಿಕದ ರಾಷ್ಟ್ರೀಯ ಸಲಹೆಗಾರ ಜೇಕ್ ಸಲ್ಲಿವಾನ್‌ರ ಭೇಟಿ ಸೇರಿದಂತೆ ಮೋದಿ ಭೇಟಿಯ ಸಿದ್ಧತೆಗಳು ಮತ್ತು ಭೇಟಿಯ ಕೊನೆಯಲ್ಲಿ ಹೊರಡಿಸಿದ ಅಂತಿಮ ಜಂಟಿ ಹೇಳಿಕೆಯು 'ಇಂಡೋ–ಪೆಸಿಫಿಕ್' ವಲಯದಲ್ಲಿ ಭಾರತವನ್ನು ಒಂದು ಪ್ರಮುಖ ಪಾತ್ರಧಾರಿಯನ್ನಾಗಿ ಮಾಡುವುದು ಕೇಂದ್ರ ವಸ್ತುವಾಗಿರುವುದನ್ನು ಸ್ಪಷ್ಟಪಡಿಸುತ್ತದೆ. ಹಿಂದೂ ಮಹಾಸಾಗರ (ಇಂಡಿಯನ್ ಓಷಿಯನ್) ವಲಯದಲ್ಲಿ ಕೇಂದ್ರ ಪಾತ್ರ ನಿರ್ವಹಿಸುವಂತೆ ಭಾರತವನ್ನು ಸೆಳೆಯುವ ಉದ್ದೇಶದಿಂದ 'ಇಂಡೋ–ಪೆಸಿಫಿಕ್' ಎಂಬ ಪದವನ್ನು ಟಂಕಿಸಲಾಗಿದೆ.

ಜಂಟಿ ಹೇಳಿಕೆಯಲ್ಲಿ ಕ್ವಾಡ್‌ಗೆ ಹೆಚ್ಚಿನ ಪ್ರಾಮುಖ್ಯ ನೀಡಲಾಗಿದೆ. ಮೊದಲ ಪ್ಯಾರಾಗ್ರಾಫ್‌ನಲ್ಲೇ ಅದನ್ನು ನಮೂದಿಸಲಾಗಿದೆ. ರಕ್ಷಣಾ ಉತ್ಪಾದನೆ ಮತ್ತು ಉನ್ನತ ತಂತ್ರಜ್ಞಾನದಲ್ಲಿ ಸಹಕಾರ ಕುರಿತ ಮಾತುಗಳನ್ನು ಬದಿಗೊತ್ತಿ ಕ್ವಾಡ್‌ಅನ್ನು ಒಂದು ಭದ್ರತಾ ಮೈತ್ರಿಕೂಟವಾಗಿಸಲು ಮಹತ್ವ ನೀಡಲಾಗಿದೆ.

2005ರಲ್ಲಿ ರಕ್ಷಣಾ ಚೌಕಟ್ಟು ಒಡಂಬಡಿಕೆ

2005ರಲ್ಲಿ ನಾಗರಿಕ ಪರಮಾಣು ಒಪ್ಪಂದದ ಆಫರ್ ನೀಡಿದ್ದು ಭಾರತವನ್ನು ವ್ಯೂಹಾತ್ಮಕ ಮೈತ್ರಿಗೆ ಸೆಳೆಯಲು ಅಮೆರಿಕ ಮೊದಲು ಕೈಗೊಂಡ ಪ್ರಮುಖ ಉಪಕ್ರಮವಾಗಿತ್ತು. ನಾಗರಿಕ ಪರಮಾಣು ತಂತ್ರಜ್ಞಾನವು ಭಾರತಕ್ಕೆ ಅಷ್ಟೊಂದು ಪ್ರಯೋಜನಕಾರಿಯಲ್ಲದ ಕೊಡುಗೆಯಾಗಿತ್ತು. ಇದಕ್ಕೆ ಪ್ರತಿಯಾಗಿ ರಕ್ಷಣಾ ಚೌಕಟ್ಟು ಒಡಂಬಡಿಕೆ ಮಾಡಿಕೊಳ್ಳಬೇಕೆಂಬ ಷರತ್ತು ಅದರೊಂದಿಗಿತ್ತು. ಪರಮಾಣು ಒಪ್ಪಂದಕ್ಕೆ ಪೀಠಿಕೆಯಾಗಿ ಈ ಒಪ್ಪಂದಕ್ಕೆ 2005ರ ಜೂನ್‌ನಲ್ಲಿ ಸಹಿ ಹಾಕಲಾಯಿತು. ಎಡ ಪಕ್ಷಗಳು ಒಡ್ಡಿದ ಪ್ರಬಲ ವಿರೋಧವು ಅದರ ಅನೇಕ ಅಂಶಗಳ ಅನುಷ್ಠಾನಕ್ಕೆ ಅಡ್ಡಿಯಾಯಿತು. ರಕ್ಷಣಾ ಚೌಕಟ್ಟು ಒಡಂಬಡಿಕೆಯಲ್ಲಿದ್ದ ಅಂತರ್ ಕಾರ್ಯಾಚರಣೆ ಒಪ್ಪಂದಗಳ ಅನುಷ್ಠಾನಕ್ಕೂ ಅಡ್ಡಿಯಾಯಿತು. ಹೀಗಾಗಿ, ಮೋದಿ ಸರಕಾರದ ಕಳೆದ ಕೆಲವು ವರ್ಷಗಳಲ್ಲಿ, ಉಭಯ ಸಶಸ್ತ್ರ ಪಡೆಗಳ ನಡುವಿನ ಸಾಗಾಟ ಅನುಕೂಲ ಮತ್ತು ಅಂತರ್‌ಕಾರ್ಯಾಚರಣೆ ಖಾತರಿಪಡಿಸಲು ತಥಾಕಥಿತ ನಾಲ್ಕು ತಳಪಾಯ ಒಪ್ಪಂದಗಳಿಗೆ ಸಹಿ ಹಾಕಲಾಯಿತು.

ಜಂಟಿ ಕಸರತ್ತುಗಳು, ಅಮೆರಿಕ ನೌಕಾಪಡೆಯ ನೌಕೆಗಳ ನಿರ್ವಹಣೆ ಹಾಗೂ ರಿಪೇರಿಗೆಂದು ಭಾರತೀಯ ಶಿಪ್‌ಯಾರ್ಡ್‌ಗಳಲ್ಲಿ ಸೌಲಭ್ಯ ಕೇಂದ್ರ ಸೃಷ್ಟಿ, ಪರಸ್ಪರರ ಮಿಲಿಟರಿ ಸಂಸ್ಥೆಗಳಲ್ಲಿ ಸಂವಹನ ಅಧಿಕಾರಿಗಳ ನೇಮಕ ಮತ್ತು ಎರಡೂ ಸಶಸ್ತ್ರ ಪಡೆಗಳ ಅಂತರ್‌ಕಾರ್ಯಾಚರಣೆಗೆ ಕ್ರಮಗಳನ್ನು ಕೈಗೊಳ್ಳುವ ಸಹಿತವಾಗಿ ಮಿಲಿಟರಿ ಸಂಬಂಧದಲ್ಲಿ ಆಗಿರುವ ಪ್ರಗತಿಯನ್ನು ಜಂಟಿ ಹೇಳಿಕೆ ದಾಖಲಿಸಿದೆ.

ಇದನ್ನು 'ಒಂದು ರೀತಿಯ ಮೈತ್ರಿಕೂಟ' ಎಂದು ಅಮೆರಿಕದ ಸಮರ ವ್ಯೂಹದ ತಜ್ಞರೊಬ್ಬರು ವರ್ಣಿಸಿದ ಮಟ್ಟಕ್ಕೆ ಈ ಎಲ್ಲವೂ ತಲುಪಿದವು. ಅಂದರೆ, ಭಾರತ–ಅಮೆರಿಕ ಮಿಲಿಟರಿ ಬಾಂಧವ್ಯವು ಮುಂದೆ ಒಂದು ಮೈತ್ರಿಕೂಟವಾಗುವ ಎಲ್ಲ ಲಕ್ಷಣಗಳನ್ನು ಹೊಂದಿದೆ ಎನ್ನುವುದು ಅದರ ಅರ್ಥವಾಗಿದೆ. ನ್ಯಾಟೋ ಒಪ್ಪಂದದ ಆರ್ಟಿಕಲ್ 5ರಂಥ ಅಂಶವನ್ನು ಅದು ಹೊರತುಪಡಿಸಿದ್ದಾಗಿರುತ್ತದೆ. ಕೂಟದ ಒಂದು ದೇಶದ ಮೇಲಿನ ಆಕ್ರಮಣವನ್ನು ಇನ್ನೊಂದು ದೇಶದ ಮೇಲಿನ ದಾಳಿಯೆಂದೇ ತಿಳಿಯಬೇಕಾಗುತ್ತದೆಂದು ಈ ಆರ್ಟಿಕಲ್ 5 ವ್ಯಾಖ್ಯಾನಿಸುತ್ತದೆ.

ಉನ್ನತ ತಂತ್ರಜ್ಞಾನದಲ್ಲಿ ಸಹಕಾರ ಕುರಿತು ಭಾರಿ ಮಾತುಗಳನ್ನು ಆಡಲಾಗಿತ್ತು. 'ತಂತ್ರಜ್ಞಾನವು ನಮ್ಮ ಪಾಲುದಾರಿಕೆಯು ಆಳಗೊಳ್ಳುವಲ್ಲಿ ನಿರ್ಣಾಯಕ ಪಾತ್ರ ವಹಿಸಲಿದೆ' ಎಂದು ಜಂಟಿ ಹೇಳಿಕೆ ಅಭಿಪ್ರಾಯಪಟ್ಟಿದೆ. ಬಾಹ್ಯಾಕಾಶ ತಂತ್ರಜ್ಞಾನದಿಂದ ಹಿಡಿದು ಕ್ವಾಂಟಂ ಸಂಶೋಧನೆ ವರೆಗೆ, ನಿರ್ಣಾಯಕ ಖನಿಜಗಳು ಮತ್ತು ಕೃತಕ ಬುದ್ಧಿಮತ್ತೆ ಕ್ಷೇತ್ರಗಳಲ್ಲಿ ಜಂಟಿ ಸಂಶೋಧನೆ ಹಾಗೂ ಸಹಕಾರ ಅಗತ್ಯ ಎಂದು ಪಟ್ಟಿ ಮಾಡಲಾಗಿದೆ. ಆದರೆ, ಹೇಳಿಕೆಯನ್ನು ಗಮನವಿಟ್ಟು ಓದಿದರೆ ತಂತ್ರಜ್ಞಾನದ ವಾಸ್ತವ ವರ್ಗಾವಣೆ ಇಲ್ಲದಿರುವುದು ಸ್ಪಷ್ಟವಾಗಿ ತಿಳಿಯುತ್ತದೆ. ತೀರಾ ಹೆಚ್ಚೆಂದರೆ ಉದ್ದೇಶದ ಘೋಷಣೆ ಮಾತ್ರ ಅದರಲ್ಲಿದೆ.

ಜನರಲ್ ಇಲೆಕ್ಟ್ರಿಕ್ ಮತ್ತು ಎಚ್‌ಎಎಲ್ ನಡುವೆ ಸಹಿ

ರಕ್ಷಣಾ ಉತ್ಪಾದನೆ ಸಹಕಾರ ಕ್ಷೇತ್ರದ ಬಗ್ಗೆ ಹೇಳುವುದಾದರೆ, ಲಘು ಸಮರ ವಿಮಾನ ಎಂಕೆ 2 ತಯಾರಿಕೆಗೆ ಅಮೆರಿಕದ ಜನರಲ್ ಇಲೆಕ್ಟ್ರಿಕ್ ಮತ್ತು ಹಿಂದೂಸ್ತಾನ್ ಏರೋನಾಟಿಕ್ಸ್ ಸಂಸ್ಥೆ (ಎಚ್‌ಎಎಲ್) ನಡುವೆ ಸಹಿ ಹಾಕಲಾಗಿರುವ ಬಗ್ಗೆ ಭಾರಿ ಪ್ರಚಾರ ನಡೆಸಲಾಗಿದೆ. ಆದರೆ ಇದು ಅಮೆರಿಕದ ಜೆಟ್ ಇಂಜಿನ್ ತಂತ್ರಜ್ಞಾನ ವರ್ಗಾವಣೆಗೆ ಹಾದಿ ಮಾಡಿಕೊಡುತ್ತದೆ ಎನ್ನುವುದು ಮಾತ್ರ ಹಾದಿ ತಪ್ಪಿಸುವ ವಿಚಾರವಾಗಿದೆ. ಎಚ್‌ಎಎಲ್‌ನಲ್ಲಿ ಜೆಟ್ ಇಂಜಿನ್ ಜೋಡಣೆ (ಅಸೆಂಬಲ್) ಮಾಡುವುದರಲ್ಲಿ ಹೆಚ್ಚಿನ ತಂತ್ರಜ್ಞಾನ ವರ್ಗಾವಣೆ ಒಳಗೊಂಡಿರುವುದಿಲ್ಲ. ಬಹಳಷ್ಟು ಮಹತ್ವದ ತಂತ್ರಜ್ಞಾನವನ್ನು ತಡೆಹಿಡಿಯಲಾಗಿದೆ.

ಸಶಸ್ತ್ರ ಡ್ರೋನ್‌ಗಳನ್ನು ಖರೀದಿಸುವಂತೆ ತೀವ್ರ ಒತ್ತಡ

ಮೋದಿ ಭೇಟಿಯನ್ನು ಎರಡು ಉದ್ದೇಶಕ್ಕೆ ಬಳಸುವುದು ಅಮೆರಿಕದ ಗುರಿಯಾಗಿದೆ. ರಷ್ಯಾದಿಂದ ರಕ್ಷಣಾ ಸಾಧನಗಳ ಸರಬರಾಜಿನಿಂದ ಭಾರತವನ್ನು ದೂರ ಸರಿಸಿ ತಾನೇ ಭಾರತಕ್ಕೆ ರಕ್ಷಣಾ ಸಾಮಗ್ರಿಗಳ ದೊಡ್ಡ ಸರಬರಾಜು ದೇಶವಾಗುವುದು ಅದರ ಮೊದಲ ಉದ್ದೇಶವಾಗಿದೆ. ಅಂತರ್‌ಕಾರ್ಯಾಚರಣೆ ಹೆಚ್ಚಿಸುವುದು ಹಾಗೂ ಕ್ವಾಡ್ ಮತ್ತು ಕ್ವಾಡ್ ಹಾಗೂ ಹಿಂದೂ ಮಹಾಸಾಗರ ವಲಯದಲ್ಲಿ ಭೂಮಿಕೆ ನಿಭಾಯಿಸಲು ಭಾರತೀಯ ಮಿಲಿಟರಿಯನ್ನು ಸನ್ನದ್ಧಗೊಳಿಸುವುದು ಕೂಡ ರಕ್ಷಣಾ ಕೈಗಾರಿಕೆ ಸಹಕಾರವನ್ನು ವಿನ್ಯಾಸಗೊಳಿಸಿರುವುದರ ಉದ್ದೇಶವಾಗಿದೆ. ಆ ಕಾರಣದಿಂದಲೇ ಸುಮಾರು 300 ಕೋಟಿ ಡಾಲರ್ ವೆಚ್ಚದಲ್ಲಿ ಎಂಕ್ಯೂ–9ಬಿ ಗಾರ್ಡಿಯನ್ ಸಶಸ್ತ್ರ ಡ್ರೋನ್‌ಗಳನ್ನು ಖರೀದಿಸುವಂತೆ ಭಾರತದ ಮೇಲೆ ಅಮೆರಿಕ ತೀವ್ರ ಒತ್ತಡ ಹೇರಿದೆ. ಹೆಚ್ಚು ವೆಚ್ಚದಾಯಕವಾಗಿದ್ದರೂ ಮತ್ತು ಹೊಸ ತಲೆಮಾರಿನ ಡ್ರೋನ್‌ಗಳಿಗಿಂತ ನಿಧಾನಕ್ಕೆ ಚಲಿಸುವವಾದರೂ ಈ ಮಾರಕ ಡ್ರೋನ್‌ಗಳನ್ನು ಹಿಂದೂ ಮಹಾಸಾಗರ ಪ್ರದೇಶದಲ್ಲಿ ಮಾರಿಟೈಮ್ ಡೊಮೇನ್ ಅವೇರ್‌ನೆಸ್ (ಎಂಡಿಎ) ಅಡಿ ಬೇಹುಗಾರಿಕೆ ಮಾಹಿತಿ ಸಂಗ್ರಹಕ್ಕೆ ಮತ್ತು ಕಣ್ಗಾವಲಿಗೆ ಭಾರತ ಬಳಸಬೇಕೆನ್ನುವುದು ಅಮೆರಿಕದ ಬಯಕೆಯಾಗಿದೆ.

ಭಾರತದ ವ್ಯೂಹಾತ್ಮಕ ಸ್ವಾಯತ್ತೆಯ ಇನ್ನಷ್ಟು ಕುಸಿತ ಮತ್ತು ದೇಶದ ಸ್ವತಂತ್ರ ವಿದೇಶಾಂಗ ನೀತಿಗೆ ಸ್ವಯಂ ಆಗಿ ಸಂಕೋಲೆ ತೊಡಿಸಿಕೊಳ್ಳುವಿಕೆ–ಇವೇ ಮೋದಿಯವರ ಅಮೆರಿಕ ಭೇಟಿಯ ಒಟ್ಟಾರೆ ಫಲಿತಾಂಶ ಆಗಿದೆ.

ಅಮೆರಿಕದ ಖಾಸಗಿ ಕಂಪನಿಗೆ 11,000 ಕೋಟಿ ರೂ. ಸಬ್ಸಿಡಿ

ಅಮೆರಿಕದ ಒಂದು ಖಾಸಗಿ ಕಂಪನಿಯಾದ ಮೈಕ್ರಾನ್ ಟೆಕ್ನಾಲಜಿ ಗುಜರಾತ್‌ನಲ್ಲಿ ಒಂದು ಸೆಮಿಕಂಡಕ್ಟರ್ ಘಟಕವನ್ನು ಸ್ಥಾಪಿಸಲು ಅಬ್ಬರದ ಪ್ರಚಾರದೊಂದಿಗೆ ಹೂಡಿಕೆ ಮಾಡಿದೆ. ಆದರೆ ಇದು ವಾಸವವಾಗಿ ಅಮೆರಿಕದ ಕಾರ್ಪೊರೇಟ್ ಕಂಪನಿಗಳಿಗೆ ಭಾರತೀಯ ಕೊಡುಗೆಯಾಗಿದೆ. ಸೆಮಿಕಂಡಕ್ಟರ್‌ಗಳ ಜೋಡಣೆ ಮತ್ತು ಪರೀಕ್ಷಾ ಸೌಲಭ್ಯದ ಸ್ಥಾಪನೆಗಾಗಿ ಮೈಕ್ರಾನ್ 825 ದಶಲಕ್ಷ ಡಾಲರ್ ವೆಚ್ಚ ಮಾಡಬೇಕಿದೆ. ಆದರೆ ಅದು ಸೆಮಿಕಂಡಕ್ಟರ್‌ಗಳ ಫ್ಯಾಬ್ರಿಕೇಶನ್‌ಗೆ ಅಲ್ಲ ಎನ್ನುವುದನ್ನು ಗಮನಿಸಬೇಕು. ಈ ಸಂಸ್ಥೆಯ ಒಟ್ಟು ವೆಚ್ಚ 2.75 ಶತಕೋಟಿ ಡಾಲರ್ ಆಗಿದ್ದು ಭಾರತ ಸರಕಾರ ಶೇಕಡ 50ರವರೆಗೆ ಸಬ್ಸಿಡಿ ಒದಗಿಸುತ್ತದೆ. ಅಂದರೆ ಈ ಸಬ್ಸಿಡಿ ಮೊತ್ತ 11,000 ಕೋಟಿ ರೂಪಾಯಿ ಆಗುತ್ತದೆ. ಗುಜರಾತ್ ಸರಕಾರ ಶೇಕಡ 20 ಸಬ್ಸಿಡಿ ನೀಡುತ್ತದೆ. ಅಮೆರಿಕದ ಕಂಪನಿಯೊಂದರ ಲಾಭಕ್ಕಾಗಿ ಭಾರತದ ಸಾರ್ವಜನಿಕ ಹಣವನ್ನು ಈ ರೀತಿ ಖರ್ಚು ಮಾಡಲಾಗುತ್ತದೆ.

ದ್ವಿಪಕ್ಷೀಯ ಆರ್ಥಿಕ ಮತ್ತು ವಾಣಿಜ್ಯ ಸಂಬಂಧಗಳನ್ನು ಆಳಗೊಳಿಸುವ ಕುರಿತು ಮಾತನಾಡುವಾಗಲೇ ಟ್ರೇಡ್ ಅಗ್ರಿಮೆಂಟ್ಸ್ ಆ್ಯಕ್ಟ್‌ನ ನಿಯೋಜಿತ ರಾಷ್ಟ್ರ ಎಂದು ಭಾರತವನ್ನು ಮಾನ್ಯ ಮಾಡಬೇಕೆಂಬ ಭಾರತದ ಮನವಿಯನ್ನು ಅಮೆರಿಕ ಪುರಸ್ಕರಿಸಿಲ್ಲ. ಅಮೆರಿಕದ ಜನರಲೈಸ್ಡ್ ಸಿಸ್ಟಂ ಆಫ್ ಪ್ರಿಫರೆನ್ಸಸ್ ಪ್ರೋಗ್ರಾಮ್‌ನಡಿ ಭಾರತದ ಸ್ಥಾನಮಾನ ಮರಳಿ ಸ್ಥಾಪಿಸಬೇಕೆಂಬ ಕೋರಿಕೆಯನ್ನು ಕೂಡ ಅದು ಮನ್ನಿಸಿಲ್ಲ.

ಪ್ರಜಾಪ್ರಭುತ್ವದ ಮೇಲಿನ ದಾಳಿ ವಿಚಾರದ ಪ್ರಸ್ತಾಪವಿಲ್ಲ

ಭಾರತದಲ್ಲಿ ಪ್ರಜಾಪ್ರಭುತ್ವದ ಮೇಲೆ ದಾಳಿ ಮತ್ತು ಅಲ್ಪಸಂಖ್ಯಾತರ ಹಕ್ಕುಗಳ ನಿರಾಕರಣೆ ವಿಚಾರವನ್ನು ಅಧ್ಯಕ್ಷ ಬೈಡೆನ್ ಪ್ರಸ್ತಾಪಿಸಿದರೇ ಇಲ್ಲವೇ ಎನ್ನುವ ಬಗ್ಗೆ ಬಹಳ ಚರ್ಚೆ ನಡೆದಿದೆ. ಭಾರತದಲ್ಲಿ ಮಾನವ ಹಕ್ಕುಗಳು ಮತ್ತು ಜನತಾಂತ್ರಿಕ ಮೌಲ್ಯಗಳ ರಕ್ಷಣೆ ಅಗತ್ಯದ ಕುರಿತು ಮೋದಿಯೊಂದಿಗೆ ಚರ್ಚಿಸುವಂತೆ ಅಮೆರಿಕ ಕಾಂಗ್ರೆಸ್‌ನ 75 ಸಂಸದರು ಬೈಡೆನ್‌ರನ್ನು ಆಗ್ರಹಿಸಿದ್ದರು. ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳ ಬಗ್ಗೆ ಬೈಡೆನ್ ಆಡಳಿತ ಹೆಚ್ಚು ದೃಢವಾಗಿರಬಹುದೆಂದು ಕೆಲವು ಉದಾರವಾದಿಗಳ ವಲಯ ನಿರೀಕ್ಷಿಸಿತ್ತು. ಆದರೆ ಅಮೆರಿಕದ ಯಾವುದೇ ಸರಕಾರದಿಂದ ಅದನ್ನು ನಿರೀಕ್ಷಿಸುವುದು ಭ್ರಮೆಯಾಗಿದೆ. ವಾಸ್ತವವಾಗಿ ಅಮೆರಿಕ ಸದಾ ಬಲಪಂಥೀಯ ಕಮ್ಯೂನಿಸ್ಟ್–ವಿರೋಧಿ ಮಿಲಿಟರಿ ಸರ್ವಾಧಿಕಾರಿಗಳೊಂದಿಗೆ ವ್ಯವಹರಿಸಲು ಆದ್ಯತೆ ನಿಡುತ್ತದೆ. ಬೈಡೆನ್ ಆಡಳಿತದ ಬಗ್ಗೆ ಹೇಳುವುದಾದರೆ, ಹಿಂದಿನ ಅಮೆರಿಕನ್ ಸರಕಾರಗಳಂತೆ ಅಮೆರಿಕ ಸಾಮ್ರಾಜ್ಯಶಾಹಿಯ ಭೌಗೋಳಿಕ ಹಿತಾಸಕ್ತಿಗಳಿಗೇ ಅದು ಮಹತ್ವ ನೀಡುತ್ತದೆ.

ಅಮೆರಿಕ ಪ್ರವಾಸ ಹಾಗೂ ಅದರ ಫಲಿತಾಂಶವು ನರೇಂದ್ರ ಮೋದಿಗೆ ಭಾರತದೊಳಗೆ ಇಮೇಜ್ ಹೆಚ್ಚಿಸಿಕೊಳ್ಳಲು ಒಂದು ಸಾಧನವಾಗಬಹುದಾಗಿದೆ. ಆರ್‌ಎಸ್‌ಎಸ್ ಯಾವತ್ತೂ ಸಾಮ್ರಾಜ್ಯಶಾಹಿ–ಪರವಾಗಿದೆ. ದೊಡ್ಡ ಬಂಡವಾಳಶಾಹಿ ನೇತೃತ್ವದ ಭಾರತೀಯ ಆಳುವ ವರ್ಗಗಳು ಕೂಡ ಸದಾ ಕಾಲ ಅಮೆರಿಕದೊಂದಿಗೆ ವ್ಯೂಹಾತ್ಮಕ ಮೈತ್ರಿ ಹೊಂದಿರಬೇಕೆಂದೇ ಬಯಸುತ್ತವೆ. ಈ ದೃಷ್ಟಿಕೋನವೇ ಕಾರ್ಪೊರೇಟ್ ಮಾಧ್ಯಮದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಆ ಕಾರಣದಿಂದಲೇ ಅಮೆರಿಕದ ಮಿತ್ರನಾಗಿ ಭಾರತದ ಕೆಳಹಂತದ ಸ್ಥಾನಮಾನ ಕೂಡ ಈ ಮಾಧ್ಯಮದವರಿಗೆ ಮಹಾ ಸಾಧನೆಯಾಗಿದ್ದು ಒಂದು ಸಂಭ್ರಮದ ಸಂಗತಿಯಾಗಿದೆ.

ಭಾರತದ ವ್ಯೂಹಾತ್ಮಕ ಸ್ವಾಯತ್ತೆಯ ಇನ್ನಷ್ಟು ಕುಸಿತ ಮತ್ತು ದೇಶದ ಸ್ವತಂತ್ರ ವಿದೇಶಾಂಗ ನೀತಿಗೆ ಸ್ವಯಂ ಆಗಿ ಸಂಕೋಲೆ ತೊಡಿಸಿಕೊಳ್ಳುವಿಕೆ –ಇವೇ ಮೋದಿಯವರ ಅಮೆರಿಕ ಭೇಟಿಯ ಒಟ್ಟಾರೆ ಫಲಿತಾಂಶ ಆಗಿದೆ. ಜುಲೈನಲ್ಲಿ ನವದೆಹಲಿಯಲ್ಲಿ ದೈಹಿಕ ಉಪಸ್ಥಿತಿಯಲ್ಲಿ ನಡೆಯಬೇಕಿದ್ದ ಶಾಂಘಾಯ್ ಸಹಕಾರ ಸಂಸ್ಥೆಯ (ಎಸ್‌ಸಿಒ) ಶೃಂಗ ಸಭೆಯನ್ನು ಈಗಾಗಲೇ ವರ್ಚುವಲ್ (ಆನ್‌ಲೈನ್) ಸಭೆಯಾಗಿ ಪರಿವರ್ತಿಸಲಾಗಿದೆ.

ಮೋದಿ ಸರಕಾರ ಅಮೆರಿಕ–ಪರ ಧೋರಣೆ ತಳೆದ ಪರಿಣಾಮವಾಗಿ ಹೆಚ್ಚೆಚ್ಚು ಬಹುಧ್ರುವೀಯಗೊಳ್ಳುತ್ತಿರುವ ಜಗತ್ತಿನಲ್ಲಿ ಸೃಜನಾತ್ಮಕ ಹಾಗೂ ಸ್ವತಂತ್ರವಾಗಿ ನಿರ್ವಹಿಸಲು ಭಾರತಕ್ಕೆ ಲಭ್ಯವಿರುವ ಮಹಾನ್ ಅವಕಾಶ ಮೊಟಕುಗೊಂಡಿದೆ.

ಅನು: ವಿಶ್ವ

ಕಾಂಗ್ರೆಸ್ ಚುನಾವಣಾ ಸಮಯದಲ್ಲಿ ತಾನು ನೀಡಿದ ಭರವಸೆಯಂತೆ ಬಡತನ ರೇಖೆಗಿಂತ ಕೆಳಗಿನ (BPL) ಕುಟುಂಬಗಳ ಸದಸ್ಯರಿಗೆ ತಲಾ 10 ಕೆಜಿ ಅಕ್ಕಿ ಕೊಡಲು ಮುಂದಾಗಿತ್ತು. ಆದರೆ, ಮೋದಿ ನೇತೃತ್ವದ ಕೇಂದ್ರ ಸರ್ಕಾರ ಇದಕ್ಕೆ ಬೇಕಾದ ಹೆಚ್ಚುವರಿ ಅಕ್ಕಿ ಕೊಡಲು ನಿರಾಕರಿಸುತ್ತಿದೆ. ಹಾಗೂ ಬೇರೆ ರಾಜ್ಯಗಳಿಂದ ಅಕ್ಕಿ ಖರೀದಿಸುವ ರಾಜ್ಯ ಸರ್ಕಾರದ ಪ್ರಯತ್ನ ಯಶಸ್ವಿಯಾಗದ ಕಾರಣ ನೀಡಿ, ಅಕ್ಕಿ ಸಿಗುವ ವರೆಗೆ ಹೆಚ್ಚುವರಿ 5 ಕೆ.ಜಿ. ಅಕ್ಕಿಯ ಬದಲಾಗಿ ಕೆ.ಜಿ. ಅಕ್ಕಿಗೆ 34 ರೂ. ನಂತೆ ನಗದು ಕೊಡಲು ರಾಜ್ಯ ಸರ್ಕಾರ ಮುಂದಾಗಿದೆ. ಇದು ಎಷ್ಟರ ಮಟ್ಟಿಗೆ ಸರಿ ಎಂಬ ಚರ್ಚೆ ನಡೆಯುತ್ತಿದೆ. ಸಿಪಿಐ(ಎಂ) ಪಕ್ಷ ಸರ್ಕಾರದ ಈ ನೀತಿಯನ್ನು ಸ್ವಾಗತಿಸುತ್ತಲೇ, ನಗದು ನೀಡುವಿಕೆ ತಾತ್ಕಾಲಿಕ ವ್ಯವಸ್ಥೆಯಾಗಿರಬೇಕಷ್ಟೆ, ಅಕ್ಕಿ ದೊರಕಿದ ನಂತರ ಫಲಾನುಭವಿಗಳಿಗೆ ಅಕ್ಕಿಯನ್ನೇ ನೀಡಬೇಕು ಎಂದು ಸಿದ್ದರಾಮಯ್ಯನವರ ಸರ್ಕಾರವನ್ನು ಒತ್ತಾಯಿಯಿಸಿದೆ. ಯಾವುದೇ ಕಾರಣಕ್ಕೂ ನಗದು ನೀಡುವ ಯೋಜನೆಯನ್ನು ಮುಂದುವರಿಸಬಾರದು ಎಂದು ಸಿಪಿಐ(ಎಂ) ಆಗ್ರಹಪಡಿಸಿದೆ.

ಅಕ್ಕಿ ಬದಲು ನಗದು ಕೊಡಲು ರಾಜ್ಯ ಸರ್ಕಾರದ ನಿರ್ಧಾರ ಪಡಿತರ ವ್ಯವಸ್ಥೆಯ ಉಳಿವಿಗಾಗಿ ಬೇಕಿದೆ ಹೋರಾಟ

ಸಿ. ಸಿದ್ದಯ್ಯ



ಪಡಿತರ ವ್ಯವಸ್ಥೆಯ ನಾಶದ ಕಡೆಗೆ ಕೇಂದ್ರದ ಹೆಜ್ಜೆ

ಕೇಂದ್ರ ಸರ್ಕಾರ ಕೆ.ಜಿ. ಅಕ್ಕಿಗೆ ನಿಗಧಿಪಡಿಸಿರುವ 35.40 ರೂ. ದರ ನೀಡಲು ರಾಜ್ಯ ಸರ್ಕಾರ ಸಿದ್ದವಿದ್ದರೂ ಅಕ್ಕಿ ಕೊಡಲಾಗದು ಎನ್ನುತ್ತಿದೆ. ರಾಜ್ಯದ ಬಡ ಕುಟುಂಬಗಳಿಗೆ ಅಕ್ಕಿ ಕೊಡಿಸಬೇಕಾದ ಬಿಜೆಪಿಯ ಸಂಸದರು ಮತ್ತು ಶಾಸಕರು ಕೇಂದ್ರ ಸರ್ಕಾರದ ಅಕ್ಕಿ ನಿರಾಕರಣೆಯ ನಿಲುವಿನ ಪರ ನಿಂತು ವಾದ ಮಾಡತೊಡಗಿದ್ದಾರೆ. ರಾಜ್ಯಗಳು ಸಬ್ಸಿಡಿ ಮತ್ತು ಉಚಿತ ಆಹಾರ ಧಾನ್ಯಗಳನ್ನು ನೀಡುತ್ತಿರುವುದನ್ನು ಕೇಂದ್ರ ಸರ್ಕಾರ ಕೊನೆಗಾಣಿಸಲು ಪ್ರಯತ್ನಿಸುತ್ತಿದೆ. ಕೇಂದ್ರ ಸರ್ಕಾರ ಮತ್ತು ಬಿಜೆಪಿ ಅಕ್ಕಿಯಲ್ಲಿ ರಾಜಕೀಯ ಮಾಡುತ್ತಿದೆ.

ಕರ್ನಾಟಕದ ಬಡ ಕುಟುಂಬಗಳು ಕೇಂದ್ರದ ಮೇಲೆ ಒತ್ತಡ ತಂದು ಪ್ರಸ್ತುತ 10 ಕೆಜಿ ಅಕ್ಕಿ ಪಡೆಯಬಹುದೇನೊ. ಅಥವಾ ಬೇರೆ ರಾಜ್ಯಗಳಿಂದ ಅಕ್ಕಿ ಖರೀದಿಸಿ ಬಿಪಿಎಲ್ ಕುಟುಂಬಗಳಿಗೆ ಕೊಡಬಹುದೇನೊ. ಇದು ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರದ ಕಾಳಜಿಯ ಮೇಲೆ ನಿಂತಿದೆ. ಆದರೆ, ಬಾರತದಲ್ಲಿ ಈ ಪಡಿತರ ವ್ಯವಸ್ಥೆ ಉಳಿಯುತ್ತದೆಯೇ ಎಂಬ ಪ್ರಶ್ನೆ ಮೂಡಿದೆ. ಕೇಂದ್ರ ಸರ್ಕಾರ ಪಡಿತರ ವ್ಯವಸ್ಥೆಯನ್ನೇ ನಾಶ ಮಾಡಲು ನಿದಾನವಾಗಿ ಹೆಜ್ಜೆ ಇಡತೊಡಗಿದೆ. 'ಮೋದಿ ಸರ್ಕಾರ ಅಕ್ಕಿ ಕೊಡದಿದ್ದರೇನು? ಫಲಾನುಭವಿಗಳಿಗೆ ಅಕ್ಕಿಯ ಬದಲು ಹಣ ಕೊಡಿ' ಎಂಬ ಬಿಜೆಪಿ ನಾಯಕರ ಮಾತುಗಳಲ್ಲಿ ಈ ತಂತ್ರ ಅಡಗಿದೆ.

ಬಡವರನ್ನು ನೋಯಿಸುತ್ತಿರುವ ಮೋದಿ ಸರ್ಕಾರದ 'ಅಕ್ಕಿ ನೀತಿ'

ಎಲ್ಲರಿಗೂ ಆಹಾರ ಭದ್ರತೆ ಒದಗಿಸಲು, ಹಸಿವನ್ನು ಸಂಪೂರ್ಣವಾಗಿ ತೊಡೆದುಹಾಕಲು ಮತ್ತು ಮುಕ್ತ ಮಾರುಕಟ್ಟೆಯಲ್ಲಿ ಬೆಲೆ ಏರಿಕೆಯನ್ನು ನಿಯಂತ್ರಿಸಲು ಜಾರಿಗೆ ತಂದಿರುವ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ದುರ್ಬಲಗೊಳಿಸಲು ಕೇಂದ್ರ ಸರ್ಕಾರ ನಿಧಾನವಾಗಿ ಪ್ರಯತ್ನಿಸುತ್ತಿದೆ. ಮುಂಗಾರು ವೈಫಲ್ಯ, ಬರ, ಪ್ರವಾಹ ಮತ್ತು ಚಂಡಮಾರುತದಂತಹ ನೈಸರ್ಗಿಕ ವಿಕೋಪಗಳ ಸಮಯದಲ್ಲಿ ಮತ್ತು ಸಾಂಕ್ರಾಮಿಕ ರೋಗಗಳ ಸಮಯದಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯು ಜನರಿಗೆ ಬಹಳಷ್ಟು ಸಹಾಯವಾಗಿದೆ. ಇತ್ತೀಚಿನ ಕೊವಿಡ್–19ರ ಸಮಯದಲ್ಲಿ ಪಡಿತರ ವ್ಯವಸ್ಥೆಯ ಅವಶ್ಯಕತೆಯ ಬಗ್ಗೆ ನಮಗೆ ತಿಳಿದಿದೆ.

ಸಾರ್ವಜನಿಕ ಪೂರೈಕೆಯನ್ನು ಖಾಸಗೀಕರಣಗೊಳಿಸುವ ಪ್ರಯತ್ನ

ವಿಶ್ವ ವ್ಯಾಪಾರ ಸಂಸ್ಥೆಯ (WTO) ನಿಯಮಗಳನ್ನು ಒಪ್ಪಿಕೊಂಡು, ವ್ಯಾಪಾರ ಅನುಕೂಲ ಒಪ್ಪಂದಕ್ಕೆ (trade facilitation agreement-TFA) ಸಹಿ ಮಾಡಿರುವ ಕೇಂದ್ರ ಸರ್ಕಾರ, ಅದನ್ನು ಜಾರಿಗೆ ತರುವ ಸಲುವಾಗಿ ಸಾರ್ವಜನಿಕ ವಿತರಣಾ ಯೋಜನೆಗಳನ್ನು ಖಾಸಗೀಕರಣ ಮಾಡಲು ಹೊರಟಿದೆ. ಸಾರ್ವಜನಿಕ ವಿತರಣಾ ಯೋಜನೆಯಲ್ಲಿ ಖಾಸಗಿ ಸಹಭಾಗಿತ್ವಕ್ಕೆ ಅವಕಾಶ ಕಲ್ಪಿಸಲು ಯೋಜನೆಯಡಿ ಪ್ರತಿ ಜಿಲ್ಲೆಯಲ್ಲಿ 75 ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ನಿರ್ಧರಿಸಲಾಗಿದೆ. ರಾಜ್ಯ ಸರ್ಕಾರಗಳು ಪ್ರತಿ ಜಿಲ್ಲೆಯಲ್ಲಿ 75 ಅಂಗಡಿಗಳನ್ನು ತೆರೆಯಲು ಅಗತ್ಯ ಸ್ಥಳವನ್ನು ಒದಗಿಸಬೇಕು. ಖಾಸಗಿ ವಿತರಕರ ಆಧಾರದ ಮೇಲೆ ಸ್ಥಾಪಿಸಲಾದ ಪಡಿತರ ಅಂಗಡಿಗಳಲ್ಲಿ ಸಾರ್ವಜನಿಕ ನಿರೀಕ್ಷಣಾ ಕೊಠಡಿ, ಸಿಸಿಟಿವಿ, ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ, ಭದ್ರತಾ ವ್ಯವಸ್ಥೆ ಸೇರಿದಂತೆ ಮೂಲಸೌಕರ್ಯಗಳು ಇರುತ್ತವೆ ಮತ್ತು ಅಂತಹ ಖಾಸಗಿ ನ್ಯಾಯಬೆಲೆ ಅಂಗಡಿ ಮಾಲೀಕರನ್ನು ನ್ಯಾಯಬೆಲೆ ಅಂಗಡಿ ವಿತರಕರು ಎಂದು ಕರೆಯಲಾಗುತ್ತದೆ ಎಂದು ವರದಿಯಾಗಿದೆ. ಈಗಾಗಲೇ ದೇಶಾದ್ಯಂತ 4.99 ಲಕ್ಷ ನ್ಯಾಯಬೆಲೆ ಅಂಗಡಿಗಳ ಪೈಕಿ 3.5 ಲಕ್ಷ ನ್ಯಾಯಬೆಲೆ ಅಂಗಡಿಗಳನ್ನು ಖಾಸಗಿಯವರಿಗೆ ನೀಡಲಾಗಿದೆ.

ಫಲಾನುಭವಿಗಳ ಸಂಖ್ಯೆ ಶೇ. 40 ರಷ್ಟು ಇಳಿಸಲು ಶಿಫಾರಸ್ಸು

ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ (2013) ಅಡಿಯಲ್ಲಿ ಫಲಾನುಭವಿಗಳನ್ನು ಗುರುತಿಸುವಲ್ಲಿನ ಲೋಪಗಳನ್ನು ಇಲ್ಲಿಯವರೆಗೆ ಪರಿಹರಿಸಲಾಗಿಲ್ಲ. ಬಡತನ ರೇಖೆಯ ಮೇಲಿನ (ಎಪಿಎಲ್) ಮತ್ತು ಬಡತನ ರೇಖೆಗಿಂತ ಕೆಳಗಿರುವ (ಬಿಪಿಎಲ್) ವ್ಯಾಖ್ಯಾನದಲ್ಲಿ ಕೇಂದ್ರ ಸರ್ಕಾರದ ನಿರ್ಧಾರಗಳು ಸರಿಯಾಗಿಲ್ಲದ ಕಾರಣ, ಇದನ್ನು ಎಲ್ಲಾ ರಾಜ್ಯಗಳಲ್ಲಿ ಏಕರೂಪವಾಗಿ ಜಾರಿಗೆ ತರಲು ಸಾಧ್ಯವಿಲ್ಲ. ಸಾರ್ವಜನಿಕ ವಿತರಣಾ ಯೋಜನೆಯಡಿ ನೀಡಲಾದ ಪಡಿತರ ಚೀಟಿಗಳು ಒಂದೊಂದು ರಾಜ್ಯದಲ್ಲಿಯೂ ಬೇರೆ ಬೇರೆ ವಿಧದಲ್ಲಿವೆ. ಭಾರತೀಯ ಆಹಾರ ನಿಗಮದ (ಎಫ್‌ಸಿಐ) ಅಧ್ಯಯನಕ್ಕೆ ನೇಮಕವಾಗಿದ್ದ ಶಾಂತಕುಮಾರ್ ನೇತೃತ್ವದ ಸಮಿತಿಯು, ತನ್ನ ವರದಿಯಲ್ಲಿ ಸಾರ್ವಜನಿಕ ವಿತರಣಾ ಯೋಜನೆಯ ಫಲಾನುಭವಿಗಳ ಸಂಖ್ಯೆಯನ್ನು ಶೇ. 40 ಕ್ಕೆ ಇಳಿಸುವಂತೆ ಶಿಫಾರಸ್ಸು ಮಾಡಿದೆ. ಮತ್ತು ಮಾರುಕಟ್ಟೆ ಬೆಲೆಗೆ ಆಹಾರವನ್ನು ಮಾರಾಟ ಮಾಡಲು, ಆಧಾರ್ ಕಾರ್ಡ್ ಹೊಂದಿರುವವರಿಗೆ ಮಾತ್ರ ಮತ್ತು ಬ್ಯಾಂಕ್ ಖಾತೆಗಳಿಗೆ ನೇರವಾಗಿ (ಡಿಬಿಟಿ ಮೂಲಕ) ಸಬ್ಸಿಡಿ ಹಣವನ್ನು ವರ್ಗಾಯಿಸಲು ಮತ್ತು ಆಹಾರವನ್ನು ಒದಗಿಸಲು ಶಿಫಾರಸು ಮಾಡಿದೆ.. ಅದರ ಆಧಾರದ ಮೇಲೆ ಮೋದಿ ಸರ್ಕಾರ "ಒಂದು ರಾಷ್ಟ್ರ ಒಂದು ಪಡಿತರ" ಯೋಜನೆಯನ್ನು ಜಾರಿಗೆ ತರಲು ಕ್ರಮಕೈಗೊಳ್ಳಲಾಗಿದೆ. ಇದೂ ಅಲ್ಲದೆ, ರಾಜ್ಯ ಸರ್ಕಾರಗಳಿಗೆ ಬಿಕ್ಕಟ್ಟು ಸೃಷ್ಟಿಸುವ ಸಲುವಾಗಿ ಕೇಂದ್ರ ಸರ್ಕಾರವು ಸಬ್ಸಿಡಿ ಅಕ್ಕಿ ಪೂರೈಕೆಯನ್ನು ಸಂಪೂರ್ಣವಾಗಿ ನಿಲ್ಲಿಸಲು ನಿರ್ಧರಿಸಿದೆ.

ಖಾಸಗೀಕರಣವು ಸಂಗ್ರಹಣೆ ಮತ್ತು ಬೆಲೆ ಏರಿಕೆಗೆ ಕಾರಣವಾಗುತ್ತದೆ

ಪ್ರಸ್ತುತ, ಸರ್ಕಾರದ ಆಹಾರ ಗೋದಾಮುಗಳಲ್ಲಿರುವ ಆಹಾರ ಧಾನ್ಯಗಳನ್ನು ಮಾರುಕಟ್ಟೆ ಬೆಲೆಯಲ್ಲಿ ವ್ಯಕ್ತಿಗಳಿಗೆ ಮಾರಾಟ ಮಾಡಲಾಗುತ್ತದೆ ಎಂದು ಕೇಂದ್ರ ಸರ್ಕಾರ ಘೋಷಿಸಿದೆ. ಅಂದರೆ ಮುಕ್ತ ಮಾರುಕಟ್ಟೆ ಮಾರಾಟ ಯೋಜನೆಯಡಿ ಕೆಜಿಗೆ ಅಕ್ಕಿಗೆ ರೂ.35.40 ಬೆಲೆ ನಿಗದಿಪಡಿಸಲಾಗಿದೆ. ಮೋದಿ ಸರ್ಕಾರದ ಈ ನಡೆ ರಾಜ್ಯ ಸರ್ಕಾರಗಳಿಗೆ ಬಿಕ್ಕಟ್ಟು ಸೃಷ್ಟಿಸಲಿದೆ. ರಾಜ್ಯ ಸರ್ಕಾರಗಳು ಕೇಂದ್ರ ಸರ್ಕಾರದ ಎದುರು ಕೈಕಟ್ಟಿ ನಿಲ್ಲುವಂತಹ ಸನ್ನಿವೇಶವನ್ನು ಸೃಷ್ಟಿಸಲು ಕೇಂದ್ರ ಇಂತಹ ಕ್ರಮದಲ್ಲಿ ತೊಡಗಿದೆ. ರಾಜ್ಯಗಳಿಗೆ ಸಬ್ಸಿಡಿ ದರದಲ್ಲಿ ಆಹಾರಧಾನ್ಯಗಳನ್ನು ಮಾರಾಟ ಮಾಡಲು ನಿರಾಕರಿಸುತ್ತಿರುವ ಕೇಂದ್ರ ಸರ್ಕಾರ, ಬೆಲೆ ಏರಿಕೆ ನಿಯಂತ್ರಣಕ್ಕಾಗಿ ಮೊದಲ ಹಂತದಲ್ಲಿ ಕೇಂದ್ರ ಗೋದಾಮುಗಳಿಂದ 4 ಲಕ್ಷ ಟನ್ ಗೋಧಿ ಮತ್ತು 5 ಲಕ್ಷ ಟನ್ ಅಕ್ಕಿಯನ್ನು ವರ್ತಕರಿಗೆ ಹರಾಜು ಮಾಡಲು ನಿರ್ಧರಿಸಿದೆ. ರಾಜ್ಯಗಳಿಗೆ ಸಬ್ಸಿಡಿ ಅಕ್ಕಿ ಮತ್ತು ಗೋಧಿಯನ್ನು ಸರಬರಾಜು ಮಾಡುವುದು ಮತ್ತು ಅವುಗಳನ್ನು ಮಾರುಕಟ್ಟೆ ಬೆಲೆಗೆ ವ್ಯಾಪಾರಿಗಳಿಗೆ ಒದಗಿಸುವುದು ಮತ್ತು ಸಂಗ್ರಹಣೆ ಮತ್ತು ಲೂಟಿ ಲಾಭವನ್ನು ಉತ್ತೇಜಿಸುವ ಸರ್ಕಾರದ ಕ್ರಮ ಆಹಾರ ಧಾನ್ಯಗಳ ಬೆಲೆ ಏರಿಕೆಯನ್ನು ನಿಯಂತ್ರಿಸಲು ಸಹಾಯ ಮಾಡುವುದಿಲ್ಲ.

ಜನಸಾಮಾನ್ಯರ ಆಹಾರದ ಅಗತ್ಯವನ್ನು ಪೂರೈಸುವ ಕರ್ತವ್ಯದಿಂದ ವಿಮುಖರಾಗಿ ಅನ್ನದ ಮೇಲೆ ರಾಜಕೀಯ ಮಾಡುತ್ತಿರುವ ಕೇಂದ್ರದ ಆಡಳಿತಗಾರರ ವಿರುದ್ಧ ದನಿ ಎತ್ತಬೇಕಿದೆ. •



ನಗದು ನೀಡಿಕೆ–ಅಕ್ಕಿ ಸಿಗುವವರೆಗೆ ಮಾತ್ರ ಇರಲಿ–ಸಿಪಿಐ(ಎಂ)

ರಾಜ್ಯ ಸರಕಾರ ಬಡವರಿಗೆ ಹೆಚ್ಚುವರಿಯಾಗಿ ತಲಾ ಐದು ಕೇಜಿ ಅಕ್ಕಿ ನೀಡುವ ಯೋಜನೆಯಲ್ಲಿ ಅಕ್ಕಿ ದೊರೆಯದಂತೆ, ಈಗಲೂ ರಾಜಕೀಯ ಮಾಡುತ್ತಿರುವ ಒಕ್ಕೂಟ ಸರಕಾರ, ಬಿಜೆಪಿ ಹಾಗೂ ಆರ್.ಎಸ್.ಎಸ್. ನ ಬಡವರ ವಿರೋಧಿ ನಿಲುಮೆ, ಇದೊಂದು ನಾಚಿಕೆಗೇಡಿನ ರಾಜಕಾರಣವಾಗಿದೆ ಎಂದು ಟೀಕಿಸಿರುವ ಸಿಪಿಐಎಂ ರಾಜ್ಯ ಘಟಕ, ಒಕ್ಕೂಟ ಸರಕಾರದ ಈ ನಡೆಯನ್ನು ತೀವ್ರವಾಗಿ ಖಂಡಿಸಿದೆ.

ಅಕ್ಕಿ ದೊರೆಯದ ಕಾರಣಕ್ಕೆ ಅಕ್ಕಿ ದೊರೆಯುವವರೆಗೆ ನಗದು ನೀಡಲು ಅನಿವಾರ್ಯವಾಗಿ ನಿರ್ಧರಿಸಲಾಗಿದೆಯೆಂಬ ರಾಜ್ಯ ಸರ್ಕಾರದ ಹೇಳಿಕೆಯನ್ನು ಸ್ವಾಗತಿಸಿರುವ ಸಿಪಿಐಎಂ, ಇದನ್ನೇ ನೆಪ ಮಾಡಿ ನಗದು ವರ್ಗಾವಣೆಯನ್ನೇ ನೀತಿಯಾಗಿ ಮಾಡಿಕೊಳ್ಳದಂತೆ ಎಚ್ಚರಿಸಿದೆ. ನಗದು ವರ್ಗಾವಣೆಯು ಬಿಪಿಎಲ್ ಕಾರ್ಡುದಾರರ ಕುಟುಂಬದ ಯಜಮಾನಿಯ ಬ್ಯಾಂಕ್ ಖಾತೆಗೆ ಜಮಾ ಮಾಡುವುದು ಅಗತ್ಯವಾಗಿದೆಯೆಂದು ಸೂಚಿಸಿದೆ.

ಕರ್ನಾಟಕ ಸರಕಾರ ರಾಜ್ಯದ ಓಪನ್ ಮಾರುಕಟ್ಟೆಯಲ್ಲಿ ಭತ್ತವನ್ನು ಖರೀದಿಸಿ, ಬಂಡವಾಳ ತೊಡಗಿಸಿ ಸಾರ್ವಜನಿಕ ರಂಗದ ಆಧುನಿಕ ರೈಸ್ ಮಿಲ್ ನಿರ್ಮಿಸಿ ಅಕ್ಕಿ ಉತ್ಪಾದನೆಯಲ್ಲಿ ತೊಡಗುವ ಕಡೆ ಚಿಂತಿಸಿ ಕಾರ್ಯ ಪ್ರವೃತ್ತವಾಗುವುದು ಅಗತ್ಯವಿದೆಯೆಂದು ಹೇಳಿದೆ.

ಶಾಂತ ಕುಮಾರ್ ಸಮಿತಿ ಶಿಫಾರಸ್ಸು

ಶಾಂತ ಕುಮಾರ್ ಅವರ ಅಧ್ಯಕ್ಷತೆಯ ಭಾರತೀಯ ಆಹಾರ ನಿಗಮದ (ಎಫ್‌ಸಿಐ) ಪುನರ್‌ರಚನೆಗೆ ಸಂಬಂಧಿಸಿದ ಉನ್ನತ ಮಟ್ಟದ ಸಮಿತಿ (ಎಚ್‌ಸಿಎಲ್)ಯನ್ನು ಕೇಂದ್ರ ಸರ್ಕಾರವು 20ನೇ ಆಗಸ್ಟ್, 2014 ರಂದು ಸ್ಥಾಪಿಸಿತು. ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆ (TPDS) ಅಡಿಯಲ್ಲಿ ಧಾನ್ಯಗಳ ಸಂಗ್ರಹಣೆ, ಸಂಗ್ರಹಣೆ ಮತ್ತು ವಿತರಣೆ. ಎಂಎಸ್‌ಪಿ (ಕನಿಷ್ಟ ಬೆಂಬಲ ಬೆಲೆ) ಕಾರ್ಯಾಚರಣೆಗಳಲ್ಲಿ ಎಫ್‌ಸಿಐನ ಪಾತ್ರವನ್ನು ಮರುನಿರ್ದೇಶಿಸುವ ಮೂಲಕ ಸಂಪೂರ್ಣ ಆಹಾರ ಧಾನ್ಯ ನಿರ್ವಹಣಾ ವ್ಯವಸ್ಥೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡುವುದು ಹೇಗೆ ಎಂಬುದು ಸಮಿತಿಯ ಮುಂದಿರುವ ಪ್ರಮುಖ ವಿಷಯವಾಗಿತ್ತು.

ಪಡಿತರ ವಿತರಣೆಯ ಕುರಿತು HLC ಏನು ಹೇಳಿದೆ ಎಂಬುದನ್ನು ನೋಡುವ ಮೊದಲು, ಎಫ್‌ಸಿಐ ಸ್ಥಾಪನೆಯ ಉದ್ದೇಶವನ್ನೊಮ್ಮೆ ತಿಳಿಯುವುದು ಅವಶ್ಯಕ. FCI ಅನ್ನು 1965 ರಲ್ಲಿ (ಆಹಾರ ನಿಗಮ ಕಾಯಿದೆ, 1964 ರ ಅಡಿಯಲ್ಲಿ) ದೇಶದಲ್ಲಿ ಧಾನ್ಯಗಳ, ↗

ಪಾಟ್ನಾದಲ್ಲಿ ವಿರೋಧ ಪಕ್ಷಗಳ ಸಭೆ ಅತ್ಯಂತ ಪ್ರಮುಖ ರಾಜಕೀಯ ನಡೆ

24 ಮತ್ತು 25ರಂದು ದೆಹಲಿಯಲ್ಲಿ ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸಭೆ ನಡೆಯಿತು. ಇಂದು ದೇಶ ಎದುರಿಸುತ್ತಿರುವ ಎಲ್ಲ ಪ್ರಮುಖ ಸಮಸ್ಯೆಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಅದರಲ್ಲಿ ಪ್ರಮುಖವಾದದ್ದು ಪಾಟ್ನಾದಲ್ಲಿ ವಿರೋಧ ಪಕ್ಷಗಳ ಸಭೆ. 2019 ರ ಲೋಕಸಭೆ ಚುನಾವಣೆಯಿಂದ ವಿಭಿನ್ನ ಮತ್ತು ಅನುಕೂಲಕರ ರಾಜಕೀಯ ವಾತಾವರಣವು ರೂಪುಗೊಳ್ಳುತ್ತಿದೆ ಎಂದು ಸಭೆ ನಿರ್ಣಯಿಸಿದೆ ಮತ್ತು ಪಾಟ್ನಾದಲ್ಲಿ ಪ್ರತಿಪಕ್ಷಗಳ ಒಕ್ಕೂಟವು ಆ ದಿಕ್ಕಿನಲ್ಲಿ ಪ್ರಮುಖ ಹೆಜ್ಜೆ ಎಂದು ಪರಿಗಣಿಸಿದೆ. ಅನೇಕ ಮಾಧ್ಯಮಗಳು ಪಾಟ್ನಾ ಸಭೆಯನ್ನು ತುರ್ತು ಪರಿಸ್ಥಿತಿಯ ಸಮಯದಲ್ಲಿ ಹೊರಹೊಮ್ಮಿದ ವಿರೋಧ ಚಳುವಳಿಯಂತೆಯೇ ರಾಜಕೀಯ ಕ್ರಮವೆಂದು ಪರಿಗಣಿಸಿವೆ. ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಆಹ್ವಾನದ ಮೇರೆಗೆ 15 ರಾಜಕೀಯ ಪಕ್ಷಗಳು ಜೂನ್ 23 ರಂದು ಪಾಟ್ನಾದಲ್ಲಿ ಸಭೆ ಸೇರಿದ್ದವು. ಸಂವಿಧಾನದ ಜಾತ್ಯತೀತ ಪ್ರಜಾಸತ್ತಾತ್ಮಕ ಸ್ವರೂಪವನ್ನು ಉಳಿಸಿಕೊಳ್ಳಬೇಕಾದರೆ ಮೋದಿ ಸರ್ಕಾರವನ್ನು ಅಧಿಕಾರದಿಂದ ಕಿತ್ತೊಗೆಯಬೇಕು ಎಂದು ಪಾಟ್ನಾ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ರಾಜಕೀಯ ಮುಖಂಡರು ಉತ್ತಮ ಚಿಂತನೆಯ ಅಭಿಪ್ರಾಯವನ್ನು ಹಂಚಿಕೊಂಡರು.

ರಾಜ್ಯ ಮಟ್ಟದಲ್ಲಿ ಚರ್ಚೆಯನ್ನು ಪ್ರಾರಂಭಿಸಬೇಕಿದೆ

ಸಭೆಯಲ್ಲಿ ಸಿಪಿಐ(ಎಂ) ಪ್ರತಿನಿಧಿಸಿದ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಮಾತನಾಡಿ, ಬಿಜೆಪಿ ವಿರುದ್ಧದ ಮತಗಳು ಸಾಧ್ಯವಾದಷ್ಟು ವಿಭಜನೆಯಾಗದಂತೆ ವಿರೋಧ ಪಕ್ಷಗಳು ರಾಜ್ಯ ಮಟ್ಟದಲ್ಲಿ ಚರ್ಚೆಯನ್ನು ಪ್ರಾರಂಭಿಸಬೇಕು. ಬಿಜೆಪಿಯನ್ನು ಸೋಲಿಸುವ ರಾಜಕೀಯ ವ್ಯವಸ್ಥೆ ಮತ್ತು ಪರಿಸ್ಥಿತಿ ಒಂದೊಂದು ರಾಜ್ಯದಲ್ಲೂ ಭಿನ್ನವಾಗಿರುವುದು ಇಂತಹ ಪ್ರಸ್ತಾವನೆಯನ್ನು ಮುಂದಿಡಲು ಪ್ರಮುಖ ಕಾರಣ. ಉದಾಹರಣೆಗೆ ಕೇರಳವನ್ನು ತೆಗೆದುಕೊಳ್ಳಿ. ಇಲ್ಲಿ ಸಿಪಿಐ ನೇತೃತ್ವದ ಎಲ್‌ಡಿಎಫ್ ಮತ್ತು ಕಾಂಗ್ರೆಸ್ ನೇತೃತ್ವದ ಯುಡಿಎಫ್ ನಡುವೆ ಸ್ಪರ್ಧೆ ಏರ್ಪಟ್ಟಿದೆ. ಆದರೆ, ಈ ಸ್ಪರ್ಧೆಯಿಂದ ಬಿಜೆಪಿಗೆ ಲಾಭವಾಗುವುದಿಲ್ಲ ಮಾತ್ರವಲ್ಲ, ಗೆಲ್ಲುವ ಸಾಧ್ಯತೆಯೂ ತೀರಾ ಕಡಿಮೆ. ತಮಿಳುನಾಡು, ಬಿಹಾರ ಮತ್ತು ಮಹಾರಾಷ್ಟ್ರದಲ್ಲಿ ಈಗಾಗಲೇ ಪ್ರಬಲ ಬಿಜೆಪಿ ವಿರೋಧಿ ರಂಗವಿದೆ. ಈ ರೀತಿಯ ಮೈತ್ರಿ ಮತ್ತು ತಿಳುವಳಿಕೆಯನ್ನು ಎಲ್ಲಾ ರಾಜ್ಯಗಳಲ್ಲಿ ರೂಪಿಸಲು ಸಾಧ್ಯವಾದರೆ ಮೋದಿಯನ್ನು ಸೋಲಿಸಬಹುದು. ಪರ್ಯಾಯ ಸರ್ಕಾರ ರಚನೆಯು ಚುನಾವಣೆಯ ನಂತರ ನಡೆಯಬೇಕಾದ ರಾಜಕೀಯ ಪ್ರಕ್ರಿಯೆಯಾಗಿದೆ. ಅದಕ್ಕೆ ದಾರಿ ಮಾಡಿಕೊಡಲು ಹೆಚ್ಚಿನ ತೊಂದರೆ ಇರುವುದಿಲ್ಲ ಎಂಬುದು ಹಿಂದಿನ ಅನುಭವ.

ಇದರೊಂದಿಗೆ ಮೋದಿ ಸರಕಾರದ ಜನವಿರೋಧಿ ನೀತಿಗಳ ವಿರುದ್ಧ ಅಪಪ್ರಚಾರ ಮತ್ತು ಆಂದೋಲನವನ್ನು ಎತ್ತಲು ಪ್ರತಿಪಕ್ಷಗಳ ಒಕ್ಕೂಟವೂ ಸಿದ್ಧವಾಗಬೇಕು. ಜುಲೈ ಎರಡನೇ ವಾರದಲ್ಲಿ ಹಿಮಾಚಲ ಪ್ರದೇಶದ ರಾಜಧಾನಿ ಶಿಮ್ಲಾದಲ್ಲಿ ನಡೆಯಲಿರುವ ವಿರೋಧ ಪಕ್ಷಗಳ ಎರಡನೇ ಸಭೆಯು ಈ ವಿಷಯಗಳ ಬಗ್ಗೆ ಹೆಚ್ಚಿನ ಸ್ಪಷ್ಟತೆಯನ್ನು ತರುತ್ತದೆ ಎಂದು ನಿರೀಕ್ಷಿಸಲಾಗಿದೆ. ಅದೇನೇ ಇರಲಿ, ಪಾಟ್ನಾದಲ್ಲಿ ವಿರೋಧ ಪಕ್ಷಗಳ ಸಭೆಯು ಸಮಕಾಲೀನ ಭಾರತದ ಅತ್ಯಂತ ಪ್ರಮುಖ ರಾಜಕೀಯ ನಡೆ.



ಬಿಜೆಪಿ ಭಾರೀ ನಲುಗಿದೆ

ಪ್ರತಿಪಕ್ಷಗಳ ನಡೆಯಿಂದ ಕೇಂದ್ರದ ಆಡಳಿತ ಪಕ್ಷ ಬಿಜೆಪಿ ಭಾರೀ ನಲುಗಿದೆ ಎಂಬುದನ್ನು ಪ್ರಧಾನಿ ಹಾಗೂ ಇತರರ ಮಾತುಗಳು ಸ್ಪಷ್ಟಪಡಿಸುತ್ತವೆ. ಇತ್ತೀಚೆಗೆ ಮಧ್ಯಪ್ರದೇಶದಲ್ಲಿ ಪಕ್ಷದ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಕೂಡ ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಗೆ ಒತ್ತಾಯಿಸಿದ್ದಾರೆ. ಆರೆಸ್ಸೆಸ್ ಮತ್ತು ಬಿಜೆಪಿಯು ಹಲವು ವರ್ಷಗಳಿಂದ ಎತ್ತಿರುವ ಮೂರು ಪ್ರಮುಖ ವಿಷಯಗಳಲ್ಲಿ ಎರಡು ಗುರಿಯನ್ನು ಸಾಧಿಸಿಕೊಂಡಿದೆ. ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಹಕ್ಕುಗಳನ್ನು ನೀಡುವ ಸಂವಿಧಾನದ 370 ನೇ ವಿಧಿಯನ್ನು ರದ್ದುಗೊಳಿಸುವುದು ಮತ್ತು ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ. ಮೂರನೆಯದಾಗಿ ಉಳಿದಿರುವುದು ಏಕರೂಪ ನಾಗರಿಕ ಸಂಹಿತೆ. 2024ರ ಚುನಾವಣೆಯಲ್ಲಿ ಗೆಲ್ಲಬೇಕಾದರೆ ಕೋಮು ಧ್ರುವೀಕರಣವನ್ನು ತೀವ್ರಗೊಳಿಸುವುದೊಂದೇ ಬಿಜೆಪಿಯ ಮುಂದಿರುವ ದಾರಿ. ಅಷ್ಟರಮಟ್ಟಿಗೆ ಮೋದಿ ಸರ್ಕಾರದ ವಿರುದ್ಧ ಜನರ ಆಕ್ರೋಶ ಹೆಚ್ಚುತ್ತಿದೆ. ವಿರೋಧ ಪಕ್ಷಗಳ ಒಗ್ಗಟ್ಟು ಕೂಡ ಈ ಸಾರ್ವಜನಿಕ ಆಕ್ರೋಶದ ಪ್ರತಿಬಿಂಬವಾಗಿದೆ. ಹೀಗಿರುವಾಗ ಬಿಜೆಪಿ ವಿರುದ್ಧ ಒಗ್ಗಟ್ಟಾಗಿರುವ ಜನರಲ್ಲಿ ಒಡಕು ಮೂಡಿಸಲು ಬಿಜೆಪಿ ಏಕರೂಪ ನಾಗರಿಕ ಸಂಹಿತೆಗೆ ಮರುಜೀವ ನೀಡುತ್ತಿದೆ.

ಏಕರೂಪ ನಾಗರಿಕ ಸಂಹಿತೆ ಅಗತ್ಯವಿಲ್ಲ

ಇತ್ತೀಚೆಗೆ, ಕಾನೂನು ಆಯೋಗವು ನಾಗರಿಕ ಸಂಹಿತೆಯ ಚರ್ಚೆಯನ್ನು ಪ್ರಾರಂಭಿಸಿತು. ಈ ಬಗ್ಗೆ ಕಾನೂನು ಆಯೋಗವು ಸಂಬಂಧಪಟ್ಟ ವಿಭಾಗಗಳಿಂದ ಅಭಿಪ್ರಾಯಗಳನ್ನು ಕೇಳಿದೆ. ಈ ಕುರಿತು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಅಫಿಡವಿಟ್‌ನಲ್ಲಿ ಕೇಂದ್ರ ಕಾನೂನು ಸಚಿವಾಲಯವು, ವಿವಿಧ ಧಾರ್ಮಿಕ ಗುಂಪುಗಳಿಗೆ ವಿಭಿನ್ನ ನಾಗರಿಕ ಸಂಹಿತೆಗಳು ಅಸ್ತಿತ್ವದಲ್ಲಿದ್ದು ದೇಶದ ಏಕತೆಯ ಮೇಲಿನ ದಾಳಿ ಎಂದು ಅಭಿಪ್ರಾಯಪಟ್ಟಿದೆ. ಪ್ರಧಾನಿ ಮೋದಿ ಕೂಡ ಇದೇ ಅಭಿಪ್ರಾಯವನ್ನು ಭೋಪಾಲ್‌ನಲ್ಲಿ ಪುನರಾವರ್ತಿಸಿದರು. ಸಮಾನತೆಯನ್ನು ಸ್ಥಾಪಿಸಲು ಏಕರೂಪ ನಾಗರಿಕ ಸಂಹಿತೆ ಬೇಕು ಎಂಬ ಕಥನವನ್ನು ಬಿಜೆಪಿ ಮತ್ತು ಮೋದಿ ನಡೆಸುತ್ತಿದ್ದಾರೆ. ಆದರೆ, ಬಿಜೆಪಿ ತರಲು ಹೊರಟಿರುವ ಈ ಏಕೀಕರಣ ಸಮಾನತೆಗೆ ಸಮಾನವಾಗಿರುತ್ತದೆ ಎಂದು ಸಿಪಿಐ–ಎಂ ಅಭಿಪ್ರಾಯಪಟ್ಟಿಲ್ಲ. ವಿವಿಧ ಸಮುದಾಯಗಳ ಪುರುಷರು ಮತ್ತು ಮಹಿಳೆಯರ ಪ್ರಜಾಸತ್ತಾತ್ಮಕ ಭಾಗವಹಿಸುವಿಕೆಯೊಂದಿಗೆ ಅನ್ವಯವಾಗುವ ಕಾನೂನುಗಳು ಮತ್ತು ವೈಯಕ್ತಿಕ ಕಾನೂನುಗಳಲ್ಲಿ ಬದಲಾವಣೆಗಳನ್ನು ಮಾಡಬೇಕು ಎಂದು ಸಿಪಿಐ–ಎಂ ಅಭಿಪ್ರಾಯಪಟ್ಟಿದೆ. ಪ್ರಸ್ತುತ ಸನ್ನಿವೇಶದಲ್ಲಿ ಏಕರೂಪ ನಾಗರಿಕ ಸಂಹಿತೆ ಅಗತ್ಯವೂ ಅಲ್ಲ ಅಥವಾ ಅಪೇಕ್ಷಣೀಯವೂ ಅಲ್ಲ ಎಂದು 2018ರ ಕಾನೂನು ಆಯೋಗವು ತನ್ನ ದೃಷ್ಟಿಕೋನದಲ್ಲಿ ಸರಿಯಾಗಿದೆ. ಬಿಜೆಪಿ ಮತ್ತು ಮೋದಿ ಈಗ ಬಹುಸಂಖ್ಯಾತ ಹಿಂದೂ ಮತಗಳನ್ನು ಬಾಕ್ಸ್‌ನಲ್ಲಿ ಪಡೆಯಲು ಏಕೀಕೃತ ನಾಗರಿಕ ಸಂಹಿತೆಯ ಬಗ್ಗೆ ಮಾತನಾಡುತ್ತಿದ್ದಾರೆ. ಸಣ್ಣ ಮತ್ತು ದೊಡ್ಡ ಕೋಮು ಗಲಭೆಗಳು ದೇಶದಾದ್ಯಂತ, ವಿಶೇಷವಾಗಿ ಉತ್ತರ ಭಾರತದಲ್ಲಿ, ಅದೇ ಉದ್ದೇಶಕ್ಕಾಗಿ ಹೊತ್ತಿಕೊಂಡವು. ಬಿಜೆಪಿಯು ಕೋಮು ಧ್ರುವೀಕರಣದ ಅಜೆಂಡಾವನ್ನು ಕೇಂದ್ರೀಕರಿಸುತ್ತದೆ ಏಕೆಂದರೆ ಅದು ಅಭಿವೃದ್ಧಿ ಅಥವಾ ಕಲ್ಯಾಣ ಚಟುವಟಿಕೆಗಳ ಬಗ್ಗೆ ಏನೂ ಹೇಳುವುದಿಲ್ಲ. ●

➘ ವಿಶೇಷವಾಗಿ ಗೋಧಿಯ ಪ್ರಮುಖ ಕೊರತೆಯ ಹಿನ್ನೆಲೆಯಲ್ಲಿ ಸ್ಥಾಪಿಸಲಾಯಿತು. FCI ಅನ್ನು ಮೂರು ಮೂಲಭೂತ ಉದ್ದೇಶಗಳೊಂದಿಗೆ ಕಡ್ಡಾಯಗೊಳಿಸಲಾಯಿತು: (1) ರೈತರಿಗೆ ಪರಿಣಾಮಕಾರಿ ಬೆಲೆ ಬೆಂಬಲವನ್ನು ಒದಗಿಸಲು; (2) ಸಮಾಜದ ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಸಬ್ಸಿಡಿ ಸಹಿತ ಪದಾರ್ಥಗಳನ್ನು ವಿತರಿಸಲು PDS (ಸಾರ್ವಜನಿಕ ವಿತರಣಾ ವ್ಯವಸ್ಥೆ)ಗೆ ಧಾನ್ಯಗಳನ್ನು ಸಂಗ್ರಹಿಸಲು ಮತ್ತು ಪೂರೈಸಲು; ಮತ್ತು (3) ಮೂಲ ಆಹಾರ ಧಾನ್ಯಗಳಿಗೆ ಮಾರುಕಟ್ಟೆಯನ್ನು ಸ್ಥಿರಗೊಳಿಸಲು ಕಾರ್ಯತಂತ್ರದ ಮೀಸಲು ಇರಿಸಿಕೊಳ್ಳಲು.

ಶೇ. 40ಕ್ಕೆ ಇಳಿಸಲು ಶಿಫಾರಸ್ಸು

ಜನಸಂಖ್ಯೆಯ ಶೇ.67 ರಷ್ಟು ಪಡಿತರ ವ್ಯವಸ್ಥೆಯ ಲಾಭ ಪಡೆಯುತ್ತಿದ್ದಾರೆ. ಅದನ್ನು ಸುಮಾರು ಶೇ. 40 ಕ್ಕೆ ಇಳಿಸಬೇಕು ಎಂದು ಸಮಿತಿ ಶಿಫಾರಸ್ಸು ಮಾಡಿದೆ. ಇದು BPL ಕುಟುಂಬಗಳನ್ನು ಮತ್ತು ಅದಕ್ಕಿಂತ ಮೇಲಿನ ಕುಟುಂಬಗಳನ್ನು ಒಳಗೊಂಡಿರುತ್ತದೆ ಎಂದು ಆ ಸಮಿತಿಯ ವರದಿಯಲ್ಲಿ ಹೇಳಲಾಗಿದೆ.

ನಗದು ವರ್ಗಾವಣೆಗೆ ಶಿಫಾರಸ್ಸು

ಹತ್ತು ಲಕ್ಷಕ್ಕಿಂತಲೂ ಹೆಚ್ಚು ಜನಸಂಖ್ಯೆ ಹೊಂದಿರುವ ದೊಡ್ಡ ನಗರಗಳಿಂದ ಪ್ರಾರಂಭಿಸಿ, PDS ನಲ್ಲಿ ನಗದು ವರ್ಗಾವಣೆಯನ್ನು ಕ್ರಮೇಣವಾಗಿ ಪರಿಚಯಿಸಲು HLC ಶಿಫಾರಸು ಮಾಡಿದೆ. ಹೆಚ್ಚುವರಿ ಧಾನ್ಯಗಳಿರುವ ರಾಜ್ಯಗಳಿಗೆ ವಿಸ್ತರಿಸುವುದು, ಮತ್ತು ನಂತರ ಧಾನ್ಯಗಳ ಕೊರತೆ ಇರುವ ರಾಜ್ಯಗಳಿಗೆ ನಗದು ಅಥವಾ ಭೌತಿಕ ಧಾನ್ಯ ವಿತರಣೆಯನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ನೀಡಬೇಕು. ಇದು ಬಡವರಿಗೆ ಸಹಾಯ ಮಾಡಲು ಹೆಚ್ಚು ಪರಿಣಾಮಕಾರಿ ಮಾರ್ಗವಾಗಿದೆ ಮತ್ತು ಉತ್ಪಾದನಾ ಬುಟ್ಟಿಯಲ್ಲಿ ಹೆಚ್ಚು ಅಸ್ಪಷ್ಟತೆ ಇಲ್ಲದೆ, ಅತ್ಯುತ್ತಮ ಅಂತರಾಷ್ಟ್ರೀಯ ಪದ್ಧತಿಗಳಿಗೆ ಅನುಗುಣವಾಗಿರುತ್ತದೆ ಎಂದು ಅದು ಹೇಳಿದೆ.

HLC ಯ ಲೆಕ್ಕಾಚಾರಗಳ ಪ್ರಕಾರ



ಇದರಿಂದ ವಾರ್ಷಿಕವಾಗಿ 30,000 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣ ಸರ್ಕಾರದ ಬೊಕ್ಕಸಕ್ಕೆ ಉಳಿಸಬಹುದು ಮತ್ತು ಗ್ರಾಹಕರಿಗೆ ಇನ್ನೂ ಉತ್ತಮ ವ್ಯವಹಾರವನ್ನು ನೀಡುತ್ತದೆ ಎಂದು ಹೇಳುತ್ತದೆ. ಮನೆಯ ಮಹಿಳೆಯ ಹೆಸರಿನಲ್ಲಿ ನೀಡಲಾದ ನೈಜ ಆದಾಯದ ವರ್ಗಾವಣೆಯ ಮೊತ್ತವನ್ನು ರಕ್ಷಿಸಲು ನಗದು ವರ್ಗಾವಣೆಯನ್ನು ಒಟ್ಟಾರೆ ಬೆಲೆ ಮಟ್ಟದೊಂದಿಗೆ ಸೂಚ್ಯಂಕಗೊಳಿಸಬಹುದು ಮತ್ತು ಪ್ರಧಾನಮಂತ್ರಿ ಜನ್–ಧನ್ ಯೋಜನೆ (PMJDY) ಮೂಲಕ ಮತ್ತು ಆಧಾರ್ ಮತ್ತು ವಿಶಿಷ್ಟ ಗುರುತಿನ (UID) ಸಂಖ್ಯೆಯ ಮೂಲಕ ಇದಕ್ಕೆ ಹಾದಿ ಮಾಡಬಹುದು. ಇದು PDS ನಲ್ಲಿ ಹೆಚ್ಚಿನ ಸೋರಿಕೆಯನ್ನು ತಡೆಗಟಗಟ್ಟುತ್ತದೆ, ಸಂಪನ್ಮೂಲಗಳನ್ನು ಉಳಿಸುತ್ತದೆ ಮತ್ತು ಮುಂದಿನ 2–3 ವರ್ಷಗಳಲ್ಲಿ ಇದನ್ನು ಹೊರತರಬಹುದು ಎಂದು ಹೇಳಿತ್ತು.

ಸಂಗ್ರಹಣೆ ಮತ್ತು ಚಲನೆಗೆ ಸಂಬಂಧಿಸಿದ ವಿಷಯಗಳ ಕುರಿತು

ಎಫ್‌ಸಿಐ ತನ್ನ ಸ್ಟಾಕಿಂಗ್ ಕಾರ್ಯಾಚರಣೆಗಳನ್ನು ಕೇಂದ್ರೀಯ ಉಗ್ರಾಣ ನಿಗಮ, ರಾಜ್ಯ ಉಗ್ರಾಣ ನಿಗಮ, ಖಾಸಗಿ ಉದ್ಯಮಿ ಖಾತರಿ (PEG) ಯೋಜನೆಯಡಿಯಲ್ಲಿ ಖಾಸಗಿ ವಲಯದಂತಹ ವಿವಿಧ ಏಜೆನ್ಸಿಗಳಿಗೆ ಹೊರಗುತ್ತಿಗೆ ನೀಡಬೇಕೆಂದು HLC ಶಿಫಾರಸು ಮಾಡುದೆ. ರಾಜ್ಯದ ಭೂಮಿಯಲ್ಲಿ (ಮಧ್ಯಪ್ರದೇಶದಲ್ಲಿರುವಂತೆ) ಖಾಸಗಿ ವಲಯದ ಮೂಲಕ ಗೋದಾಮುಗಳನ್ನು ನಿರ್ಮಿಸುತ್ತಿರುವ ರಾಜ್ಯ ಸರ್ಕಾರಗಳು ಕೂಡಾ, ಇದನ್ನು ಸ್ಪರ್ಧಾತ್ಮಕ ಬಿಡ್ಡಿಂಗ್ ಆಧಾರದ ಮೇಲೆ ಮಾಡಬೇಕು, ವಿವಿಧ ಪಾಲುದಾರರನ್ನು ಆಹ್ವಾನಿಸಬೇಕು ಮತ್ತು ಶೇಖರಣಾ ವೆಚ್ಚವನ್ನು ಕಡಿಮೆ ಮಾಡಲು ಸ್ಪರ್ಧೆಯನ್ನು ರಚಿಸಬೇಕು.

ಭಾರತಕ್ಕೆ ಪ್ರಸ್ತುತ ಇರುವಷ್ಟು ಬೃಹತ್ ನಿರ್ವಹಣೆ ಸೌಲಭ್ಯಗಳ ಅಗತ್ಯವಿದೆ. ಎಫ್‌ಸಿಐನ ಹಳೆಯ ಸಾಂಪ್ರದಾಯಿಕ ಸ್ಟೋರೇಜ್‌ಗಳು ಬಹಳ ವರ್ಷಗಳವರೆಗೆ ಅಸ್ತಿತ್ವದಲ್ಲಿದ್ದವು, ಖಾಸಗಿ ವಲಯ ಮತ್ತು ಇತರ ಸ್ಟಾಕಿಂಗ್ ಏಜೆನ್ಸಿಗಳ ಸಹಾಯದಿಂದ ಸಿಲೋಸ್‌ಗಳಾಗಿ ಪರಿವರ್ತಿಸಬಹುದು. ಎಲ್ಲಾ ಸಿಲೋಸ್ ಮತ್ತು ಸಾಂಪ್ರದಾಯಿಕ ಸಂಗ್ರಹಣೆಗಳಲ್ಲಿ ಉತ್ತಮ ಯಾಂತ್ರೀಕರಣದ ಅಗತ್ಯವಿದೆ ಎಂದಿರುವ ಸಮಿತಿ, ಎಫ್‌ಸಿಐ ಗಳಲ್ಲಿನ ನೌಕರರ ಸಂಖ್ಯೆ ಕಡಿಮೆ ಮಾಡಬೇಕು ಎಂದೂ ಅದು ಸೂಚಿಸಿತ್ತು.

(ಮಾಹಿತಿ– https://pib.gov.in/newsite/PrintRelease.aspx?relid=114860) ●

ತಮಿಳುನಾಡು ರಾಜ್ಯಪಾಲರನ್ನು ವಜಾಗೊಳಿಸಿ –ಸಿಪಿಐ(ಎಂ) ಪೊಲಿಟ್ ಬ್ಯೂರೊ

ತಮಿಳುನಾಡು ರಾಜ್ಯಪಾಲ ಆರ್.ಎನ್.ರವಿ ರಾಜ್ಯ ಸಚಿವ ಸಂಪುಟದಿಂದ ಸೆಂಥಿಲ್ ಬಾಲಾಜಿ ಅವರನ್ನು ವಜಾಗೊಳಿಸಿದ ಕ್ರಮವನ್ನು ಸಿಪಿಐ(ಎಂ) ಪಾಲಿಟ್ ಬ್ಯೂರೋ ತೀವ್ರವಾಗಿ ಖಂಡಿಸಿದೆ.

ಇದೊಂದು ಸಂಪೂರ್ಣ ಅಸಾಂವಿಧಾನಿಕ ಕ್ರಮವಾಗಿದೆ, ಮುಖ್ಯಮಂತ್ರಿಗಳ ಸಲಹೆಯನ್ನು ಹೊರತುಪಡಿಸಿ, ರಾಜ್ಯಪಾಲರಿಗೆ ಸಚಿವರನ್ನು ನೇಮಿಸುವ ಅಥವಾ ತೆಗೆದುಹಾಕುವ ಹಕ್ಕು ಇಲ್ಲ.



ಶ್ರೀ ರವಿ ರಾಜ್ಯದ ರಾಜಕೀಯದಲ್ಲಿ ಮತ್ತು ರಾಜ್ಯ ಸರ್ಕಾರವನ್ನು ನಡೆಸುವಲ್ಲಿ ಹಸ್ತಕ್ಷೇಪವಾಗುವಂತಹ ಹಲವಾರು ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ; ಇದರಲ್ಲಿ ಇತ್ತೀಚಿನದೆಂದರೆ, ಸಚಿವರೊಬ್ಬರನ್ನು ವಜಾಗೊಳಿಸುವ ಅತಿರೇಕದ ನಡೆ. ಅದನ್ನೀಗ ಅವರೇ ತಡೆಹಿಡಿದಿದ್ದಾರೆ. ಆದರೂ, ಅವರು ರಾಜ್ಯಪಾಲರ ಸಾಂವಿಧಾನಿಕ ಹುದ್ದೆಯನ್ನು ಹೊಂದಲು ಯೋಗ್ಯರಲ್ಲ ಎಂಬುದನ್ನು ಸ್ಪಷ್ಟವಾಗುತ್ತದೆ. ಭಾರತದ ರಾಷ್ಟ್ರಪತಿಗಳು ಅವರನ್ನು ಕೂಡಲೇ ಹಿಂದಕ್ಕೆ ಕರೆಸಿಕೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಆಗ್ರಹಿಸಿದೆ.

ಭಾರತದ ಸಂವಿಧಾನವನ್ನು ಎಷ್ಟು ಆಳದಲ್ಲಿ ಹುಗಿದುಬಿಡುತ್ತಿದ್ದಾರೆಂದು ಭಯವಾಗುತ್ತಿದೆ, ಮೋದಿ ಸರಕಾರದಿಂದ ನಮ್ಮ ಜಾತ್ಯತೀತ, ಜನತಾಂತ್ರಿಕ ಗಣರಾಜ್ಯದ ವಿನಾಶವನ್ನು ಪ್ರತಿರೋಧಿಸಬೇಕು, ಸೋಲಿಸಬೇಕು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ತಮಿಳುನಾಡು ರಾಜ್ಯಪಾಲರ ನಡೆಯನ್ನು ಟೀಕಿಸುತ್ತ ಉದ್ಗರಿಸಿದ್ದಾರೆ.


ಭಾರತದ ಜಾತ್ಯತೀತ ಪ್ರಜಾಸತ್ತಾತ್ಮಕ ಸ್ವರೂಪವನ್ನು ಕಾಪಾಡಿಕೊಳ್ಳುವತ್ತ.....

ಪುಟ 4 ರಿಂದ

ಸಾಕ್ಷ್ಯಗಳಿದ್ದರೂ ಆತನನ್ನು ರಕ್ಷಿಸುವ ಸಂಕಲ್ಪ, ತಮ್ಮ ಬೆಂಬಲಿಗರಾಗಿರುವ ಲೈಂಗಿಕ ಕಿರುಕುಳ ಪ್ರಕರಣಗಳ ಆರೋಪಿಗಳನ್ನು ನಾಚಿಕೆಯಿಲ್ಲದೆ ಕಾಪಾಡುವ ಮೋದಿ ಸರ್ಕಾರ ಮತ್ತು ಬಿಜೆಪಿಯ ವರ್ತನೆಯಲ್ಲಿ ಪ್ರತಿಫಲನಗೊಂಡಿದೆ. ಸಂತ್ರಸ್ತ ಮಹಿಳೆ ತನ್ನ ಹೇಳಿಕೆಯನ್ನು ಹಿಂಪಡೆಯುವಂತೆ ಒತ್ತಡ ಹೇರಲು ಆರೋಪಿಗೆ ಸಮಯಾವಕಾಶ ನೀಡಲಿಕ್ಕಾಗಿಯೇ ಪೋಕ್ಸೊ ಅಡಿಯಲ್ಲಿ ಆರೋಪಗಳನ್ನು ಒಳಗೊಂಡಂತೆ ಈ ಪ್ರಕರಣಗಳ ತನಿಖೆಯನ್ನು ಉದ್ದೇಶಪೂರ್ವಕವಾಗಿ ವಿಳಂಬಗೊಳಿಸಲು ಕಾರ್ಯವಿಧಾನಗಳನ್ನು ಅದು ಬಾಗಿಸಿತು. ಇದು ಲೈಂಗಿಕ ಕಿರುಕುಳದ ಅಪ್ರಾಪ್ತ ವಯಸ್ಕ ಸಂತ್ರಸ್ತೆಯರ ದೂರುಗಳ ಎಲ್ಲಾ ಪ್ರಕರಣಗಳ ಮೇಲೆ ಗಂಭೀರ ದುಷ್ಪರಿಣಾಮಗಳನ್ನು ಬೀರುತ್ತದೆ. ಆರೋಪಿ ಸಂಸದರನ್ನು ತಡಮಾಡದೆ ಬಂಧಿಸಬೇಕೆಂಬ ತನ್ನ ಬೇಡಿಕೆಯನ್ನು ಸಿಪಿಐ(ಎಂ) ಪುನರುಚ್ಚರಿಸಿದೆ.

ಪಶ್ಚಿಮ ಬಂಗಾಳ ಪಂಚಾಯತ್ ಚುನಾವಣೆ

ರೂಢಿಯಾಗಿರುವಂತೆ, ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಸರ್ಕಾರದ ಅಡಿಯಲ್ಲಿ ಚುನಾವಣೆಗಳಲ್ಲಿ ದೊಡ್ಡ ಪ್ರಮಾಣದ ಹಿಂಸಾಚಾರ ಮತ್ತು ಭಯೋತ್ಪಾದನೆ ಒಂದು ಸಾಮಾನ್ಯ ಸಂಗತಿ ಎಂದು ಗುರುತಿಸಲ್ಪಟ್ಟಿದೆ. ಈಗ ನಡೆಯುತ್ತಿರುವ ಪಂಚಾಯತಿ ಚುನಾವಣೆಯಲ್ಲಿ, ಒಬ್ಬ ಯುವ ಸಿಪಿಐ(ಎಂ) ಕಾರ್ಯಕರ್ತ ಕಾಂ. ಮನ್ಸೂರ್ ಆಲಂ. ಸೇರಿದಂತೆ 10 ಜನರು ಈಗಾಗಲೇ ಪ್ರಾಣ ಕಳೆದುಕೊಂಡಿದ್ದಾರೆ.



ಇಂತಹ ಹಿಂಸಾಚಾರ ಮತ್ತು ಭಯೋತ್ಪಾದನೆಯ ರಾಜಕೀಯದ ಹೊರತಾಗಿಯೂ, ಪಶ್ಚಿಮ ಬಂಗಾಳದ ಜನರು ಪ್ರಜಾಪ್ರಭುತ್ವದ ಈ ಕೊಲೆಯನ್ನು ವಿರೋಧಿಸುತ್ತಿದ್ದಾರೆ ಮತ್ತು ಜನರ ಪಂಚಾಯತ್‌ಗಳನ್ನು ಸ್ಥಾಪಿಸಲು ಧೈರ್ಯದಿಂದ ಮುಂದೆ ಬರುತ್ತಿದ್ದಾರೆ. ಕಳೆದ ಪಂಚಾಯತ್ ಚುನಾವಣೆಯಲ್ಲಿ ಅಭೂತಪೂರ್ವ ಭಯೋತ್ಪಾದನೆಯಿಂದಾಗಿ ಶೇಕಡಾ 34 ರಷ್ಟು ಸ್ಥಾನಗಳಿಗೆ ಚುನಾವಣೆಗಳು ಅವಿರೋಧವಾಗಿ ನಡೆದವು. ಈ ಚುನಾವಣೆಗಳಲ್ಲಿ, ಅಂತಹ ಭಯೋತ್ಪಾದನೆಗೆ ಬಂದ ಪ್ರತಿರೋಧದಿಂದಾಗಿ, ಅವಿರೋಧ ಆಯ್ಕೆಯ ಸಂಖ್ಯೆ ಸುಮಾರು 2/3 ರಷ್ಟು ಕಡಿಮೆಯಾಗಿದೆ ಎಂದು ಪೊಲಿಟ್‌ಬ್ಯುರೊ ಗಮನಿಸಿತು.

NFHS ಸಮೀಕ್ಷೆಯಿಂದ ಅಂಗವೈಕಲ್ಯ ಪ್ರಶ್ನೆಗಳನ್ನು ಕೈಬಿಟ್ಟಿರುವದೇಕೆ?

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–6 (ಎನ್‌ಎಫ್‌ಹೆಚ್‌ಎಸ್–6)ರಿಂದ ಅಂಗವೈಕಲ್ಯಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೈಬಿಡುವುದನ್ನು ಪೊಲಿಟ್ ಬ್ಯೂರೋ ಗಂಭೀರ ಕಾಳಜಿಯಿಂದ ನೋಡುತ್ತದೆ. ಹಿಂದಿನ ಸುತ್ತಿನಲ್ಲಿ ಕೇಳಲಾದ ಪ್ರಶ್ನೆಗಳು ದೋಷಪೂರಿತವಾಗಿದ್ದರೂ ಸಹ, ಅವುಗಳನ್ನು ಸಂಪೂರ್ಣವಾಗಿ ತೆಗೆದುಹಾಕುವುದು ಒಂದು ಹಿಮ್ಮುಖ ಹೆಜ್ಜೆಯಾಗಿದೆ. ಎನ್‌ಎಫ್‌ಹೆಚ್‌ಎಸ್–6ರಲ್ಲಿ ಅಂಗವೈಕಲ್ಯ ಸಂಬಂಧಿತ ಪ್ರಶ್ನೆಗಳನ್ನು ಸೇರಿಸಲು ಪೊಲಿಟ್‌ಬ್ಯುರೊ ಒತ್ತಾಯಿಸಿದೆ.

ಕೇಂದ್ರ ಸಮಿತಿ ಸಭೆ

ಸಿಪಿಐ(ಎಂ) ಕೇಂದ್ರ ಸಮಿತಿಯು ಮುಂದಿನ ಆಗಸ್ಟ್ 4,5 ಮತ್ತು 6, 2023 ರಂದು ನವದೆಹಲಿಯಲ್ಲಿ ಸಭೆ ಸೇರಲಿದೆ.

ಉನ್ನತ ಶಿಕ್ಷಣದಲ್ಲಿ ಮೀಸಲಾತಿ ಅಸಂವಿಧಾನಿಕ: ಯು.ಎಸ್. ಸುಪ್ರೀಂ ಕೋರ್ಟ್...........

ಪುಟ 16 ರಿಂದ

ಹಕ್ಕುಗಳನ್ನು ತೆಗೆದುಹಾಕಿತು. ಹಾಗೆ ಮಾಡುವ ಮೂಲಕ, ನ್ಯಾಯಾಲಯವು ತನ್ನದೇ ಹಿಂದಿನ ನಿರ್ಧಾರವನ್ನು ರದ್ದುಗೊಳಿಸಿತು. ಮಹಿಳಾ ಚಳುವಳಿಯ ಕಠಿಣ ಹೋರಾಟದ ನಂತರ 1972 ರಲ್ಲಿ ಫೆಡರಲ್ ಗರ್ಭಪಾತ ಹಕ್ಕುಗಳನ್ನು ಸ್ಥಾಪಿಸಿತು. ಈ ತೀರ್ಪಿನ ನಂತರ, ಕ್ಲಾರೆನ್ಸ್ ಥಾಮಸ್‌ನಂತಹ ಸಂಪ್ರದಾಯವಾದಿ ನ್ಯಾಯಮೂರ್ತಿಗಳು, ಸಲಿಂಗ ವಿವಾಹ ಮತ್ತು ಗರ್ಭನಿರೋಧಕ ಹಕ್ಕುಗಳಂತಹ ದೀರ್ಘ ಹೋರಾಟದ ನಂತರ ಪಡೆದ ಇತರ ಹಕ್ಕುಗಳಿಗೂ ಕಂಟಕ ಕಾದಿದೆ ಎಂಬ ಸುಳಿವು ನೀಡಿದ್ದರು.

ಸ್ಟೂಡೆಂಟ್ಸ್ ಫಾರ್ ಫೇರ್ ಅಡ್ಮಿಷನ್ಸ್ (ನ್ಯಾಯಯುತ ಪ್ರವೇಶಕ್ಕಾಗಿ ವಿದ್ಯಾರ್ಥಿಗಳು – SFFA) ಎಂಬ ಸಂಪ್ರದಾಯವಾದಿ ಗುಂಪು ಮುಂದಿಟ್ಟಿರುವ ಎರಡು ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟ್ ಈ ತೀರ್ಪು ನೀಡಿದೆ. ಎರಡು ಪ್ರಕರಣಗಳನ್ನು ಆ ಸಂಘಟನೆ ಹಾರ್ವರ್ಡ್ ಕಾಲೇಜ್ ಮತ್ತು ನಾರ್ತ್ ಕೆರೊಲಿನಾ ವಿವಿ ಗಳ ಜನಾಂಗ–ಆಧಾರಿತ ಪ್ರವೇಶ ನೀತಿಗಳನ್ನು ಪ್ರಶ್ನಿಸಿದವು.

ಖಈಈಂ, ಅದರ ಹೆಸರಿನ ಹೊರತಾಗಿಯೂ, ವಿದ್ಯಾರ್ಥಿಗಳ ನೇತೃತ್ವದಲ್ಲಿ ಇಲ್ಲ. ಅದು ಎಡ್ವರ್ಡ್ ಬ್ಲಮ್ ಅವರ ನಾಯಕತ್ವದ ಸಂಘಟನೆ. ಅವರು ಅನೇಕ ಜನಾಂಗೀಯ ಪ್ರಕರಣಗಳನ್ನು ಸುಪ್ರೀಂ ಕೋರ್ಟ್ ನಲ್ಲಿ ಮಂಡಿಸಲು ಆರ್ಥಿಕವಾಗಿ ಬೆಂಬಲಿಸಿದ್ದಾರೆ. ನಾಗರಿಕ ಹಕ್ಕುಗಳ ಚಳವಳಿಯ ಮತ್ತೊಂದು ಕಠಿಣ ಹೋರಾಟದ ಫಲವಾಗಿದ್ದ 1965 ರ ಮತದಾನ ಹಕ್ಕುಗಳ ಕಾಯಿದೆಯನ್ನು ಕಸಿದುಕೊಂಡ ಪ್ರಕರಣ ಇವುಗಳಲ್ಲಿ ಒಂದು. ಅವರು ಸಂಪ್ರದಾಯವಾದಿ ಶ್ರೀಮಂತರಿಂದ ಇದಕ್ಕಾಗಿ ಲಕ್ಷಾಂತರ ಡಾಲರ್ ಹಣವನ್ನು ಪಡೆಯುತ್ತಾರೆ.

ಕಳೆದ ವರ್ಷ ಈ ಎರಡು ಪ್ರಕರಣಗಳ ಕುರಿತು ಸುಪ್ರೀಂ ಕೋರ್ಟ್ ಮೌಖಿಕ ವಾದಗಳನ್ನು ಆಲಿಸಿತು. ಬಲಪಂಥೀಯ ನ್ಯಾಯಮೂರ್ತಿಗಳು ವಾದಗಳಿಗೆ ಹೇಗೆ ಪ್ರತಿಕ್ರಿಯಿಸುತ್ತಿದ್ದಾರೆ ಎಂಬುದರ ಆಧಾರದ ಮೇಲೆ, ಜನಾಂಗ–ಆಧಾರಿತ ಪ್ರವೇಶ ನೀತಿಗಳು ಅಪಾಯದಲ್ಲಿವೆ ಎಂಬುದು ಸ್ಪಷ್ಟವಾಗಿತ್ತು. ಶೈಕ್ಷಣಿಕವಾಗಿ ಈ ಕ್ರಮ ಹೇಗೆ ಪ್ರಯೋಜನಕಾರಿ ಎಂಬುದು ಪ್ರಶ್ನೆಯಾಗಿತ್ತು. ಮತ್ತು 'ದೃಢೀಕರಣ ಕ್ರಮ' ಶೈಕ್ಷಣಿಕವಾಗಿ ವೈವಿಧ್ಯತೆಗಳನ್ನು ಹೆಚ್ಚಿಸುವ ಮೂಲಕ ಎಲ್ಲರಿಗೂ ಪ್ರಯೋಜನಕಾರಿ ಎಂಬುದು ಉತ್ತರವಾಗಿತ್ತು

'ದೃಢೀಕರಣ ಕ್ರಮ'ದ ಹೋರಾಟವು ಎಂದಿಗೂ ವೈವಿಧ್ಯತೆಯ ಬಗ್ಗೆ ಅಥವಾ ಎಲ್ಲ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಯೋಜನಗಳ ಬಗ್ಗೆ ಮಾತ್ರ ಆಗಿರಲಿಲ್ಲ. ಜಿಮ್ ಕ್ರೌ ಯುಗದ ವರ್ಣಬೇಧದ ನೀತಿಗಳಂತಹ ಹಿಂದಿನ ತಪ್ಪುಗಳನ್ನು ಸರಿಪಡಿಸಲು ಮತ್ತು ಅಸಮಾನತೆಗಳನ್ನು ತೊಡೆದುಹಾಕಲು ಹಲವು ಮಾರ್ಗಗಳಲ್ಲಿ ಒಂದಾಗಿತ್ತು. ಉದಾಹರಣೆಗೆ, ನಾರ್ತ್ ಕೆರೊಲಿನಾ ವಿವಿ 1950 ರವರೆಗೆ ಕಪ್ಪು ವಿದ್ಯಾರ್ಥಿಗಳಿಗೆ ಪ್ರವೇಶವನ್ನೇ ನೀಡುತ್ತಿರಲಿಲ್ಲ.

ಪಾರ್ಟಿ ಫಾರ್ ಸೋಷಿಯಲಿಸಂ ಅಂಡ್ ಲಿಬರೇಶನ್ನ ಮಾಜಿ ಅಧ್ಯಕ್ಷೀಯ ಅಭ್ಯರ್ಥಿ ಮತ್ತು ಸ್ವತಃ ದೃಢೀಕರಣದ ಕ್ರಮ ದ ಫಲಾನುಭವಿ, ಗ್ಲೋರಿಯಾ ಲಾ ರಿವಾ, ಲಿಬರೇಶನ್ ನ್ಯೂಸ್ನಲ್ಲಿ ಬರೆಯುತ್ತಾರೆ, "1960 ಮತ್ತು 1970 ರ ಸಾಮಾಜಿಕ ಮತದಾನ ಮತ್ತು ನಾಗರಿಕ ಹಕ್ಕುಗಳಿಗಾಗಿ, ಪ್ರತ್ಯೇಕ ಸಾರಿಗೆ ಮತ್ತು ವಸತಿ ಗಳ ವಿರುದ್ಧ ಹೋರಾಟಗಳು, ಬ್ಲ್ಯಾಕ್ ಪ್ಯಾಂಥರ್ಸ್ ಮತ್ತು ಬ್ಲ್ಯಾಕ್ ಲಿಬರೇಶನ್ ಗಳು ಬಲಗೊಂಡಿದ್ದು – ಶಿಕ್ಷಣದಲ್ಲಿನ ಐತಿಹಾಸಿಕ ತಪ್ಪುಗಳನ್ನು ಸರಿಪಡಿಸಲು ಕಾರ್ಯಕ್ರಮಗಳ ಬೇಡಿಕೆಯನ್ನು ಸಹ ತಂದಿತು. ಹೆಚ್ಚಿನ ವಿಶ್ವವಿದ್ಯಾನಿಲಯಗಳ ಅಲಿಖಿತ ನೀತಿಗಳು ಕರಿಯ ಮತ್ತು ಇತರ ಯುವಕರ ವಿರುದ್ಧ ತಾರತಮ್ಯವನ್ನು ಉಂಟು ಮಾಡಿದವು ಮತ್ತು ಪಠ್ಯಕ್ರಮವು ಬಿಳಿಯ ಪ್ರಾಬಲ್ಯವಾದಿ ಕಲ್ಪನೆಗಳನ್ನು ಶಾಶ್ವತಗೊಳಿಸಿತು." ಜನಾಂಗೀಯ ನ್ಯಾಯಕ್ಕಾಗಿ ಹೋರಾಟಗಳ ಮಧ್ಯೆ 'ದೃಢೀಕರಣ ಕ್ರಮ'ಕ್ಕಾಗಿ ಹೋರಾಟವು ರಾಷ್ಟ್ರವ್ಯಾಪಿ ರಾಜಕೀಯವನ್ನು ಪ್ರವೇಶಿಸಿತು.

"ವಿಶ್ವವಿದ್ಯಾನಿಲಯಗಳು ಚಾರಿತ್ರಿಕ ಕಾರಣಗಳಿಗಾಗಿ ತಾರತಮ್ಯ ಅನುಭವಿಸಿದ ವಿದ್ಯಾರ್ಥಿಗಳ ಪ್ರವೇಶ ಮತ್ತು ಬೆಳೆಸಲು ಅರ್ಥಪೂರ್ಣ ಗುರಿಗಳನ್ನು ಪೂರೈಸುತ್ತವೆ ಎಂದು ಖಚಿತಪಡಿಸಿಕೊಳ್ಳಲು ಕೋಟಾಗಳನ್ನು ಒಳಗೊಂಡಂತೆ ದೃಢೀಕರಣ ಕ್ರಮಗಳನ್ನು ಒತ್ತಾಯಿಸಲು ವಿದ್ಯಾರ್ಥಿಗಳು ತಮ್ಮ ಕ್ಯಾಂಪಸ್ಗಳಲ್ಲಿ ಹೋರಾಟ ಸಂಘಟಿಸಲು ಪ್ರಾರಂಭಿಸಿದರು" ಎಂದು ಲಾ ರಿವಾ ಬರೆಯುತ್ತಾರೆ.

ಜನಾಂಗ–ಆಧಾರಿತ ಪ್ರವೇಶಗಳು ಗರ್ಭಪಾತ ಹಕ್ಕುಗಳಷ್ಟು ವ್ಯಾಪಕ ಗಮನ, ಬೆಂಬಲ ಸೆಳೆಯುವುದಿಲ್ಲ. ಅದನ್ನು ಹೇಗೆ ಪ್ರಸ್ತುತ ಪಡಿಸಲಾಗುತ್ತದೆ ಎಂಬುದರ ಮೇಲೆ ಅದು ಅವಲಂಭಿಸಿರುತ್ತದೆ.

ಬ್ರೇಕ್ಥ್ರೂ ನ್ಯೂಸ್ನ ಮುಖ್ಯ ಸಂಪಾದಕ ಮತ್ತು ಯುಎಸ್ ಇತಿಹಾಸಕಾರ ಬೆನ್ ಬೆಕರ್ ಅವರು ನವೆಂಬರ್ನಲ್ಲಿ ಹೇಳಿದಂತೆ, "ಆಯ್ದ ವಿಶ್ವವಿದ್ಯಾಲಯಗಳಲ್ಲಿ ನಾವು ಕಪ್ಪು ಮತ್ತು ಲ್ಯಾಟಿನೋ ವಿದ್ಯಾರ್ಥಿಗಳ ಪಾಲನ್ನು ಹೆಚ್ಚಿಸಬೇಕೇ? ಎಂಬ ಪ್ರಶ್ನೆಯನ್ನು ಕೇಳಿದರೆ, ಸರಳ ಬಹುಮತದ ಜನ ದೃಢೀಕರಣದ ಕ್ರಮದ ನೀತಿಗಳ ಪರವಾಗಿರುತ್ತಾರೆ. ಆದರೆ ಅದೇ ಪ್ರಶ್ನೆಯನ್ನು "ನಾವು ಬಿಳಿ ಮತ್ತು ಏಷ್ಯನ್ ವಿದ್ಯಾರ್ಥಿಗಳ ಪಾಲನ್ನು ಇತರರಿಗೆ ಸ್ಥಳಾವಕಾಶ ಕಲ್ಪಿಸಲು ಕಡಿಮೆ ಮಾಡಬೇಕೇ? ಎಂಬ ಪ್ರಶ್ನೆ ಕೇಳಿದರೆ ಬಹುಮತ ಕಳೆದುಕೊಳ್ಳುತ್ತದೆ. 'ದೃಢೀಕರಣದ ಕ್ರಮ'ಕ್ಕಾಗಿ ಬಿಳಿ ಮತ್ತು ಏಷ್ಯಾದ ಜನರ ಶೈಕ್ಷಣಿಕ ಅವಕಾಶಗಳನ್ನು ಕಸಿದುಕೊಳ್ಳಬೇಕೇ?. ಎಂದು ಕೇಳಿದರೆ ಕೇವಲ 19% ರಷ್ಟು ಮಾತ್ರ ಬೆಂಬಲ ಸಿಗುತ್ತದೆ.

ಬಲಪಂಥೀಯರು 'ದೃಢೀಕರಣದ ಕ್ರಮವು ಸಾಮಾನ್ಯವಾಗಿ ಬಿಳಿಯ ಮತ್ತು ಏಷ್ಯನ್–ಅಮೆರಿಕನ್ನರ ವಿರುದ್ಧವಾಗಿದ್ದು ಜನಾಂಗೀಯವಾಗಿದೆ' ಎಂದು ಹೇಳಿಕೊಳ್ಳುತ್ತಾರೆ, ಆದಾಗ್ಯೂ ಹಲವಾರು ಅಧ್ಯಯನಗಳು ಬಿಳಿಯ ಮಹಿಳೆಯರು ಐತಿಹಾಸಿಕವಾಗಿ 'ದೃಢೀಕರಣ ಕ್ರಮ'ಗಳಿಂದ ಹೆಚ್ಚಿನ ಪ್ರಯೋಜನವನ್ನು ಪಡೆದಿದ್ದಾರೆ ಎಂದು ಕಂಡುಹಿಡಿದಿವೆ..

ಬೆಕರ್ ಅವರು ಕರಿಯ ಮತ್ತು ಲ್ಯಾಟಿನೊ ವಿದ್ಯಾರ್ಥಿಗಳಿಗೆ ಹೆಚ್ಚಿನ ಶೈಕ್ಷಣಿಕ ಅವಕಾಶಗಳ ಜೊತೆಗೆ, ಎಲ್ಲರಿಗೂ ಶಿಕ್ಷಣಕ್ಕೆ ಹೆಚ್ಚಿನ ಪ್ರವೇಶಕ್ಕಾಗಿ ಒತ್ತಾಯಿಸಬೇಕು ಎನ್ನುತ್ತಾರೆ. ಶೈಕ್ಷಣಿಕ ಅವಕಾಶಗಳನ್ನು ವ್ಯಾಪಕವಾಗಿ ವಿಸ್ತರಿಸಿದರೆ ದೃಢೀಕರಣ ಕ್ರಮ ಯಾರಿಗೂ ಅನಾನೂಕೂಲ ತರಬೇಕೆಂದಿಲ್ಲ. ಯು.ಎಸ್ ಶಿಕ್ಷಣ ವ್ಯವಸ್ಥೆಯಲ್ಲಿ ಸರಾಸರಿ ಪದವಿಪೂರ್ವ ಶಿಕ್ಷಣದ ವೆಚ್ಚ 145,000 ಡಾಲರಾಗಿದ್ದು ಎಲ್ಲ ಜನಾಂಗದ ಬಡವರಿಗೆ ಮತ್ತು ಮಧ್ಯಮ ವರ್ಗದವರಿಗೆ ಅದು ವಿವಿ ಶಿಕ್ಷಣ ನಿರಾಕರಿಸುತ್ತದೆ. ಪ್ರತಿಷ್ಠಿತ ವಿವಿ ಗಳಲ್ಲಿ ಶಿಕ್ಷಣ ಪಡೆದವರ ಕುಟುಂಬದ ಸದಸ್ಯರಿಗೆ ಆದ್ಯತೆ ನೀಡುವಂತಹ ಹಲವು ನಿಜವಾಗಿಯೂ ತಾರತಮ್ಯದ ಕ್ರಮಗಳು ದೃಢೀಕರಣ ಕ್ರಮ' ದಷ್ಟು ಗಮನ, ಚರ್ಚೆಗೆ ಬರುವುದಿಲ್ಲ. ●

ಕಾಶ್ಮೀರದ ಸಂಪತ್ತನ್ನು ದೋಚಲು 370 ನೇ ವಿಧಿ ರದ್ದು



2019ರ ಆಗಸ್ಟ್ 5ರಂದು ಸಂವಿಧಾನದ 370ನೇ ವಿಧಿಯ ಮೂಲಕ ಜಮ್ಮು ಕಾಶ್ಮೀರಕ್ಕೆ ನೀಡಿದ್ದ ವಿಶೇಶ ಸ್ಥಾನಮಾನವನ್ನು ತೆಗೆದು ಹಾಕಿ, 35ಎ ವಿಧಿಯನ್ನು ನಿರರ್ಥಕಗೊಳಿಸಿ, ಅದಕ್ಕೆ ಇದ್ದ ರಾಜ್ಯದ ಸ್ಥಾನಮಾನವನ್ನು ರದ್ದುಗೊಳಿಸಿ, 2 ಕೇಂದ್ರಾಡಳಿತ ಪ್ರದೇಶಗಳನ್ನಾಗಿ ಮಾಡಿರುವುದನ್ನೂ ಮೋದಿ ಸರ್ಕಾರದ ದೊಡ್ಡ ಸಾಧನೆ, ಎಂದು ಬಿಂಬಿಸಲಾಗಿದೆ. 370ನೇ ವಿಧಿ ರದ್ದಗೊಳಿಸಿರುವ ನಿಜವಾದ ಉದ್ದೇಶವನ್ನು ಮರೆಮಾಚಲಾಗಿದೆ.

ಮೋದಿ ಆಡಳಿತದ 9 ವರ್ಷಗಳ ಸಾಧನೆಗಳೇನು? ಭಾಗ – 5

ನವ–ಉದಾರವಾದ ನೀತಿಗಳ ಜಾರಿಗೆ ಅಡ್ಡಿಯಾಗಿದ್ದ 370ನೇ ವಿಧಿ

ಭಾರತ 1990ರ ದಶಕದಲ್ಲಿ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ (LPG) ನೀತಿಗಳನ್ನು ಒಪ್ಪಿಕೊಂಡಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಈ LPG ನೀತಿಗಳನ್ನು ಭಾರತದಾದ್ಯಂತ ಜಾರಿಗೆ ತರಬೇಕು. ಇದನ್ನು ಜಾರಿಗೆ ತರುವುದೆಂದರೆ, ದೇಶದ ಉತ್ಪಾಧನಾ ವಲಯ, ಸೇವಾ ವಲಯ, ಹಣಕಾಸು ಮತ್ತು ವಿಮಾ ವಲಯ, ಭೂಮಿ ಹೀಗೆ ಎಲ್ಲಾ ವಲಯಗಳನ್ನು, ಎಲ್ಲಾ ಪ್ರದೇಶಗಳನ್ನು ಸ್ವದೇಶಿ ಮತ್ತು ವಿದೇಶಿ ಬಂಡವಾಳದಾರರಿಗೆ ಮುಕ್ತವಾಗಿ ತೆರೆದಿಡಬೇಕು. ಇದರ ಜಾರಿಗೆ ಅಗತ್ಯವಾದ ನೀತಿ ನಿಯಮಗಳನ್ನು ರೂಪಿಸಬೇಕು. ಇದಕ್ಕೆ ಅಡ್ಡಿಯಾಗಿರುವ ನೆಲದ ಕಾನೂನುಗಳನ್ನು, ಸಂವಿಧಾನದಲ್ಲಿರುವ ವಿಧಿಗಳನ್ನು ಅಳಿಸಿಹಾಕಬೇಕು. ಇವುಗಳಲ್ಲಿ ಜಮ್ಮು ಕಾಶ್ಮೀರ ರಾಜ್ಯಕ್ಕೆ ಸಂವಿಧಾನ ಕೊಡಮಾಡಿದ್ದ ವಿಷೇಶ ಸ್ಥಾನಮಾನವಾದ 370ನೇ ಈ ವಿಧಿ ಒಂದು.

ಕಾಶ್ಮೀರದ ಸಂಪತ್ತನ್ನು ದೋಚಲು

ಇಡೀ ಭಾರತ ಮುಕ್ತ ಆರ್ಥಿಕ ನೀತಿಗಳ ಜಾರಿಗೆ ಅನುಕೂಲಕರವಾಗಿದ್ದರೆ, ಜಮ್ಮು ಕಾಶ್ಮೀರ ಭಾಗಕ್ಕೆ ಮಾತ್ರ 370 ನೇ ವಿಧಿ ಎಂಬ ಕೋಟೆ ಇದಕ್ಕೆ ಅಡ್ಡಿಯಾಗಿತ್ತು. ಈ ವಿಧಿ ಮತ್ತು ಅಲ್ಲಿನ ಭೂಮಿಯನ್ನು ಆ ರಾಜ್ಯದ ಜನರು ಮಾತ್ರ ಖರೀದಿಸಬಹುದಿತ್ತು. ಹೊರಗಿನವರು ಖರೀದಿಸಲು ಅವಕಾಶ ಇರಲಿಲ್ಲ. ತಮ್ಮ ಅಸ್ಮಿತೆ ಮತ್ತು 'ಕಾಶ್ಮೀರಿಯತ್' ಎಂದು ಹೇಳಲಾಗುವ ಅವರದೇ ಆದ ಜೀವನಶೈಲಿಯನ್ನು ಉಳಿಸಿಕೊಳ್ಳುವ ಕಾಶ್ಮೀರಿ ಜನತೆಯ ಆಶೋತ್ತರಗಳನ್ನು ಅದು ಒಳಗೊಂಡಿತ್ತು. ಇದು ಜಾಗತಿಕ ಲೂಟಿಕೋರರಿಗೆ ಅಲ್ಲಿನ ಭೂಮಿ, ಪ್ರಕೃತಿ ಸಂಪತ್ತುಗಳನ್ನು ದೋಚಲು ಅಡ್ಡಿಯಾಗಿತ್ತು. 370ನೇ ಈ ವಿಧಿ ಜಮ್ಮು ಕಾಶ್ಮೀರದ ಸುಂದರವಾದ ಪರಿಸರವನ್ನು ತಮ್ಮದಾಗಿಸಿಕೊಳ್ಳಲು ದೊಡ್ಡ ಬಂಡವಾಳಗಾರರಿಗೆ ಅಡೆತಡೆಯಾಗಿತ್ತು. ಅಲ್ಲಿನ ಫಲವತ್ತಾದ ಸಾವಿರಾರು ಎಕರೆ ಭೂಮಿಯನ್ನು ಕಬಳಿಸಿ, ರೆಸಾರ್ಟ್ ನಿರ್ಮಾಣ ಮಾಡಲು, ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟಿ ರಿಯಲ್ ಎಸ್ಟೇಟ್ ವ್ಯವಹಾರ ನಡೆಸಲು, ಕೃಷಿ ಭೂಮಿಯನ್ನು ವಶಕ್ಕೆ ಪಡೆದು ತಾವೇ ತೋಟಗಾರಿಕೆ ಮಾಡಲು, ಅಲ್ಲಿನ ನೆಲದಾಳದ ಪ್ರಕೃತಿ ಸಂಪತ್ತನ್ನು ದೋಚಲು ದೊಡ್ಡ ಬಂಡವಾಳಗಾರರಿಗೆ, ದೊಡ್ಡ ಭೂಮಾಲೀಕರಿಗೆ ಈ ವಿಧಿ ಅಡ್ಡಿಯಾಗಿತ್ತು. ಈ ವಿಧಿಯ ಕಾರಣದಿಂದ, ಎಷ್ಟೇ ಆರ್ಥಿಕ ಸಂಕಷ್ಟ ಎದುರಾದರೂ ತಮ್ಮ ಜಮೀನುಗಳನ್ನು ಮಾರಾಟ ಮಾಡಲಾಗದೆ, ಅದನ್ನು ಉಳಿಸಿಕೊಂಡು ವ್ಯವಸಾಯ ಮಾಡುತ್ತ ಜೀವನ ನಡೆಸುತ್ತಿದ್ದರು. ಹೇಗಾದರೂ ಮಾಡಿ ಈ ಪ್ರದೇಶವನ್ನು ಮುಕ್ತ ಆರ್ಥಿಕತೆಗೆ ತೆರೆದಿಡಬೇಕು. ಇದಕ್ಕೆ ಅಡ್ಡಿಯಾಗಿರುವ 370 ನೇ ವಿಧಿ ಮತ್ತು 35ಎ ವಿಧಿಯನ್ನು ತೆಗೆದುಹಾಕಬೇಕು ಎಂಬುದು ಪ್ರಭುತ್ವದ ಗುರಿಯಾಗಿತ್ತು.

370ನೇ ವಿಧಿಯ ನಿಧಾನ ನಾಶಕ್ಕೆ ಕಾಂಗ್ರೆಸ್ ಆಡಳಿತದಲ್ಲೂ ಪ್ರಯತ್ನ

ಕೆಲವರು ತಿಳಿದುಕೊಂಡಂತೆ 370 ನೇ ವಿಧಿ ರದ್ದತಿಗೆ ಮೋದಿ ಆಡಳಿತ ಮಾತ್ರ ಕಾರಣವಲ್ಲ. ಇದಕ್ಕೂ ಹಿಂದೆ ಆಡಳಿತ ನಡೆಸಿದ ಕಾಂಗ್ರೆಸ್ ಕೂಡ ಈ ವಿಧಿಯ ನಿಧಾನ ನಾಶಕ್ಕೆ ಪ್ರಯತ್ನ ಮಾಡಿದೆ. ಅಂದಿನ ಭಾರತದ ಒಕ್ಕೂಟ ಸರ್ಕಾರ ಈ ಬದ್ಧತೆಯಿಂದ ಹಿಂದೆ ಸರಿದಿದ್ದೇ ಕಾಶ್ಮೀರ ಸಮಸ್ಯೆ ಹೆಚ್ಚಲು ಮೂಲ ಕಾರಣವಾಯಿತು. 1953 ರ ನಂತರ ಸತತವಾಗಿ ಕೇಂದ್ರದಲ್ಲಿನ ಕಾಂಗ್ರೆಸ್ ಸರಕಾರಗಳು 370 ನೇ ವಿಧಿಯನ್ವಯ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಲಾಗಿದ್ದ ಸ್ವಾಯತ್ತತೆಯನ್ನು ದುರ್ಬಲಗೊಳಿಸಲು ಕ್ರಮಗಳನ್ನು ಕೈಗೊಳ್ಳತೊಡಗಿದವು. 1960, 70 ಮತ್ತು 80 ರ ದಶಕದಾದ್ಯಂತ ಕೇಂದ್ರೀಕರಣ ಮತ್ತು ಸ್ವಾಯತ್ತತೆಯನ್ನು ನಿರಾಕರಿಸುವ ಪ್ರಕ್ರಿಯೆ ಮುಂದುವರಿಯಿತು. ರಾಜ್ಯಕ್ಕೆ ನೀಡಲಾಗಿದ್ದ ಸ್ವಾಯತ್ತತೆಯ ಬಹುತೇಕ ಅಂಶಗಳನ್ನು ತೆಗೆದು ಹಾಕುವ ಉದ್ದೇಶದಿಂದ 370 ನೇ ವಿಧಿಯನ್ನು ಬುಡಮೇಲು ಮಾಡಲಾಯಿತು. 1954 ರ ಸಂವಿಧಾನ (ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯ) ಆದೇಶದ ನಂತರದಲ್ಲಿ 2010ರವರೆಗೆ ಇಂಥ 42 ಆದೇಶಗಳು ಜಾರಿಯಾಗಿವೆ. ಅವುಗಳು 370 ನೇ ವಿಧಿಯನ್ನು ಅಳವಡಿಸುವ ವೇಳೆ ನಮೂದಿತವಾಗದ ಕಾನೂನುಗಳ ವಿಚಾರದಲ್ಲಿ ಕೇಂದ್ರದ ಮಧ್ಯಪ್ರವೇಶದ ಅವಕಾಶವನ್ನು ಹೆಚ್ಚಿಸಿದವು. ಕಾನೂನು ತಜ್ಞ ಎ.ಜಿ. ನೂರಾನಿ ಅವರು ಸಮರ್ಥವಾಗಿ ದಾಖಲಿಸಿರುವಂತೆ, ಕೇಂದ್ರೀಕರಣ ಪ್ರಕ್ರಿಯೆ ಮೂಲಕ 370 ನೇ ವಿಧಿಯ ಮೂಲ ಆಶಯವನ್ನು ದುರ್ಬಲಗೊಳಿಸಲಾಯಿತು. ಕೇಂದ್ರ ಪಟ್ಟಿಯಲ್ಲಿರುವ 97 ವಿಷಯಗಳ ಪೈಕಿ 94 ವಿಷಯಗಳು ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯವಾಗುತ್ತವೆ.

ವಿಷೇಶ ಸ್ಥಾನಮಾನಕ್ಕೆ ಹಿಂದುತ್ವವಾಧಿಗಳ ವಿರೋಧವಿತ್ತು

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ನ್ಯಾಷನಲ್ ಕಾನ್ಫರೆನ್ಸ್ ನೇತೃತ್ವದಲ್ಲಿ ನಡೆಯುತ್ತಿದ್ದ ಪಾಳೇಗಾರಿ–ವಿರೋಧಿ ಹೋರಾಟವನ್ನು ಹಿಂದೂ ಕೋಮುವಾದಿ ಶಕ್ತಿಗಳು ವಿರೋಧಿಸುತ್ತಿದ್ದವು. ವಾಸ್ತವವಾಗಿ ಜನಸಂಘದ ಪೂರ್ವಜವಾದ ಪ್ರಜಾ ಪರಿಷತ್ ಕಾಶ್ಮೀರದ ಮಹಾರಾಜನಿಗೆ ಬೆಂಬಲ ನೀಡಿತ್ತು. ಜನ ಸಂಘ ಮತ್ತು ಹಿಂದೂ ಮಹಾಸಭಾ 370 ನೇ ವಿಧಿ ಮತ್ತು ಜಮ್ಮು ಮತ್ತು ಕಾಶ್ಮೀರಕ್ಕೆ ಯಾವುದೇ ರೀತಿಯ ಸ್ವಾಯತ್ತತೆ ನೀಡುವುದನ್ನು ಸಂಪೂರ್ಣವಾಗಿ ವಿರೋಧಿಸಿದ್ದವು. ಹಿಂದುತ್ವ ಸಿದ್ಧಾಂತ ಹೊಂದಿರುವುದರಿಂದ ಆರ್.ಎಸ್.ಎಸ್. ಬೆಂಬಲಿತ ಜನಸಂಘ ಮತ್ತು ನಂತರದಲ್ಲಿ ಬಿಜೆಪಿ ಒಂದೇ ಸ್ವರೂಪದ ಕೇಂದ್ರೀಕೃತ ಭಾರತದ ಕಲ್ಪನೆಯಿಂದ ಸತತವಾಗಿ 370ನೇ ವಿಧಿಯನ್ನು ವಿರೋಧಿಸುತ್ತಾ ಬಂದಿವೆ. ಎಲ್ಲಕ್ಕಿಂತ ಹೆಚ್ಚಾಗಿ, ಕಾಶ್ಮೀರ ಕಣಿವೆಯು ಮುಸ್ಲಿಂ ಬಾಹುಳ್ಯದ ಪ್ರದೇಶ ಎಂಬುದು ಅವರ ಶತ್ರುತ್ವಕ್ಕೆ ಕಾರಣವಾಗಿತ್ತು. ಇಂದು ಹಿಂದುತ್ವವಾದಿಗಳ ಕೈಗೆ ದೇಶದ ಆಡಳಿತ ಸಿಕ್ಕಿದೆ. ಇಂತಹ ಸಂದರ್ಭದಲ್ಲಿ ತಾವು ಒಪ್ಪದ ಈ ವಿಧಿಯನ್ನು ರದ್ದುಮಾಡಲು ಬಳಕೆ ಮಾಡಿಕೊಂಡಿದ್ದಾರೆ. ಈ ರೀತಿ ಮಾಡುವಾಗ ಬಹುಸಂಖ್ಯಾತರ ಬೆಂಬಲ ಪಡೆಯಬೇಕು ಮತ್ತು ವಿರೋಧ ಮಾಡುವವರ ಧ್ವನಿ ಹತ್ತಿಕ್ಕಬೇಕು. ಪ್ರತಿಭಟನೆಗೆ ಅವಕಾಶವೇ ಇಲ್ಲದಂತೆ ಕಾಶ್ಮೀರದ ಇಡೀ ಜನತೆಯನ್ನು ಬಂಧನದಲ್ಲಿ ಇಡಬೇಕು. ಮೋದಿ ಸರ್ಕಾರ ಮಾಡಿದ್ದೂ ಇದನ್ನೆ.



ವಿಶಾಲ ಬಂದೀಖಾನೆಯನ್ನಾಗಿ ಮಾಡಿದರು

ಒಕ್ಕೂಟ ಸರ್ಕಾರ 2019ರ ಜುಲೈ 27 ರಂದು 10 ಸಾವಿರ ಮತ್ತು ಆಗಸ್ಟ್ ಒಂದರಂದು ಮತ್ತೆ 25 ಸಾವಿರ ಪ್ಯಾರಾ ಮಿಲಿಟರಿ ಪಡೆಗಳನ್ನು ವಿಮಾನಗಳ ಮೂಲಕ ಜಮ್ಮು ಕಾಶ್ಮೀರಕ್ಕೆ ಕಳುಹಿಸಿತು. ರಾಜ್ಯಾದ್ಯಂತ ಕಟ್ಟೆಚ್ಚರ. ಸೇನೆ ಮತ್ತು ವಾಯು ಪಡೆ ಸನ್ನದ್ಧ ಸ್ಥಿತಿಯಲ್ಲಿ. ಭಾರತೀಯ ಯುದ್ಧ ವಿಮಾನಗಳ ಗಸ್ತು ಹಾರಾಟ. ಅಮರನಾಥ ಯಾತ್ರೆಯನ್ನು ರದ್ದುಪಡಿಸಲಾಯಿತು. ಪ್ರವಾಸಿಗಳನ್ನು ವಾಪಸ್ ಕಳಿಸಲಾಯಿತು. ಆಗಸ್ಟ್ 4ರಂದು ಒಮರ್ ಅಬ್ದುಲ್ಲ, ಮಹಮ್ಮದ್ ಮುಫ್ತಿ, ಸಿಪಿಎಂ ನಾಯಕ ತಾರಿಕ್ ಅಹ್ಮದ್ ಸೇರಿದಂತೆ ಎಲ್ಲಾ ವಿರೋಧ ಪಕ್ಷಗಳ ನಾಯಕರನ್ನು ಗೃಹಬಂಧನದಲ್ಲಿ ಇಟ್ಟರು. ರಾಜ್ಯಾದ್ಯಂತ 144 ಸೆಕ್ಸನ್ ಜಾರಿ ಮಾಡಿದರು, ಮೊಬೈಲ್ ನೆಟ್ ವರ್ಕ್, ಇಂಟರ್ ನೆಟ್ ಮತ್ತು ಟಿವಿ ಮಾಧ್ಯಮಗಳ ಸಂಪರ್ಕ ಕಡಿತಮಾಡಿದರು. ಮೋದಿ ಸರ್ಕಾರದ ಈ ಕ್ರಮ ಕಂಡ ದೇಶದ ಜನತೆ, ಗಡಿಯಲ್ಲಿ ಏನಾಗುತ್ತಿದೆ ಎಂಬ ಆತಂಕಕ್ಕೆ ಒಳಗಾದರು. ಆಗಸ್ಟ್ 5ರಂದು 370ನೇ ವಿಧಿ ರದ್ದುಗೊಳಿಸಿ, ಜಮ್ಮು ಕಾಶ್ಮೀರಕ್ಕೆ ಇದ್ದ ರಾಜ್ಯದ ಮಾನ್ಯತೆ ರದ್ದುಮಾಡಿ, ಅದನ್ನು ಎರಡು ಭಾಗಗಳನ್ನಾಗಿ ವಿಂಗಡಿಸಿ, ಕೇಂದ್ರಾಡಳಿತ ಪ್ರದೇಶಗಳನ್ನಾಗಿ ಮಾಡುವ ಘೋಷಣೆ ಮಾಡಿಯೇ ಬಿಟ್ಟರು. 370ನೇ ವಿಧಿಯ ರದ್ದತಿ ವಿಷಯವನ್ನು ಅಲ್ಲಿನ ರಾಜ್ಯಪಾಲರಿಗೇ ತಿಳಿಯದಂತೆ ಅದರ ಹಿಂದಿನ ದಿನದವರೆಗೂ ಮುಚ್ಚಿಟ್ಟಿದ್ದರು ಎಂಬುದನ್ನು ಇತ್ತೀಚೆನ ಸಂದರ್ಶನವೊಂದರಲ್ಲಿ ಅಂದಿನ ರಾಜ್ಯಪಾಲರಾಗಿದ್ದ ಸತ್ಯಪಾಲ್ ಮಲ್ಲಿಕ್

ಪುಟ 14 ಕ್ಕೆ

370ನೇ ವಿಧಿಯ ಹಿನ್ನೆಲೆ

ಸ್ವಾತಂತ್ರ್ಯ ಪೂರ್ವದ ರಾಜರ ಆಡಳಿತದ ಜಮ್ಮು ಮತ್ತು ಕಾಶ್ಮೀರ ಭಾರತದ ಭಾಗವಾದ ಪ್ರಸಕ್ತ ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಭಾಗವನ್ನು ಒಳಗೊಂಡಿತ್ತು. ಅಂದಿನ ಮಹಾರಾಜ ಹರಿಸಿಂಗ್ ಗೆ ಭಾರತಕ್ಕೆ ಅಥವಾ ಪಾಕಿಸ್ತಾನಕ್ಕೆ ಸೇರುವ ಮನಸ್ಸಿರಲಿಲ್ಲ. ಜಮ್ಮು ಮತ್ತು ಕಾಶ್ಮೀರವನ್ನು ಒಂದು ಪ್ರತ್ಯೇಕ ರಾಷ್ಟ್ರವನ್ನಾಗಿ ಇರಿಸುವುದು ಅವರ ಬಯಕೆಯಾಗಿತ್ತು. ಈ ಕಾರಣದಿಂದ ಹರಿಸಿಂಗ್ 1947 ಆಗಸ್ಟ್ 15 ರ ವೇಳೆಗೆ ಯಾವುದೇ ನಿರ್ಧಾರವನ್ನು ತೆಗೆದುಕೊಂಡಿರಲಿಲ್ಲ.

ಷೇಕ್ ಅಬ್ದುಲ್ಲಾ ನೇತೃತ್ವದ ನ್ಯಾಷನಲ್ ಕಾನ್ಫರೆನ್ಸ್ ಪಕ್ಷ ಪಾಳೇಗಾರಿ ಆಳ್ವಿಕೆಯ ವಿರುದ್ಧ ಹೋರಾಡುತ್ತಿತ್ತು. ಇದು ರಾಜರ ಸಂಸ್ಥಾನಗಳಲ್ಲಿ ಪಾಳೇಗಾರಿ–ವಿರೋಧಿ, ಸಾಮ್ರಾಜ್ಯಶಾಹಿ–ವಿರೋಧಿ ಚಳವಳಿಯ ಭಾಗವಾಗಿತ್ತು.

ವಾಯುವ್ಯ ಪ್ರಾಂತ್ಯದ ಪಠಾಣರನ್ನೊಳಗೊಂಡ ಪಾಕಿಸ್ತಾನದ ದಾಳಿಕೋರರು ಆಕ್ರಮಣ ನಡೆಸಿ, ಶ್ರೀನಗರದ ಹೊರವಲಯವನ್ನು ತಲುಪಿದಾಗಲಷ್ಟೆ ಭಾರತಕ್ಕೆ ಸೇರ್ಪಡೆಯ ಒಡಂಬಡಿಕೆಗೆ ಸಹಿ ಹಾಕಲು ಮಹಾರಾಜ ಹರಿಸಿಂಗ್ ಒಪ್ಪಿದರು. 1947 ಅಕ್ಟೋಬರ್ 26 ರಂದು ಅದಕ್ಕೆ ಸಹಿ ಹಾಕಲಾಯಿತು. ನ್ಯಾಷನಲ್ ಕಾನ್ಫರೆನ್ಸ್ ಜೊತೆಗಿದ್ದ ಕಾಶ್ಮೀರ ಕಣಿವೆಯ ಜನರು ಪಾಕಿಸ್ತಾನಿ ಆಕ್ರಮಣಕಾರರ ವಿರುದ್ಧ ಹೋರಾಡಿದರು. ಭಾರತ ಸರ್ಕಾರ ತನ್ನ ಸೇನೆಯನ್ನು ವಿಮಾನದ ಮೂಲಕ ಶ್ರೀನಗರಕ್ಕೆ ಕಳುಹಿಸಿತು. ಈ ಸೈನ್ಯ ಆಕ್ರಮಣಕಾರರನ್ನು ಹಿಮ್ಮೆಟ್ಟಿಸಿತು.

ಈ ಸನ್ನಿವೇಶದಲ್ಲಿ ಸಂವಿಧಾನವನ್ನು ರಚಿಸುತ್ತಿದ್ದ ಸಂವಿಧಾನ ರಚನಾ ಸಭೆಯು ಸಂವಿಧಾನದಲ್ಲಿ 370 ನೇ ವಿಧಿಯನ್ನು ಸೇರಿಸಿತು. ಭಾರತದ ಪ್ರಭುತ್ವ ಮತ್ತು ಕಾಶ್ಮೀರಿ ಜನರ ಪ್ರತಿನಿಧಿಗಳ ನಡುವೆ ಆದ ಒಪ್ಪಂದವನ್ನು 370 ನೇ ವಿಧಿ ಪ್ರತಿನಿಧಿಸುತ್ತದೆ. ತಮ್ಮ ಅಸ್ಮಿತೆ ಮತ್ತು 'ಕಾಶ್ಮೀರಿಯತ್' ಎಂದು ಹೇಳಲಾಗುವ ಅವರದೇ ಆದ ಜೀವನಶೈಲಿಯನ್ನು ಉಳಿಸಿಕೊಳ್ಳುವ ಕಾಶ್ಮೀರಿ ಜನತೆಯ ಆಶೋತ್ತರಗಳನ್ನು ಅದು ಒಳಗೊಂಡಿತ್ತು.

ದೇಶವು ಧರ್ಮಗಳ ಆಧಾರದಲ್ಲಿ ಒಡೆಯುತ್ತಿದ್ದಾಗ ಹಾಗೂ ದ್ವಿರಾಷ್ಟ್ರ ಸಿದ್ಧಾಂತ ಅಸ್ತಿತ್ವದಲ್ಲಿದ್ದಾಗ, ಮುಸ್ಲಿಂ ಬಹುಸಂಖ್ಯಾಕರಾಗಿರುವ ರಾಜ್ಯವೊಂದರ ಜನರು ಜಾತ್ಯತೀತವಾದ ಭಾರತೀಯ ಪ್ರಭುತ್ವಕ್ಕೆ ಬೆಂಬಲ ನೀಡಿದ್ದು ಭಾರತದ ಪ್ರಭುತ್ವಕ್ಕೆ ಮಹತ್ವದ ವಿಚಾರವಾಗಿತ್ತು. ದೇಶ ವಿಭಜನೆಯ ಸಂದರ್ಭದಲ್ಲಿ ವಾಯವ್ಯ ಭಾರತವನ್ನು ದೊಂಬಿಗಳ ಕೆನ್ನಾಲಗೆ ಆವರಿಸಿಕೊಂಡಿದ್ದಾಗ ಕಾಶ್ಮೀರ ಕಣಿವೆಯು ಶಾಂತಿ ಮತ್ತು ಕೋಮು ಸೌಹಾರ್ದದ ಸ್ವರ್ಗವಾಗಿತ್ತು.

ಕೊನೆಗೂ ಅಲ್ಲಿ ಒಂದು 'ಪತ್ರಿಕಾಗೋಷ್ಠಿ'...ಇಲ್ಲಿ 'ಡಿಎನ್‌ಎ'ಗೇ ಸವಾಲು!

ಇದು ಅಮೃತ ಕಾಲ

ಪ್ರಧಾನಿಗಳು ಎಂಟು ವರ್ಷಗಳಲ್ಲಿ ಮೊದಲ ಬಾರಿಗೆ ಒಂದು ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು, ಅದೂ ಅಮೆರಿಕಾದಲ್ಲಿ, ಬೈಡನ್ ಆಡಳಿತದ ಒತ್ತಾಯದಿಂದಾಗಿ. ಅಮೆರಿಕಾಕ್ಕೆ ಯಾವುದೇ ದೇಶದ ಮುಖ್ಯಸ್ಥರು ಅಧಿಕೃತ ಭೇಟಿ ನೀಡಿದಾಗ ಅಲ್ಲಿಯ ಶ್ವೇತಭವನದಲ್ಲಿ ಎರಡೂ ದೇಶಗಳ ಮುಖ್ಯಸ್ಥರು ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುವುದು ವಾಡಿಕೆ. ಆದರೆ ಜೂನ್ 21ರಿಂದ 23 ರವರೆಗೆ ಭಾರತದ ಪ್ರಧಾನ ಮಂತ್ರಿಗಳ ಅಧಿಕೃತ ಭೇಟಿಯ ಕೊನೆಯಲ್ಲಿ ಇಂತಹ ಪತ್ರಿಕಾಗೋಷ್ಠಿಯನ್ನು ತಡೆಯಲು ಭಾರತದ ಅಧಿಕಾರಿಗಳು ಬಲವಾದ ಪ್ರತಿರೋಧ ಒಡ್ಡಿದರೂ ಅದು ಸಫಲವಾಗದೆ, ಕೊನೆಗೆ ಇಬ್ಬರೂ ಮುಖಂಡರು ಒಬ್ಬ ಅಮೆರಿಕನ್ ಮತ್ತು ಒಬ್ಬ ಭಾರತೀಯ ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸಬೇಕೆಂದು ನಿರ್ಧರಿಸಲಾಯಿತಂತೆ.

ಇದರಂತೆ, ಅಮೆರಿಕಾದ ಪತ್ರಕರ್ತೆ ಸಬ್ರಿನಾ ಸಿದ್ದಿಕಿ ಭಾರತದ ಪ್ರಧಾನಿಗಳಿಗೆ ಕೇಳಿದ ಪ್ರಶ್ನೆ ಹೀಗಿತ್ತು:

"ಭಾರತವು ಪ್ರಪಂಚದ ಅತಿದೊಡ್ಡ ಪ್ರಜಾಪ್ರಭುತ್ವ ಎಂದು ದೀರ್ಘಕಾಲದಿಂದ ಹೆಮ್ಮೆಪಡುತ್ತಿದೆ, ಆದರೆ ನಿಮ್ಮ ಸರ್ಕಾರವು ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ ತಾರತಮ್ಯ ಮಾಡಿದೆ ಮತ್ತು ತನ್ನ ಟೀಕಾಕಾರರನ್ನು ಮೌನಗೊಳಿಸಲು ಪ್ರಯತ್ನಿಸುತ್ತಿದೆ ಎಂದು ಹೇಳುವ ಅನೇಕ ಮಾನವ ಹಕ್ಕುಗಳ ಗುಂಪುಗಳಿವೆ. ಪ್ರಜಾಪ್ರಭುತ್ವವನ್ನು ರಕ್ಷಿಸಲು ಅನೇಕ ವಿಶ್ವ ನಾಯಕರು ಬದ್ಧರಾಗಿರುವುದಾಗಿ ಹೇಳಿರುವ ಇಲ್ಲಿ ಶ್ವೇತಭವನದ ಈ ಪೂರ್ವ ಕೋಣೆಯಲ್ಲಿ ನೀವು ನಿಂತಿರುವಾಗ, ನಿಮ್ಮ ದೇಶದಲ್ಲಿ ಮುಸ್ಲಿಮರು ಮತ್ತು ಇತರ ಅಲ್ಪಸಂಖ್ಯಾತರ ಹಕ್ಕುಗಳನ್ನು ಉತ್ತಮಪಡಿಸಲು ಮತ್ತು ವಾಕ್ ಸ್ವಾತಂತ್ರ್ಯವನ್ನು ಎತ್ತಿಹಿಡಿಯಲು ನೀವು ಮತ್ತು ನಿಮ್ಮ ಸರ್ಕಾರವು ಯಾವ ಕ್ರಮಗಳನ್ನು ತೆಗೆದುಕೊಳ್ಳಲು ಸಿದ್ಧರಿದ್ದೀರಿ?"

ಭಾರತದಲ್ಲಿ ಇಂತಹ ಪ್ರಶ್ನೆಗಳು ಎದ್ದಾಗ ಸದಾ ಮೌನವಾಗಿರುವ ಪ್ರಧಾನಿಗಳು, ನಿರೀಕ್ಷಿಸಿದಂತೆ, ಆ ಪತ್ರಕರ್ತರ ನೇರವಾದ ಪ್ರಶ್ನೆಗೆ ಉತ್ತರ ಕೊಡಲಿಲ್ಲ, ಬದಲಿಗೆ, ತಮ್ಮ ಆಳ್ವಿಕೆಯಲ್ಲಿ ಅಲ್ಪಸಂಖ್ಯಾತರು ತಾರತಮ್ಯವನ್ನು ಎದುರಿಸುತ್ತಿದ್ದಾರೆ ಎಂದು ಕೆಲವು ಜನರು ಯೋಚಿಸುತ್ತಿರುವ ಬಗ್ಗೆ ತನಗೆ ಆಶ್ಚರ್ಯವಾಗಿದೆ ಎನ್ನುತ್ತ ಪ್ರಜಾಪ್ರಭುತ್ವದ ಬಗ್ಗೆ ಸಣ್ಣ ಪಾಠವನ್ನಷ್ಟೇ ಕೊಟ್ಟರು ಎಂದು ವರದಿಯಾಗಿದೆ.

ಬಹುಶಃ ಪ್ರಧಾನಿಗಳ 'ಆಶ್ಚರ್ಯ'ವನ್ನೇ ಕೈಗೆತ್ತಿಕೊಂಡು ಬಿಜೆಪಿ ಐಟಿ ಸೆಲ್‌ನ ಮುಖ್ಯಸ್ಥ ಅಮಿತ್ ಮಾಲವಿಯ ಸಬ್ರಿನಾರವರ ಪ್ರಶ್ನೆ 'ದುರುದ್ದೇಪೂರಿತ'ವಾದದ್ದು ಎನ್ನುತ್ತ ಅದಕ್ಕೆ ಆಕೆ ತಕ್ಕ ಉತ್ತರ ಪಡೆದರು ಎಂದರು. ಪತ್ರಕರ್ತರ ನೇರವಾದ ಪ್ರಶ್ನೆಗೆ ಉತ್ತರವನ್ನೇ ನೀಡದಿದ್ದ ಪ್ರಧಾನಿಗಳ ಆ 'ತಕ್ಕ ಉತ್ತರ' 'ಟೂಲ್‌ಕಿಟ್ ಗ್ಯಾಂಗ್'ಗೆ ಒಂದು ದೊಡ್ಡ 'ಹೊಡೆತ' ಎಂದೂ ಅವರು ವರ್ಣಿಸಿದರು. ಇದು ಬಿಜೆಪಿ ಐಟಿ ಟ್ರೋಲ್ ಪಡೆ ಈಗ ಸಾಮಾನ್ಯವಾಗಿ ಮೋದಿ ಸರಕಾರದ ಕ್ರಮಗಳನ್ನು ಪ್ರಶ್ನಿಸುವ ಎಲ್ಲರಿಗೂ ಬಳಸುವ ಪದ ಎಂಬುದೀಗ ಎಲ್ಲರಿಗೂ ತಿಳಿದಿದೆ.

ಉಳಿದ ಟ್ರೋಲ್ ಪಡೆ, 'ಒಪ್‌ಇಂಡಿಯಾ' ದಂತಹ ಆಳುವ ಪಕ್ಷ-ಪರವಾದ , ಹಿಂದುತ್ವ-ಪರವಾದ ವೆಬ್‌ಸೈಟುಗಳು, ಟ್ವಿಟರ್ ಹ್ಯಾಂಡಲ್‌ಗಳು ಇನ್ನೂ ಮುಂದೆ ಹೋಗಿ ಸಬ್ರೀನಾರವರ ಪೂರ್ವಾಪರಗಳನ್ನು ಕೆದಕಿ, ಆಕೆ ಭಾರತ-ದ್ವೇಷಿ, ಪಾಕಿಸ್ತಾನ-ಪರ, ಪಾಕಿಸ್ತಾನೀ ಪೋಷಕರ ಮಗಳು, ಇಸ್ಲಾಮ್‌ವಾದಿಗಳು ಮತ್ತು ಎಡ-ಉದಾರವಾದಿಗಳ ದಾವೆಗಳನ್ನು ಜಾಣತನದಿಂದ ಈ ಪ್ರಶ್ನೆಯಲ್ಲಿ ಧ್ವನಿಸಿದ್ದಾಳೆ ಎಂದೆಲ್ಲ ಟೀಕಿಸಿದವು.

"ಇದು ಸಬ್ರೀನಾ ಸಿದ್ದಿಕಿಯ ಪ್ರಶ್ನೆಯಷ್ಟೇ ಅಲ್ಲ, ನಮ್ಮೆಲ್ಲರ ಪ್ರಶ್ನೆ"

ಇದು ಪ್ರಧಾನಿ ಮೋದಿಯವರಿಗೆ ಪ್ರಶ್ನೆ ಕೇಳಿದ ಪತ್ರಕರ್ತರಿಗೆ ಕೊಡುತ್ತಿರುವ ಆನ್‌ಲೈನ್ ಕಿರುಕುಳ ಎಂದು ಸ್ವತಃ ಶ್ವೇತಭವನ ಮತ್ತು ಶ್ವೇತಭವನದ ಬಾತ್ಮೀದಾರರ ಸಂಘ(ಡಬ್ಲ್ಯುಹೆಚ್‌ಸಿಎ) ಬಲವಾಗಿ ಖಂಡಿಸಿವೆ.

"ಸಬಿನಾ ಸಿದ್ದಿಕಿಯವರು ಶ್ವೇತಭವನದ ಪತ್ರಕರ್ತರ ಪಡೆಯನ್ನು ಚೆನ್ನಾಗಿಯೇ ಪ್ರತಿನಿಧಿಸಿದ್ದಾರೆ. ನಮ್ಮೆಲ್ಲರ ಪ್ರಶ್ನೆಗಳ ಪಟ್ಟಿಯಲ್ಲಿ ಪ್ರಧಾನವಾಗಿದ್ದ ಪ್ರಶ್ನೆಗಳನ್ನೇ ಆಕೆ ಕೇಳಿದ್ದಾರೆ. ದುರದೃಷ್ಟವಶಾತ್ ನಂತರ ಆಕೆಯನ್ನು ಜನಗಳು, ಪ್ರಧಾನ ಮಂತ್ರಿಗಳ ರಾಜಕೀಯ ಪಕ್ಷದಿಂದ ಸಂಬಂಧವಿರುವವರೂ ಸೇರಿ, ತೀವ್ರ ಆನ್‌ಲೈನ್ ಕಿರುಕುಳಗಳಿಗೆ ಗುರಿಪಡಿಸುತ್ತಿದ್ದಾರೆ., ಆಕೆಯ ಉದ್ದೇಶ, ಧರ್ಮ ಮತ್ತು ಪರಂಪರೆಯನ್ನು ಪ್ರಶ್ನಿಸುತ್ತಿದ್ದಾರೆ. ಇದನ್ನು ಒಪ್ಪಲು ಸಾಧ್ಯವಿಲ್ಲ. ನಮ್ಮ ಸಂಘ ಸಬ್ರೀನಾ ಮತ್ತು ಆಕೆ ಕೇಳಲು ಆರಿಸಿದ ಪ್ರಶ್ನೆಗಳ ಪರವಾಗಿ ನಿಲ್ಲುತ್ತದೆ. ಒಂದು ಪ್ರಜಾಪ್ರಭುತ್ವದಲ್ಲಿ ಪತ್ರಕರ್ತರ ಮೇಲೆ ಅವರು ತಮ್ಮ ಕೆಲಸ ಮಾಡಿದ್ದಕ್ಕಾಗಿ ಮತ್ತು ಕೇಳಬೇಕಾಗಿರುವ ಪ್ರಶ್ನೆಗಳನ್ನು ಕೇಳಿದ್ದಕ್ಕಾಗಿ ಗುರಿಯಿಡಬಾರದು" ಎಂದು ಡಬ್ಲ್ಯುಹೆಚ್‌ಸಿಎ ಅಧ್ಯಕ್ಷರಾದ ತಮಾರಾ ಕೀಥ್ ಜೂನ್ 27ರಂದು ಹೇಳಿದರು.

ಇದಕ್ಕೆ ಮೊದಲು ಸ್ವತಃ ಶ್ವೇತಭವನದ ವಕಾರರು ಕೂಡ ಇಂತಹ ಕಿರುಕುಳ ಒಪ್ಪತಕ್ಕಂಥದ್ದಲ್ಲ ಎಂದು ಖಂಡಿಸುತ್ತ ಹೇಳಿದರು.

"ಆ ಕಿರುಕುಳದ ವರದಿಗಳ ಬಗ್ಗೆ ನಮಗೆ ತಿಳಿದಿದೆ. ಅದು ಒಪ್ಪತಕ್ಕಂಥದ್ದಲ್ಲ. ಎಲ್ಲೇ ಆಗಲಿ, ಯಾವುದೇ ಸಂದರ್ಭದಲ್ಲೇ ಆಗಲಿ ಪತ್ರಕರ್ತರಿಗೆ ಯಾವುದೇ ಕಿರುಕುಳವನ್ನು ನಾವು ಖಂಡಿಸುತ್ತೇವೆ.. ಇದು ಕಳೆದ ವಾರದ ಅಧಿಕೃತ ಭೇಟಿಯ ಕಾಲದಲ್ಲಿ ಪ್ರದರ್ಶನಗೊಂಡ ಪ್ರಜಾಪ್ರಭುತ್ವದ ತತ್ವಗಳಿಗೆ ತದ್ವಿರುದ್ಧವಾದವುಗಳು" ಎಂದು ಶ್ವೇತಭವನದ ರಾಷ್ಟ್ರೀಯ ಭದ್ರತೆಯ ಪ್ರಶ್ನೆಗಳನ್ನು ಕುರಿತ ವಕ್ತಾರ ಜಾನ್ ಕಿರ್ಬಿ ಎನ್‌ಬಿಸಿ ನ್ಯೂಸ್ ವರದಿಗಾರ ಮತ್ತು ಡಬ್ಲ್ಯುಹೆಚ್‌ಸಿಎ ಉಪಾಧ್ಯಕ್ಷರಾಗಿರುವ ಕೆಲ್ಲಿ ಒಡೊನ್ನಲ್ಲ್ ಪ್ರಶ್ನೆಗೆ ಉತ್ತರಿಸುತ್ತ ಹೇಳಿರುವುದಾಗಿ ವರದಿಯಾಗಿದೆ.

ಪ್ರಜಾಪ್ರಭುತ್ವದ ಬಗ್ಗೆ ಅವರಿಗೆ ಪಾಠ ಹೇಳಿರುವ ನಮ್ಮ ಪ್ರಧಾನಿಗಳು ಇದುವರೆಗೆ ಭಾರತದ ಈ ಟ್ರೋಲ್‌ಕೃತ್ಯದ ಬಗ್ಗೆಯಾಗಲೀ, ಅಮೆರಿಕನ್ ಪತ್ರಕರ್ತರ ಪ್ರತಿಕ್ರಿಯೆಯ ಬಗ್ಗೆಯಾಗಲಿ ಎಂದಿನಂತೆ ದಿವ್ಯಮೌನ ತಳೆದಿರುವಂತೆ ಕಾಣುತ್ತದೆ.

ಈ ಪ್ರತಿಕಾಗೋಷ್ಠಿಯ ಮೊದಲೇ ಅಮೆರಿಕಾದಲ್ಲಿ ಮೋದಿ ಸರಕಾರದ ಅಲ್ಪಸಂಖ್ಯಾತ-ವಿರೋಧಿ ನಿಲುವಿನ ಬಗ್ಗೆ ರಾಜಕೀಯ ವಲಯದಲ್ಲೂ ಆತಂಕದ ದನಿಗಳು ಕೇಳಬಂದಿದ್ದವು.

ತಾರತಮ್ಯ?



"ಪ್ರಜಾಪ್ರಭುತ್ವ. ಸಬ್ ಕಾ ಸಾಥ್.ಸಬ್ ಕಾ ವಿಕಾಸ್,, ಸಬ್ ಕಾ ವಿಶ್ವಾಸ್.. ಸಬ್ ಕಾ...." ವ್ಯಂಗ್ಯಚಿತ್ರ: ಸತೀಶ ಆಚಾರ್ಯ, ಮೊಲಿಟಿಕ್ಸ್.ಇನ್


ಅಮೆರಿಕಾದ ಸಂಸತ್ತಿನ ಎರಡೂ ಸದನಗಳ 75 ಆಳುವ ಡೆಮಾಕ್ರಟಿಕ್ ಪಕ್ಷದ ಸದಸ್ಯರುಗಳು ಅಮೆರಿಕಾದ ಅಧ್ಯಕ್ಷರು ಭಾರತದ ಪ್ರಧಾನಿಯೊಂದಿಗೆ ಮಾತುಕತೆಗಳಲ್ಲಿ ಭಾರತದಲ್ಲಿ ಮಾನವ ಹಕ್ಕುಗಳ ಬಗ್ಗೆ ತಮ್ಮ ಆತಂಕಗಳನ್ನು ಚರ್ಚಿಸಬೇಕು ಎಂದು ಆಗ್ರಹಿಸಿದ್ದರು ಎಂದು ವರದಿಯಾಗಿದೆ. ಅಲ್ಲದೆ ಮಾಜಿ ಅಧ್ಯಕ್ಷ ಬರಾಕ್ ಒಬಾಮ ಕೂಡ "ಬಹುಸಂಖ್ಯಾಕ ಹಿಂದೂ ಭಾರತದಲ್ಲಿ ಮುಸ್ಲಿಂ ಅಲ್ಪಸಂಖ್ಯಾತರ ರಕ್ಷಣೆಯ ಬಗ್ಗೆ ಪ್ರಸ್ತಾಪಿಸಬೇಕಾದ ಒಂದು ಸಂಗತಿ" ಎಂದು ಹೇಳಿರುವುದಾಗಿ ವರದಿಯಾಗಿದೆ. ಅವರಿನ್ನೂ ಆ ಹುದ್ದೆಯಲ್ಲಿದ್ದರೆ ಕೇಳುತ್ತಿದ್ದರೇ ಎಂಬುದು ಬೇರೆ ಪ್ರಶ್ನೆ. ಆದರೆ ಇದಕ್ಕೆ ಪ್ರತಿಕ್ರಿಯೆಯಾಗಿ ಈಶಾನ್ಯ ಭಾರತದಲ್ಲಿ ಹಿಂದುತ್ವ ರಾಜಕೀಯದ ಕಟ್ಟಾಳು ಎನಿಸಿರುವ ಅಸ್ಸಾಂನ ಮುಖ್ಯಮಂತ್ರಿ 'ಹುಸೇನ್ ಒಬಾಮ' ಎಂಬ ನಂಜಿನ ಮಾತಾಡಿರುವುದು, ಕೆಲವು ಕೇಂದ್ರ ಮಂತ್ರಿಗಳೂ,ಆಳುವ ಪಕ್ಷದ ಮುಖಂಡರುಗಳೂ ತಮ್ಮದೇ ಟಿಪ್ಪಣಿಗಳನ್ನು ಸೇರಿಸಿರುವುದು ಪ್ರಧಾನಿಗಳ ವಾಶಿಂಗ್ಟನ್ ಪ್ರಜಾಪ್ರಭುತ್ವದ ಪಾಟದ ಟೊಳ್ಳನ್ನು ಪ್ರದರ್ಶಿಸಿದೆ ಎನ್ನಬಹುದು.

"ಅಧ್ಯಕ್ಷ ಬೈಡನ್ ಕೂಡ ಪ್ರಸ್ತಾಪಿಸಿರುವಂತೆ ಪ್ರಜಾಪ್ರಭುತ್ವ ನಮ್ಮ ಎರಡೂ ದೇಶಗಳ ಡಿಎನ್‌ಎ ಯಲ್ಲಿದೆ. ಪ್ರಜಾಪ್ರಭುತ್ವ ನಮ್ಮ ಚೈತನ್ಯ. ಪ್ರಜಾಪ್ರಭುತ್ವ ನಮ್ಮ ಧಮನಿಗಳಲ್ಲಿ ಹರಿಯುತ್ತಿದೆ. ನಾವು ಪ್ರಜಾಪ್ರಭುತ್ವವನ್ನು ಜೀವಿಸುತ್ತೇವೆ..."–ಇದು ಅಮೆರಿಕನ್ ಪತ್ರಕರ್ತೆಯ ಪ್ರಶ್ನೆಗೆ 'ಉತ್ತರಿಸುತ್ತ' ಪ್ರಧಾನಿಗಳು ಹೇಳಿದ್ದ ಪಾಟ!

ಅಮೃತ ಕಾಲದಲ್ಲಿ ಶ್ರೀಮಂತ ಬ್ಯಾಂಕ್ ಸುಸ್ತಿದಾರರಿಗೆ ಮತ್ತಷ್ಟು 'ರೆವ್ಡಿ'

ರಿಜರ್ವ್ ಬ್ಯಾಂಕ್ ಇತ್ತೀಚೆಗೆ ಬ್ಯಾಂಕ್ ಸುಸ್ತಿ ಸಾಲಗಳ 'ರೈಟ್-ಆಫ್' ಅಥವ 'ರಾಜಿ ಇತ್ಯರ್ಥ'ಗಳಿಗೆ ಅವಕಾಶ ನೀಡಿರುವ ಕ್ರಮ ಈಗ ಬಹಳಷ್ಟು ಚರ್ಚೆಯಲ್ಲಿದೆ. ಇದಕ್ಕೆ ಪ್ರತಿಕ್ರಿಯಿಸುತ್ತ ರಿಜರ್ವ್ ಬ್ಯಾಂಕ್ ಇದು ಹೊಸತೇನಲ್ಲ, ಈ ರಾಜಿಗಳು ಸಾಲ ನೀಡಿದವರ, ಅಂದರೆ ಬ್ಯಾಂಕುಗಳ 'ವಿವೇಚನೆ'ಗೆ ಬಿಟ್ಟದ್ದು ಎಂದು ಹೇಳಿದೆ. ಇದೇ ಸಮಸ್ಯೆ ಎನ್ನುತ್ತಾರೆ ಈ ಕುರಿತು ಅಧ್ಯಯನ ಮಾಡಿರುವ ಅನಿರ್ಬಾನ್ ಭಟ್ಟಾಚಾರ್ಯ ಮತ್ತು ಪ್ರಣಯ್ ಸಿಂಗ್(ಸ್ಕ್ರಾಲ್.ಇನ್, ಜೂನ್ 26). ಮರುಪಾವತಿ ಮಾಡುವ ಶಕ್ತಿಯಿದ್ದರೂ ಬೇಕೆಂದೇ ಪಾವತಿ ಮಾಡದ ಶ್ರೀಮಂತ ಸುಸ್ತಿದಾರರು ತಪ್ಪಿಸಿಕೊಳ್ಳಲು ಸುಲಭ ಮಾರ್ಗಗಳನ್ನು ಕೊಡುವ ಬಗ್ಗೆ ಯೋಚಿಸಲಾಗುತ್ತಿದೆಯೇ ಹೊರತು, ಸರಕಾರಕ್ಕಾಗಲೀ, ರಿಜರ್ವ್ ಬ್ಯಾಂಕಿಗಾಗಲೀ ಇಂತಹ ಸುಸ್ತಿದಾರರ ಸಂಖ್ಯೆ, ಜತೆಗೆ ಸಾಲಬಾಕಿಗಳಿ ಮತ್ತು ರೈಟ್-ಆಫ್‌ಗಳ ಸಂಖ್ಯೆಗಳೂ ಹೆಚ್ಚುತ್ತಿರುವ ಸಮಸ್ಯೆಯನ್ನು ಕೈಗೆತ್ತಿಕೊಳ್ಳುವ ಯೋಚನೆಯೂ ಇದ್ದಂತಿಲ್ಲ ಎಂದು ಅವರು ಹೇಳುತ್ತಾರೆ.

ಈ ಸಂದರ್ಭದಲ್ಲಿ ಅವರು ಏಳು ವರ್ಷಗಳ ಹಿಂದಿನ ನಮ್ಮ ಪ್ರಸಕ್ತ ಪ್ರಧಾನಿಗಳ ಗುಡುಗನ್ನು ನೆನಪಿಸಿದ್ದಾರೆ. **ಬೇಕೆಂದೇ ಸಾಲ ಮರುಪಾವತಿ ಮಾಡದವರಿಗೆ ಕಾನೂನಿನ ರುಚಿ ತೋರಿಸುತ್ತೇನೆ, ಇದನ್ನು ಯಾರಿಗಾದರೂ ಮಾಡಲು ಸಾಧ್ಯವಿದ್ದರೆ, ಅದು ನರೇಂದ್ರ ಮೋದಿ ಮಾತ್ರ ಎಂದು ಜನರಿಗೆ ಗ್ಯಾರಂಟಿ ಇದೆ, ನಾನದನ್ನು ಖಂಡಿತವಾಗಿ ಮಾಡುತ್ತೇನೆ ಎಂದು ಸಂದರ್ಶನದಲ್ಲಿ ಹೇಳಿದ್ದರು. ಆದರೆ ಈಗ ಅಂಕೆ-ಸಂಖ್ಯೆಗಳು ಬೇರೆಯೇ ಹೇಳುತ್ತಿವೆ** ಎನ್ನುತ್ತಾರೆ ಅವರು.



* 2013ರಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳ ರೈಟ್-ಆಫ್‌ಗಳ ಮೊತ್ತ 7187 ಕೋಟಿ ರೂ. ಆಗಿದ್ದರೆ, 2022ರಲ್ಲಿ ಅದು 1,19,713 ಕೋಟಿ ರೂ.ಗೆ ನೆಗೆದಿದೆ!
* ಮಾರ್ಚ್ 31, 2023ರ ವೇಳೆಗೆ ಬ್ಯಾಂಕುಗಳು 1 ಕೋಟಿ ರೂ. ಗಿಂತ ಹೆಚ್ಚಿನ ಸುಸ್ತಿದಾರರ ಮೇಲೆ ಹಾಕಿರುವ ಖಟ್ಲೆಗಳ ಸಂಖ್ಯೆ 26086ಕ್ಕೇರಿದೆ. ಅವರ ಒಟ್ಟು ಸಾಲ ಬಾಕಿ ರೂ. 6,01,834 ಕೋಟಿ!
* 2005-2024ರ ಅವಧಿಯಲ್ಲಿ ಬ್ಯಾಂಕ್ ವಂಚನೆಗಳ ಮೊತ್ತ 34, 993 ಕೋಟಿ ರೂ.ಗಳಾಗಿದ್ದರೆ, 2015-23ರ ಅವಧಿಯಲ್ಲಿ ಇದು 5.89ಲಕ್ಷ ಕೋಟಿ ರೂ. ಅಂದರೆ 17 ಪಟ್ಟು ಜಿಗಿತ!

ಬಡವಿಭಾಗಗಳಿಗೆ ಸರಕಾರ ಮಾಡುವ ಖರ್ಚನ್ನು 'ದುಂದುವೆಚ್ಚ' 'ತೆರಿಗೆದಾರರ ಹಣದ ಪೋಲು' ಎಂದೆಲ್ಲ ಈಗ ಬಹಳಷ್ಟು ಮಧ್ಯಮರ್ಗದವರೂ ಟೀಕೆ ಮಾಡುತ್ತಾರೆ. ಸ್ವತಃ ಪ್ರಧಾನಿಗಳೇ ಅದು 'ರೆವ್ಡಿ', ಅಂದರೆ ಬಿಟ್ಟಿ ಹಂಚಿಕೆ ಎಂದಿದ್ದಾರೆ. ಆದರೆ ಈ ಹೋಲಿಕೆಯನ್ನು ನೋಡಿ ಎನ್ನುತ್ತಾರೆ ಈ ಇಬ್ಬರು ಅಧ್ಯಯನಕಾರರು:

* 2023-24 ರ ಬಜೆಟಿನಲ್ಲಿ ಮೂರು ಪ್ರಮುಖ ಸಾಮಾಜಿಕ ವಲಯಗಳಿಗೆ ನೀಡಿರುವ ಮೊತ್ತ

ಮನರೇಗ:	ರೂ. 60,000 ಕೋಟಿ
ಆರೋಗ್ಯ:	ರೂ. 89,155 ಕೋಟಿ
ಶಿಕ್ಷಣ:	ರೂ.1,12, 898 ಕೋಟಿ

* 2021-22ರಲ್ಲಿ ಸಾಲ ಬಾಕಿ ರೈಟ್ ಆಫ್ ಅಂದರೆ ಶ್ರೀಮಂತ ಸುಸ್ತಿದಾರರಿಗೆ 'ರೆವ್ಡಿ': ರೂ. 1,72,800 ಕೋಟಿ!

ಅವರು ಇನ್ನೊಂದು ಹೋಲಿಕೆಯನ್ನೂ ಕೊಟ್ಟಿದ್ದಾರೆ:

ರೈಲು ಸುರಕ್ಷೆಗೆ ಹಣದ 'ಕೊರತೆ' VS ಸುಸ್ತಿ ಸಾಲಗಳ 'ರೈಟ್-ಆಫ್'

ಬಾಲಸೋರ್‌ನಲ್ಲಿ ಸಂಭವಿಸಿದ ರೈಲು ಅಪಘಾತವು ಕನಿಷ್ಠ 292 ಜನರನ್ನು ಬಲಿತೆಗೆದುಕೊಂಡಿತು, ಅದು ರೈಲ್ವೆ ಸುರಕ್ಷತೆಗಾಗಿ ಎಷ್ಟು ಖರ್ಚು ಮಾಡಲಾಗುತ್ತಿದೆ ಎಂಬ ಪ್ರಶ್ನೆಯನ್ನು ಮುನ್ನೆಲೆಗೆ ತಂದಿತು. ಈ ಪ್ರಶ್ನೆಯನ್ನು ಸಿಎಜಿ(ಮಹಾಲೆಕ್ಕಪರಿಶೋಧಕರ ಕಚೇರಿ) 2022 ರಲ್ಲಿ ನೀಡಿದ ಅದರ 23 ನೇ ವರದಿಯೇ ಪರೋಕ್ಷವಾಗಿ ಕೇಳಿತ್ತು. ಹಳೆಯ ರೋಲಿಂಗ್ ಸ್ಟಾಕ್, ಹಳಿಗಳನ್ನು ಬದಲಾಯಿಸಲು ಅಗತ್ಯ ಹಣವನ್ನು ಖರ್ಚು ಮಾಡಲಾಗುತ್ತಿಲ್ಲ, ಅವುಗಳ ನವೀಕರಣಕ್ಕೆ ಅಗತ್ಯವಿರುವ ಹಣದ ಒಟ್ಟು ಕೊರತೆಯು 103,395 ಕೋಟಿ ರೂ. ಎಂದಿತ್ತು.

ಆದರೆ ಅದೇ ವರ್ಷ ಸಾರ್ವಜನಿಕ ವಲಯದ ಬ್ಯಾಂಕ್‌ಗಳ ಸುಸ್ತಿ ಸಾಲ ರೈಟ್-ಆಫ್ ಮೊತ್ತವೇ ರೂ.1,33, 945 ಕೋಟಿ. ಮತ್ತು ಖಾಸಗಿ ವಲಯದ ಬ್ಯಾಂಕ್‌ಗಳದ್ದೂ ಸೇರಿ ಒಟ್ಟು ರೈಟ್-ಆಫ್ ಮೇಲೆ ಹೇಳಿದಂತೆ 1,72,800 ಕೋಟಿ ರೂ.!

ಇದೂ ತೆರಿಗೆ ಹಣವೇ. ರಾಷ್ಟ್ರೀಯ ಮಾಧ್ಯಮಗಳಲ್ಲಿ ಇದರ ಬಗ್ಗೆ ನಮ್ಮ ಆಳುವವರಿಂದ ಅವರ ಆಶ್ವಾಸನೆಗಳ ಬಗ್ಗೆ ಉತ್ತರಗಳನ್ನು ಕೇಳದಿದ್ದರೆ, ಸರ್ವಜನಿಕ ಜವಾಬುದಾರಿಕೆಯ ವ್ಯವಸ್ಥೆಯೇ, ಅಂದರೆ ಪ್ರಜಾಪ್ರಭುತ್ವದ ಬುನಾದಿಯೇ ಕುಸಿದಿದೆ ಎಂದರ್ಥವಾಗುತ್ತದೆ ಎಂದು ಈ ಅಧ್ಯಯನಕಾರರು ಹೇಳುತ್ತಾರೆ.

ಇಲ್ಲಿ ಮತ್ತೊಂದು ಮಾಹಿತಿಯನ್ನೂ ಉಲ್ಲೇಖಿಸಬಹುದು: ಮಧ್ಯಪ್ರದೇಶದ ಆರ್‌ಟಿಐ ಕಾರ್ಯಕರ್ತ ಶೇಖರ್ ಗೌರ್‌ರವರ ಆರ್‌ಟಿಐ ಪ್ರಶ್ನೆಗೆ ಸಿಕ್ಕ ಉತ್ತರದ ಪ್ರಕಾರ **ಜೂನ್2023ರ ವೇಳೆಗೆ ರೈಲ್ವೆಯಲ್ಲಿ 2,74, 580 ನೌಕರಿಗಳು ಖಾಲಿ ಇವೆ. ಇದರಲ್ಲಿ 1,77,924 ಸರಕ್ಷತಾ ಪ್ರವರ್ಗದವು.** ಈ ಪ್ರವರ್ಗದಲ್ಲಿ 9,82,037 ಹುದ್ದೆಗಳಿಗೆ ಮಂಜೂರಾತಿ ನೀಡಲಾಗಿದೆ, ಭರ್ತಿ ಮಾಡಿರುವುದು 8,04,113. (ಪಿಟಿಐ, ಜೂನ್28)

ಕೃಪೆ: ಗ್ಲೋಬಲ್ ಟೈಮ್ಸ್



ಡಾಲರ್ ಒಂದು ವೇಳೆ ಮೀಸಲು ಕರೆನ್ಸಿಯಾಗಿರದಿದ್ದರೆ, ಅಮೆರಿಕವು ಬಂಡವಾಳಶಾಹಿ ಜಗತ್ತಿನ ನಾಯಕನಾಗಿ ಉಳಿಯುತ್ತಿರಲಿಲ್ಲ. ಮೀಸಲು ಕರೆನ್ಸಿಯಾಗಿ ಡಾಲರ್ ನಿರ್ವಹಿಸುವ ಪಾತ್ರವು ಯುಎಸ್‌ಗೆ ಮಾತ್ರವಲ್ಲ, ಇಡೀ ಮುಂದುವರಿದ ಬಂಡವಾಳಶಾಹಿ ಜಗತ್ತಿಗೆ ಮತ್ತು ಇಡೀ ಬಂಡವಾಳಶಾಹಿ ವ್ಯವಸ್ಥೆಗೆ ಪ್ರಯೋಜನಕಾರಿಯಾಗಿದೆ. ಬಂಡವಾಳಶಾಹಿ ವ್ಯವಸ್ಥೆಯು ಸಾಮ್ರಾಜ್ಯಶಾಹಿಯ ಮೇಲೆ ನಿಂತಿದೆ. ಡಾಲರ್ ಈ ಇಡೀ ಸಾಮ್ರಾಜ್ಯಶಾಹಿ ಏರ್ಪಾಟನ್ನು ನೋಡಿಕೊಳ್ಳುತ್ತಿದೆ, ಅದರ ಪ್ರಾಬಲ್ಯವು ಸಮಕಾಲೀನ ಸಾಮ್ರಾಜ್ಯಶಾಹಿಗೆ ಬಲ ತುಂಬುತ್ತದೆ. ಆದರೆ ಡಾಲರ್ ಹೊಂದಿರುವ ಈ ಪ್ರಾಬಲ್ಯವು ಈಗ ಅಪಾಯದಲ್ಲಿದೆ. ವ್ಯಾಪಾರ ಏರ್ಪಾಟುಗಳು ಈಗ ಸ್ಥಳೀಯ ಕರೆನ್ಸಿಗಳ ಮೂಲಕ ನಡೆಯುತ್ತಿವೆ. ಇದನ್ನು ಮುಂದುವರಿದ ಬಂಡವಾಳಶಾಹಿ ದೇಶಗಳು ವಿಧಿಸಿದ "ನಿರ್ಬಂಧ"ಗಳನ್ನು ಎದುರಿಸುತ್ತಿರುವ ದೇಶಗಳು ಉತ್ತೇಜಿಸುತ್ತಿವೆ. ಇವೆಲ್ಲವೂ ಡಾಲರ್ ಪ್ರಾಬಲ್ಯದ ಕುಸಿತ ಸನ್ನಿಹಿತವಾಗಿದೆ ಎಂಬುದನ್ನು ಸೂಚಿಸುತ್ತವೆ ಎಂದಲ್ಲ. ಆದರೂ, ಕಾಲ ಕ್ರಮದಲ್ಲಿ ಡಾಲರ್ ಅವನತಿಯ ಪ್ರಕ್ರಿಯೆ ಆರಂಭವಾಗುವುದಂತೂ ಖರೇ.

ಪ್ರೊ. ಪ್ರಭಾತ್ ಪಟ್ನಾಯಕ್   ಅನು: ಕೆ.ಎಂ.ನಾಗರಾಜ್

ಡಾಲರ್ ಪ್ರಾಬಲ್ಯದ ಪರಿಣಾಮಗಳೂ ಮತ್ತು ಅವನತಿಯ ಪ್ರಕ್ರಿಯೆಯೂ

ವಿಶ್ವದ ಮೀಸಲು ಕರೆನ್ಸಿ ಎಂಬ ಸವಲತ್ತನ್ನು ಹೊಂದಿರುವ ಡಾಲರಿಗೂ ಸಾಮ್ರಾಜ್ಯಶಾಹಿಗೂ ಏನು ಸಂಬಂಧ? ಈ ಪ್ರಶ್ನೆಯಲ್ಲಿ ಎರಡು ಭಾಗಗಳಿವೆ: ಡಾಲರ್ ಹೊಂದಿರುವ ಈ ಸವಲತ್ತು ಯು.ಎಸ್ ಸಾಮ್ರಾಜ್ಯಶಾಹಿಯೊಂದಿಗೆ ಹೇಗೆ ಸಂಬಂಧಿಸಿದೆ ಎಂಬುದು ಮೊದಲನೆಯದು ಮತ್ತು ಅದು ಇಡೀ ಸಾಮ್ರಾಜ್ಯಶಾಹಿ ಏರ್ಪಾಟಿನೊಂದಿಗೆ ಹೇಗೆ ಸಂಬಂಧಿಸಿದೆ ಎಂಬುದು ಎರಡನೆಯದು. ಜಾಗತಿಕ ಅರ್ಥವ್ಯವಸ್ಥೆಯಲ್ಲಿ ಸಂಪತ್ತನ್ನು ಇಟ್ಟುಕೊಳ್ಳುವ ಮಾಧ್ಯಮವಾಗಿ ಚಿನ್ನ ಮತ್ತು ಬೆಳ್ಳಿಯಂತಹ ಅಮೂಲ್ಯ ಲೋಹಗಳು ಚಾರಿತ್ರಿಕವಾಗಿ ನಿರ್ವಹಿಸಿದ ಪಾತ್ರವನ್ನು ಈಗ ಮೀಸಲು ಕರೆನ್ಸಿ ಎಂಬ ಸವಲತ್ತನ್ನು ಹೊಂದಿರುವ ಡಾಲರ್ ನಿರ್ವಹಿಸುತ್ತಿದೆ. ಬ್ರೆಟನ್ ವುಡ್ಸ್ ವ್ಯವಸ್ಥೆಯಡಿಯಲ್ಲಿ, ಡಾಲರನ್ನು ಒಂದು ನಿಗದಿತ ದರದಲ್ಲಿ ಚಿನ್ನದೊಂದಿಗೆ ಅಧಿಕೃತವಾಗಿ ಪರಿವರ್ತಿಸಬಹುದಿತ್ತು. ಈಗ ಡಾಲರನ್ನು ಅಧಿಕೃತವಾಗಿ ಚಿನ್ನದೊಂದಿಗೆ ಬದಲಾಯಿಸಿಕೊಳ್ಳಲಾಗದು. ಆದರೂ, ವಿಶ್ವದ ಶ್ರೀಮಂತರು ಡಾಲರನ್ನು ಚಿನ್ನಕ್ಕೆ ಸಮಾನವೆಂದೇ ಭಾವಿಸಲು ಎರಡು ಕಾರಣಗಳಿವೆ.

ಸರಕುಗಳಿಗೆ ಹೋಲಿಸಿದರೆ, ಡಾಲರ್ ಸಾಗಣೆ ವೆಚ್ಚವು ಅತ್ಯಲ್ಪ ಎಂಬುದು ಮೊದಲನೆಯದು. ವರ್ಷದಿಂದ ವರ್ಷಕ್ಕೆ ಏರಿಳಿತವಾಗುವ ಸರಕುಗಳ ಬೆಲೆಗಳಿಗೆ ಹೋಲಿಸಿದರೆ, ಡಾಲರ್ ಮೌಲ್ಯವು ಬಹುದೀರ್ಘಕಾಲದ ವರೆಗೂ ಕುಸಿಯುವುದಿಲ್ಲ ಎಂಬುದು ಎರಡನೆಯದು. ಒಂದು ದೊಡ್ಡ ಗಾತ್ರದ ಕಾರ್ಮಿಕರ ಮೀಸಲು ಪಡೆಯನ್ನು ಹೊಂದುವ ಮೂಲಕ ಅಮೆರಿಕಾದಲ್ಲಿ ಡಾಲರ್ ವೇತನವನ್ನು ಆದಷ್ಟು ಕೆಳ ಮಟ್ಟದಲ್ಲಿಡುವ ಮೂಲಕ, ರಾಜಕೀಯ ಒತ್ತಡ ಮತ್ತು ಐಎಂಎಫ್ "ಷರತ್ತುಗಳ" ಮೂಲಕ ಮೂರನೇ ಜಗತ್ತಿನ ಪ್ರಾಥಮಿಕ ಸರಕು ಉತ್ಪಾದಕರ ಆದಾಯವನ್ನು ಕುಗ್ಗಿಸಿ, ಅವರು ತಮ್ಮ ಸರಕುಗಳ ಬೆಲೆಗಳನ್ನು ತಗ್ಗಿಸುವಂತೆ ಮಾಡುವ ಮೂಲಕ ಡಾಲರ್ ಮೌಲ್ಯವು ಕುಸಿಯದಂತೆ ನೋಡಿಕೊಳ್ಳಲಾಗುತ್ತದೆ.

"ಚಿನ್ನಕ್ಕೆ ಸಮ"

ವಿಶ್ವದ ಶ್ರೀಮಂತರು ಡಾಲರನ್ನು "ಚಿನ್ನಕ್ಕೆ ಸಮ" ಎಂದು ಒಂದು ವೇಳೆ ಪರಿಗಣಿಸಿದರೆ, ಆಗ, ಅಮೆರಿಕಾವನ್ನು ಬರಿದು ಮಾಡಲಾಗದ ಒಂದು ಚಿನ್ನದ ಗಣಿಯ ಮೇಲೆ ಕುಳ್ಳಿರಿಸಿದಂತಾಗುತ್ತದೆ. ಆಗ, ಅದು ತನ್ನ ಕರೆನ್ಸಿಯನ್ನು ಅಪಮೌಲ್ಯಗೊಳಿಸದೆಯೂ ತನ್ನ ಚಾಲ್ತಿ ಖಾತೆಯ ಕೊರತೆಗೆ ಬೇಕಾಗುವಷ್ಟು ಹಣವನ್ನು ನಿರಾಯಾಸವಾಗಿ ಒದಗಿಸಿಕೊಳ್ಳಬಹುದು. ಖಚಿತವಾಗಿ ಹೇಳುವುದಾದರೆ, ವಿಶ್ವದ ಸಂಪತ್ತನ್ನು ಇಟ್ಟುಕೊಳ್ಳುವ ಕರೆನ್ಸಿ (ಅಂದರೆ, ಆರ್ಥಿಕ ಸಂಪನ್ಮೂಲಗಳನ್ನು ಇಟ್ಟುಕೊಳ್ಳುವ ಮಾಧ್ಯಮ) ಎಂದರೆ, ಅದು ಡಾಲರ್ ಒಂದೇ ಅಲ್ಲ. ಯೂರೋ, ಪೌಂಡ್ ಸ್ಟರ್ಲಿಂಗ್, ಮತ್ತು ಯೆನ್ ಮುಂತಾದ ಕರೆನ್ಸಿಗಳಲ್ಲೂ ವಿಶ್ವದ ಶ್ರೀಮಂತರು ತಮ್ಮ ಸಂಪತ್ತನ್ನು ಇಟ್ಟುಕೊಂಡಿದ್ದಾರೆ. ಈ ಕರೆನ್ಸಿಗಳೂ ಸಹ, ಸಂಪತ್ತನ್ನು ಇಟ್ಟುಕೊಳ್ಳುವ ಸಾಧನಗಳೇ. ಈ ಕರೆನ್ಸಿಗಳು ಡಾಲರ್‌ಗೆ ಹೋಲಿಸಿದರೆ ತಮ್ಮ ಸಾಪೇಕ್ಷ ಮೌಲ್ಯಗಳನ್ನು ಉಳಿಸಿಕೊಂಡಿವೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಈ ಕರೆನ್ಸಿಗಳಿಗೆ ಸಂಬಂಧಿಸಿದ ಮುಂದುವರಿದ ದೇಶಗಳು ತಮ್ಮ ಒಟ್ಟು ಬೇಡಿಕೆಯ ಮಟ್ಟವನ್ನು ಮತ್ತು ಅದಕ್ಕನುಗುಣವಾಗಿ ತಮ್ಮ ದೇಶಗಳ ನಿರುದ್ಯೋಗ ದರಗಳನ್ನು ಹೊಂದಿಸಿಕೊಳ್ಳುತ್ತವೆ ಮತ್ತು ಅದರಿಂದಾಗಿಯೇ ಈ ಕರೆನ್ಸಿಗಳ ಮೌಲ್ಯಗಳೂ ಸಹ, ಡಾಲರ್‌ನಂತೆಯೇ, ಬಹಳ ದೀರ್ಘಕಾಲದವರೆಗೂ ಕುಸಿಯುವುದಿಲ್ಲ ಎಂದು ನಿರೀಕ್ಷಿಸಲಾಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಈ ಕರೆನ್ಸಿಗಳೂ ಸಹ ಸಂಪತ್ತನ್ನು ಇಟ್ಟುಕೊಳ್ಳುವ ಮಾಧ್ಯಮದ ಸ್ಥಾನಮಾನವನ್ನು ಡಾಲರ್ ಅನುಕರಣೆಯ ಮಾರ್ಗವಾಗಿ ಪಡೆದುಕೊಂಡಿವೆಯಾದರೂ, ಮೂಲದ ಡಾಲರ್ ಮಾತ್ರವೇ "ಚಿನ್ನಕ್ಕೆ ಸಮ"ನಾದ ಕರೆನ್ಸಿಯಾಗಿಯೇ ಉಳಿದಿದೆ ಮತ್ತು ಈ ಅಂಶವು ಅಮೆರಿಕಾ ದೇಶಕ್ಕೆ ತನ್ನ ಇಂದಿನ ಕೊರತೆಗಳಿಗೆ ಹಣ ಒದಗಿಸಿಕೊಳ್ಳುವ ಅವಕಾಶವನ್ನು ಕಲ್ಪಿಸಿಕೊಡುತ್ತದೆ.

ಮೊದಲನೆಯದಾಗಿ, ಅಂತಹ ಕೊರತೆಗಳು ಏಕೆ ಉದ್ಭವಿಸುತ್ತವೆ? ಎಂಬ ಪ್ರಶ್ನೆ ಏಳುತ್ತದೆ. ಬಂಡವಾಳಶಾಹಿಯ ಇತಿಹಾಸದುದ್ದಕ್ಕೂ, ಪ್ರಮುಖ ಬಂಡವಾಳಶಾಹಿ ದೇಶವು ಸಾಮಾನ್ಯವಾಗಿ ಇತರ ಉದಯೋನ್ಮುಖ ಬಂಡವಾಳಶಾಹಿ ಶಕ್ತಿಗಳೊಂದಿಗೆ ಚಾಲ್ತಿ ಖಾತೆಯಲ್ಲಿ ಕೊರತೆಯನ್ನು ಉಳಿಸಿಕೊಂಡೇ ಬಂದಿದೆ. ಮಹತ್ವಾಕಾಂಕ್ಷೆ ಹೊಂದಿದ್ದ ಪ್ರತಿಸ್ಪರ್ಧಿ ಉದಯೋನ್ಮುಖ ಬಂಡವಾಳಶಾಹಿ ದೇಶಗಳು ತಮ್ಮ ತಮ್ಮ ಮಾರುಕಟ್ಟೆಯನ್ನು ರಕ್ಷಿಸಿಕೊಳ್ಳುತ್ತಿದ್ದರೂ ಸಹ, ಈ ಪ್ರಮುಖ ಬಂಡವಾಳಶಾಹಿ ದೇಶವು ಅವುಗಳಿಗೆ ತನ್ನ ಮಾರುಕಟ್ಟೆಯನ್ನು ಪ್ರವೇಶಿಸುವ ಅವಕಾಶವನ್ನು ಕಲ್ಪಿಸಿಕೊಡುವ ಮೂಲಕ ತನ್ನ ನಾಯಕತ್ವವನ್ನು ಉಳಿಸಿಕೊಂಡು ಬಂದಿದೆ. ವಾಸ್ತವವಾಗಿ, ಅದು ತನ್ನ ನಾಯಕತ್ವವನ್ನು ಉಳಿಸಿಕೊಳ್ಳುವುದಕ್ಕಾಗಿಯೇ ಅವರೊಂದಿಗೆ ತನ್ನ ಚಾಲ್ತಿ ಖಾತೆಯನ್ನು ಕೊರತೆಯಲ್ಲಿ ಇಟ್ಟುಕೊಳ್ಳುವ ಷರತ್ತನ್ನು ಪಾಲಿಸಿತು. ಬ್ರಿಟನ್, ಬಂಡವಾಳಶಾಹಿ ವಿಶ್ವದ ನಾಯಕನಾಗಿದ್ದಾಗ, ಆಗ ಪ್ರತಿಸ್ಪರ್ಧಿ ಶಕ್ತಿಗಳಾಗಿ ಹೊರಹೊಮ್ಮುತ್ತಿದ್ದ ಖಂಡಾಂತರ ಯುರೋಪ್ ಮತ್ತು ಯುಎಸ್‌ಗೆ ಹೋಲಿಸಿದರೆ, ಅದರ ಚಾಲ್ತಿ ಖಾತೆಯು ನಿರಂತರವಾಗಿ ಕೊರತೆಯಲ್ಲಿತ್ತು. ಆದರೆ, ಭಾರತದಂತಹ ವಸಾಹತುಗಳ ಮೇಲೆ ಆಡಳಿತ ನಡೆಸಿದ್ದ ಕಾರಣದ ಮೇಲೆ ವೆಚ್ಚಗಳನ್ನು ಹೇರುವ ಮೂಲಕ ಭಾರತದಂತಹ ವಸಾಹತುಗಳು ವಿಶ್ವದೊಂದಿಗಿನ ತಮ್ಮ ವ್ಯಾಪಾರದಲ್ಲಿ ಗಳಿಸಿದ ಅಪಾರ ಪ್ರಮಾಣದ ಚಿನ್ನ ಮತ್ತು ವಿದೇಶಿ ವಿನಿಮಯವನ್ನು ಬ್ರಿಟನ್ ವಶಪಡಿಸಿಕೊಂಡಿತು ಮತ್ತು ಆ ಮೂಲಕ ತನ್ನ ಚಾಲ್ತಿ ಖಾತೆಯ ಕೊರತೆಯನ್ನು ಸರಿದೂಗಿಸಿಕೊಂಡಿತು. ಈ ಪ್ರಕ್ರಿಯೆಯನ್ನು "ಬರಿದುಗೊಳಿಸುವುದು"(drain) ಎಂದು ಸರಿಯಾಗಿಯೇ ಕರೆಯಲಾಗಿದೆ. ಹಿಂತಿರುಗಿಸದ ಐಶ್ವರ್ಯವನ್ನು ವಶಪಡಿಸಿಕೊಳ್ಳುವುದರ ಜೊತೆಗೆ, ಅಪ–ಕೈಗಾರಿಕೀಕರಣಗೊಳಿಸುವ ರಫ್ತುಗಳನ್ನು ತನ್ನ ವಸಾಹತುಗಳಿಗೆ ಮತ್ತು ಅರೆ–ವಸಾಹತುಗಳಿಗೆ ತಳ್ಳುವ ಮೂಲಕ ಬ್ರಿಟನ್ನಿನ ಪಾವತಿ ಶೇಷವು ಒಟ್ಟಾರೆಯಾಗಿ ಅದರ ಚಾಲ್ತಿ ಖಾತೆಯಲ್ಲಿ ಮಿಗುತಾಯವಾಗಿತ್ತು. ಆದ್ದರಿಂದ, ಅದು ಬಂಡವಾಳವನ್ನು ರಫ್ತು ಮಾಡುವುದೂ ಸಾಧ್ಯವಾಯಿತು. ವಿಪರ್ಯಾಸವೆಂದರೆ, ತಾನು ಬಾಕಿ ತೀರಿಸಬೇಕಿದ್ದ ದೇಶಗಳಿಗೇ (ಬ್ರಿಟನ್ನಿನ ಚಾಲ್ತಿ ಖಾತೆ ಕೊರತೆಗೆ ಸಂಬಂಧಿಸಿದ ದೇಶಗಳಿಗೆ) ಅಂದರೆ ಖಂಡಾಂತರ ಯುರೋಪ್, ಯುಎಸ್ ಮತ್ತು ಬಿಳಿಯರು ನೆಲಸಿದ ಇತರ ಸಮಶೀತೋಷ್ಣ ಪ್ರದೇಶಗಳಿಗೆ ಬಂಡವಾಳವನ್ನು ಬ್ರಿಟನ್ ರಫ್ತು ಮಾಡಿತು.

ನಿರ್ಣಾಯಕವಾಗಿರುವ ಮೀಸಲು ಕರೆನ್ಸಿ ಪಾತ್ರ

ವಸಾಹತುಶಾಹಿಯ ರೀತಿಯಲ್ಲಿ ಮತ್ತು ಅದೇ ಪ್ರಮಾಣದಲ್ಲಿ ಐಶ್ವರ್ಯವನ್ನು ಬೇರೆ ದೇಶಗಳಿಂದ ಇಂದು ಯುಎಸ್ “ಬರಿದುಗೊಳಿಸುವುದು” ಸಾಧ್ಯವಿಲ್ಲ. ಉದಯೋನ್ಮುಖ ಬಂಡವಾಳಶಾಹಿ ದೇಶಗಳನ್ನು ಹೊರತುಪಡಿಸಿ ಮೂರನೆಯ ಜಗತ್ತಿನ ಇತರ ದೇಶಗಳಿಗೆ ಅಪ–ಕೈಗಾರೀಕರಣಗೊಳಿಸುವ ರಫ್ತುಗಳನ್ನು ಅಮೆರಿಕಾ ಮಾಡುವುದು ಸಾಧ್ಯವಿಲ್ಲ. ಆದ್ದರಿಂದ, ಅಮೆರಿಕಾದ ಚಾಲ್ತಿ ಖಾತೆಯು ಒಟ್ಟಾರೆಯಾಗಿ ಕೊರತೆಯಲ್ಲೇ ಇರುತ್ತದೆ. ಈ ಕೊರತೆಯನ್ನು ಡಾಲರ್‌ಗಳನ್ನು ಮುದ್ರಿಸುವ ಮೂಲಕ (ಅಥವಾ ಡಾಲರ್‌ಗಳಲ್ಲಿ ಇತ್ಯರ್ಥಗೊಳಿಸುವ ಸಾಲ ಪತ್ರಗಳನ್ನು ನೀಡುವ ಮೂಲಕ) ಅಮೆರಿಕಾ ನೀಗಿಸಿಕೊಳ್ಳುತ್ತದೆ. ಹಾಗಾಗಿ, ಬಂಡವಾಳಶಾಹಿ ಜಗತ್ತಿನಲ್ಲಿ ತನ್ನ ಪ್ರಾಬಲ್ಯವನ್ನು ಉಳಿಸಿಕೊಳ್ಳಲು ಡಾಲರ್ ವಹಿಸುವ ಮೀಸಲು ಕರೆನ್ಸಿ ಪಾತ್ರವು ಯುಎಸ್‌ಗೆ ನಿರ್ಣಾಯಕವಾಗಿದೆ.

ಅಮೆರಿಕಾದ ಈ ಕೊರತೆಯು ಆ ದೇಶದೊಳಗಿನ ಮತ್ತು ಆ ಮೂಲಕ ಇಡೀ ಬಂಡವಾಳಶಾಹಿ ಜಗತ್ತಿನ ಆರ್ಥಿಕ–ಚಟುವಟಿಕೆಯ ಮಟ್ಟವನ್ನು ನಿರ್ಧರಿಸುತ್ತದೆ. ಬ್ರೆಟ್ಟನ್ ವುಡ್ಸ್ ಅವಧಿಯ ರೀತಿಯಲ್ಲಿ, ಸರ್ಕಾರವು ಕೈಗೊಳ್ಳುವ ಬೃಹತ್ ವೆಚ್ಚಗಳ ಮೂಲಕ ಒಟ್ಟು ಬೇಡಿಕೆಯನ್ನು ಹೆಚ್ಚಿಸುವುದು ಯಾವ ದೇಶಕ್ಕೂ ಈಗ ಸಾಧ್ಯವಿಲ್ಲ. ಏಕೆಂದರೆ, ಜಾಗತೀಕರಣಗೊಂಡ ಹಣಕಾಸು ಬಂಡವಾಳವು, ಪ್ರತಿಯೊಂದು ದೇಶವೂ ಹೊಂದಬಹುದಾದ ವಿತ್ತೀಯ ಕೊರತೆಯ ಮೇಲೆ ಒಂದು ನಿರ್ಬಂಧವನ್ನು ವಿಧಿಸಿದೆ. ಅಂದರೆ, ಪ್ರತಿಯೊಂದು ದೇಶವೂ ಹೊಂದಬಹುದಾದ ವಿತ್ತೀಯ ಕೊರತೆಯ ಮೇಲೆ ಅದರ ಜಿಡಿಪಿಯ ಅನುಪಾತದಲ್ಲಿ ಒಂದು ಗರಿಷ್ಠ ಮಿತಿಯನ್ನು ವಿಧಿಸಲಾಗಿದೆ. ಆದರೆ, ಅಮೆರಿಕಾ ಇಂಥಹ ನಿರ್ಬಂಧಗಳಿಂದ ಮುಕ್ತವಾಗಿದೆ. ಮೇಲಾಗಿ, ಅಮೆರಿಕಾದ ಕರೆನ್ಸಿಯನ್ನು "ಚಿನ್ನಕ್ಕೆ ಸಮ" ಎಂದು ಪರಿಗಣಿಸಲಾಗಿರುವುದರಿಂದ ಹಣಕಾಸು ಬಂಡವಾಳವು ಅಮೆರಿಕಾದಿಂದ ಹೊರ ಹರಿಯುವುದು ಸಾಧ್ಯವಿಲ್ಲ. ಆದ್ದರಿಂದ, "ಆಸ್ತಿ–ಬೆಲೆ ಗುಳ್ಳೆ"ಗಳು ಅರ್ಥವ್ಯವಸ್ಥೆಯ ಮೇಲೆ ಉಂಟುಮಾಡುವ ಪರಿಣಾಮವನ್ನು ಹೊರತುಪಡಿಸಿದರೆ, ಯುಎಸ್ ಸರ್ಕಾರವು ಕೈಗೊಳ್ಳುವ ವೆಚ್ಚಗಳು, ವಿಶ್ವದಲ್ಲಿ ವರಮಾನಗಳು ಯಾವುದೇ ನಿರ್ದಿಷ್ಟ ಮಟ್ಟದಲ್ಲೇ ಹಂಚಿಕೆಯಾಗಿರಲಿ, ಬಂಡವಾಳಶಾಹಿ ಜಗತ್ತಿನ ಅರ್ಥವ್ಯವಸ್ಥೆಯ ಚಟುವಟಿಕೆಯ ಮಟ್ಟವನ್ನು ನಿರ್ಧರಿಸುತ್ತವೆ. ಆದರೆ, ಉಳಿದ ದೇಶಗಳೊಂದಿಗೆ ಸಾಲ (ಯುಎಸ್ ಸರ್ಕಾರ ನೀಡುವ ಡಾಲರ್‌ಗಳು ಮತ್ತು ಬಾಂಡ್‌ಗಳ ಮೂಲಕ) ಮಾಡುವ ಆಭಾಸದಿಂದ ತಪ್ಪಿಸಿಕೊಳ್ಳಲು ಅಮೆರಿಕಾದ ಸರ್ಕಾರವೇ ತನ್ನ ವೆಚ್ಚಗಳನ್ನು ಮಿತಿಗೊಳಿಸಿಕೊಳ್ಳುವ ಆಯ್ಕೆಯನ್ನು ಮಾಡಬಹುದು. ಮಾಡದಿರಲೂಬಹುದು. ಆದರೆ, ಅದು ಏನು ಮಾಡುತ್ತದೆ ಎಂಬುದು ಅದರ ನೀತಿಗೆ ಸಂಬಂಧಿಸಿದ ವಿಷಯವೇ ಹೌದು ಮತ್ತು ಅದು ವಿಶ್ವ ಬಂಡವಾಳಶಾಹಿ ವ್ಯವಸ್ಥೆಯ ಉತ್ಪಾದನೆಯ ಮತ್ತು ಉದ್ಯೋಗದ ಆಗು ಹೋಗುಗಳನ್ನು ನಿರ್ಧರಿಸುವುದೂ ಹೌದು.

ಮೀಸಲು ಕರೆನ್ಸಿಯಾಗಿರದಿದ್ದರೆ..?

ಈ ಇಡೀ ವಿಷಯವನ್ನು ಇನ್ನೊಂದು ರೀತಿಯಲ್ಲೂ ನೋಡಬಹುದು. ಡಾಲರ್ ಮೀಸಲು ಕರೆನ್ಸಿ ಆಗಿರಲಿಲ್ಲ ಎಂದು ಒಂದು ಕ್ಷಣ ಭಾವಿಸೋಣ. ಅಂಥಹ ಸಂದರ್ಭದಲ್ಲಿ, ಡಾಲರ್‌ನ ಬಾಹ್ಯ ಮೌಲ್ಯವನ್ನು ಇಳಿಕೆ ಮಾಡುವ (ಅಪಮೌಲ್ಯ) ಮೂಲಕ ಯುಎಸ್ ತನ್ನ ಚಾಲ್ತಿ ಖಾತೆ ಕೊರತೆಯನ್ನು ತೊಡೆದುಹಾಕುವ ಪ್ರಯತ್ನ ಮಾಡಬೇಕಾಗುತ್ತದೆ. ಈ ಅಪಮೌಲ್ಯವು ಫಲಕಾರಿಯಾಗಬೇಕು ಎಂದಾದರೆ ಮತ್ತು ಅಂಥಹ ಅಪಮೌಲ್ಯಕ್ಕೆ ಸಮಾನವಾಗಿ ದೇಶದೊಳಗೆ ಹಣ ವೇತನವನ್ನು ಮತ್ತು ಬೆಲೆಗಳನ್ನು ಏರಿಕೆ ಮಾಡುವ ಮೂಲಕ ಅದರ ಪರಿಣಾಮವನ್ನು ವಿಫಲಗೊಳಿಸಬಾರದು ಎಂದಾದರೆ, ನಿಜ ವೇತನವನ್ನು ಹಿಂಡಬೇಕಾಗುತ್ತದೆ. ಈ ವೇತನ ಹಿಂಡುವಿಕೆಯು ದೇಶದ ಕಾರ್ಮಿಕರ ಪ್ರತಿರೋಧವನ್ನು ಪ್ರಚೋದಿಸುತ್ತದೆ. ಈ ಪ್ರತಿರೋಧವನ್ನು ಎದುರಿಸಲು ಕಾರ್ಮಿಕರ ವೇತನ–ಚೌಕಾಸಿ ಶಕ್ತಿಯನ್ನು ಪುಟ 14 ಕ್ಕೆ



ಕಾಶ್ಮೀರದ ಸಂಪತ್ತನ್ನು ದೋಚಲು 370 ನೇ ವಿಧಿ ರದ್ದು............

ಪುಟ 11 ರಿಂದ

ಬಹಿರಂಗಪಡಿಸಿದ್ದಾರೆ.

ಸಂವಿಧಾನದ ವಿರುದ್ಧ ಮೋದಿ ಸರಕಾರ ಮಾಡಿದ ಈ ಕ್ಷಿಪ್ರಕ್ರಾಂತಿಯ ರೀತಿಯು ಈಗ ದೇಶದಲ್ಲಿ ಪ್ರತಿಷ್ಠಾಪನೆಯಾಗಿರುವ ಸರ್ವಾಧಿಕಾರಶಾಹಿ ಆಳ್ವಿಕೆಯ ಸಂಕೇತವಾಗಿದೆ. 370ನೇ ವಿಧಿಯನ್ವಯ ಒಂದು ರಾಷ್ಟ್ರಪತಿ ಆದೇಶದ ಮೂಲಕ ಸಂವಿಧಾನದ ಇನ್ನೊಂದು ವಿಧಿಯನ್ನು ಅಂದರೆ 367ನೇ ವಿಧಿಯನ್ನು ಬದಲಾಯಿಸಲು ಬಳಸಲಾಯಿತು. 370ನೇ ವಿಧಿಯ ಸಾರವನ್ನೇ ಹಿಂಪಡೆಯಲು ಅದನ್ನು ಬಳಸಲಾಯಿತು. ಈ ಕುತಂತ್ರದ ಮೂಲಕವಾಗಿ, ರಾಷ್ಟ್ರಪತಿ ಶಾಸನದಲ್ಲಿರುವ ರಾಜ್ಯದ ಶಾಸಕಾಂಗದ ಅಧಿಕಾರವನ್ನು ಕಸಿಯಲಾಯಿತು. ಆ ರಾಜ್ಯವನ್ನೇ ಕಳಚಿ ಹಾಕಲಾಯಿತು.

ಬಿಜೆಪಿ ಸರಕಾರದ ಈ ಕ್ರಮಕ್ಕೆ ವಿವಿಧ ಜನವಿಭಾಗಗಳಿಂದ ಬೆಂಬಲ ವ್ಯಕ್ತವಾಗಿತ್ತು. ಇದು, ಪ್ರತ್ಯೇಕತಾವಾದ ಮತ್ತು ಭಯೋತ್ಪಾದನೆಯನ್ನು ತೊಡೆದುಹಾಕಲು ನಿರ್ಣಾಯಕವಾದ ಮಾರ್ಗವೆಂದು ಅವರು ನಂಬಿದ್ದರು. ಮೋದಿ ಸರಕಾರ ಪ್ರಚುರಪಡಿಸಿದ ಈ ಅಧಿಕೃತ ಕಥನಕ್ಕೆ ಹಲವರು ಮಾರುಹೋದರು. ಆದರೆ ಇದರಿಂದ ಜಮ್ಮು ಕಾಶ್ಮೀರ ಮತ್ತು ಇಡಿಯಾಗಿ ದೇಶದ ಮೇಲೆ ದೀರ್ಘಕಾಲದಲ್ಲಾಗುವ ಅಪಾಯಕಾರಿ ಪರಿಣಾಮ ಏನೆಂಬುದು ಜನರ ಮುಂದೆ ಬಂದಿಲ್ಲ.

ಜಮ್ಮು ಕಾಶ್ಮೀರದಾದ್ಯಂತ ಲಾಕ್ ಡೌನ್; ನರಳಿದ 1.20 ಕೋಟಿ ಕಾಶ್ಮೀರಿಗಳು

ಇಲ್ಲಿ ಲಾಕ್ ಡೌನ್ ಪದ ಬಳಸಿರುವುದಕ್ಕೆ ಕಾರಣವಿದೆ. ಲಾಕ್ ಡೌನ್ ಎಂದರೆ ಏನೆಂಬುದನ್ನು ನಾವೆಲ್ಲಾ ಸ್ವತಃ ಅನುಭವಿಸಿದ್ದೇವೆ. 370ನೇ ವಿಧಿ ರದ್ದು ಮಾಡುವ ಮುನ್ನ ಜಮ್ಮು ಕಾಶ್ಮೀರ ರಾಜ್ಯದಾದ್ಯಂತ 144 ಸೆಕ್ಷನ್, ಕರ್ಫ್ಯೂ ಜಾರಿಗೆ ತಂದು, ಲಾಕ್ ಡೌನ್ ರೀತಿಯಲ್ಲೇ 1.20 ಕೋಟಿ ನಾಗರೀಕರನ್ನು ಹಲವು ತಿಂಗಳುಗಳ ಕಾಲ ಗೃಹಬಂಧನದಲ್ಲಿ ಇರಿಸಲಾಯಿತು. ಜಮ್ಮು ಕಾಶ್ಮೀರದ ಜನರು ಪ್ರಭುತ್ವ ವಿಧಿಸಿದ್ದ 'ಬಂಧನ'ದಿಂದಾಗಿ ತಿಂಗಳುಗಟ್ಟಲೆ ಸಂಕಷ್ಟಗಳಿಗೆ ಸಿಲುಕಿದರು. ಈ ಜನರಿಗೆ ಬೇರೆ ಯಾರೂ ಸ್ಪಂದಿಸಲು ಅವಕಾಶವೇ ಇಲ್ಲದಂತೆ ರಾಜ್ಯದೆಲ್ಲೆಡೆ 'ಕರ್ಫ್ಯೂ', 'ಬಿಗಿ ಭದ್ರತೆ' ಎಂಬ ಬಲವಾದ ಗೋಡೆ ಕಟ್ಟಲಾಯಿತು. ತಮಗೆ ಉಂಟಾಗುವ ಅನಾರೋಗ್ಯಕ್ಕೆ ಚಿಕಿತ್ಸೆ ಪಡೆಯಲಾಗದೆ, ಔಷಧ ಕೊಳ್ಳಲೂ ಆಗದಂತೆ ಸೈನಿಕರ ಸರ್ಪಗಾವಲಿನಲ್ಲಿ ತಮ್ಮ ತಮ್ಮ ಮನೆಗಳಲ್ಲೇ ಬಂಧನಕ್ಕೆ ಒಳಪಟ್ಟರು. ಆಹಾರ ಧಾನ್ಯಗಳಿಲ್ಲದೆ, ಅಗತ್ಯ ವಸ್ತುಗಳನ್ನು ಕೊಳ್ಳಲು ಹೊರಬರಲಾಗದೆ (ಕೆಲವು ಸಲ ಸೈನಿಕರು ಮನೆಯಿಂದ ಹೊರಗೆ ಬರಲು ಅವಕಾಶ ಕೊಟ್ಟರೂ ಅಂಗಡಿಗಳು ತೆರೆಯದೇ), ತಮ್ಮ ಬಳಿ ಹಣವಿಲ್ಲದೆ, ತಮ್ಮದೇ ಮನೆಯೊಳಗೆ ಹಸಿವಿನಿಂದ ನರಳಿದ ಬಡ ಕುಟುಂಬಗಳೆಷ್ಟೊ, ಒಂದು ದಿನ ಕೂಲಿ ಕೆಲಸ ಸಿಗದಿದ್ದರೂ ಆಹಾರಕ್ಕಾಗಿ ಪರಿತಪಿಸುವ ಕೂಲಿ ಇಲ್ಲದ ಬಡ ಕೂಲಿಕಾರರ ಬದುಕು ಹೇಗಿತ್ತೋ?

ಮೊಬೈಲ್ ಮತ್ತು ಸ್ಥಿರ ದೂರವಾಣಿ ಸಂಪರ್ಕಗಳ ಕಡಿತದಿಂದಾಗಿ, ಇಂಟರ್ನೆಟ್ ಸಂಪರ್ಕ ಕಡಿತದಿಂದಾಗಿ ದೂರದ ಊರುಗಳಲ್ಲಿರುವ ತಮ್ಮವರು ಹೇಗಿದ್ದಾರೆ ಎಂದು ತಿಳಿಯಲೂ ಸಾಧ್ಯವಾಗದಂತೆ, ತಮ್ಮ ನೋವು, ಸಂಕಷ್ಟಗಳನ್ನು ತಮ್ಮವರ ಬಳಿ ಹೇಳಿಕೊಳ್ಳಲೂ ಸಾಧ್ಯವಾಗದೆ ಅವರು ಮಾನಸಿಕವಾಗಿ ಅದೆಷ್ಟು ನೊಂದಿದ್ದರೊ? ಕಣಿವೆಯ ಕೆಲವು ಊರುಗಳಲ್ಲಿ ಪ್ರತಿ ಮನೆಯ ಎದುರು ಒಬ್ಬೊಬ್ಬ ಸೈನಿಕರನ್ನು ಕಾವಲಿಗೆ ಬಿಟ್ಟಿದ್ದರು ಎಂಬ ಸುದ್ದಿಯನ್ನು ಸರ್ಕಾರದ ಮೂಲಗಳೇ ತಿಳಿಸಿದ್ದವು. ಈ ರೀತಿಯ ಬಂಧನದಲ್ಲಿ ಬದುಕು ಸಾಗಿಸಿದ ಕುಟುಂಬ ಸದಸ್ಯರ ಅದರಲ್ಲೂ ಮಕ್ಕಳ ಮಾನಸಿಕ ಪರಿಸ್ಥಿತಿ ಹೇಗಿತ್ತೊ? ದಿನನಿತ್ಯ ಔಷಧಿ ಸೇವಿಸಲೇ ಬೇಕಾದ ರೋಗಿಗಳು ಔಷಧಿ ಖರೀದಿಸಲಾಗದೆ, ಚಿಕಿತ್ಸೆಗೆ ವೈದ್ಯರ ಬಳಿ ಹೋಗಲಾಗದೆ ಅದೆಷ್ಟು ಮಂದಿ ನೋವಿನಿಂದ ನರಳಿದರೋ? ಗರ್ಭಿಣಿ, ಬಾಣಂತಿಯರ ಪರಿಸ್ಥಿತಿ ಹೇಗಿತ್ತೋ?

ತಿಂಗಳು ಗಟ್ಟಲೆ ಕಾಲ ಶಾಲಾ, ಕಾಲೇಜುಗಳು ಮುಚ್ಚಿದ್ದ ಕಾರಣಕ್ಕೆ, ಮೊಬೈಲ್ ಸಂಪರ್ಕ, ಟಿವಿ, ಇಂಟರ್ನೆಟ್ ಮೇಲೆ ನಿಷೇಧ ಇದ್ದ ಕಾರಣಕ್ಕೆ, ಗೆಳೆಯರ ಜೊತೆ ಆಟವಾಡಲು ಸಾಧ್ಯವಾಗದ ಕಾರಣಕ್ಕೆ ಅಲ್ಲಿನ ವಿದ್ಯಾರ್ಥಿಗಳ ಮಾನಸಿಕ ಸ್ಥಿತಿ ಹೇಗಿತ್ತೋ? ಅಂದಿನ ಜಮ್ಮು ಕಾಶ್ಮೀರದ ಜನರ ಪರಿಸ್ಥಿತಿಯನ್ನು ಊಹಿಸಿಕೊಂಡರೆ ಇಂದಿಗೂ ಸಂಕಟವಾಗುತ್ತದೆ. ತಮ್ಮ ಹಿತಾಸಕ್ತಿಗಾಗಿ ಕೋಟ್ಯಂತರ ಜನರನ್ನು ಇಂತಹ ಸ್ಥಿತಿಗೆ ತಳ್ಳಿದ ಆಳುವ ವರ್ಗದ ಬಗ್ಗೆ ಜಿಗುಪ್ಸೆ ಹುಟ್ಟುತ್ತದೆ. ತಮ್ಮ ಗುರಿ ಸಾಧನೆಗೆ ಇಂತಹ ಸರ್ವಾಧಿಕಾರ ಮತ್ತು ಕ್ರೂರ ಮಾರ್ಗ ಅನುಸರಿಸಿದ ಹಿಂದುತ್ವವಾದಿಗಳ ಮೇಲೆ ಸಿಟ್ಟು ಬರುತ್ತದೆ.

ಪ್ರಭುತ್ವದ ಇಂತಹ ಕ್ರೂರ ಕ್ರಮವನ್ನು ಭಯೋತ್ಪಾದಕರು ಮತ್ತು ಪ್ರತ್ಯೇಕತಾವಾದಿಗಳು ತಮ್ಮ ಬೆಳವಣಿಗೆಗೆ ಅನುಕೂಲವಾಗುವಂತೆ ನೋಡಿಕೊಳ್ಳುತ್ತಾರೆ ಎಂಬ ಆತಂಕ ಕಾಡುತ್ತಿದೆ. ಜನತೆಯ ವಿಶ್ವಾಸ ಗಳಿಸದೆ, ಬಲಾತ್ಕಾರವಾಗಿ, ಸೈನ್ಯದ ಭಯ ಹುಟ್ಟಿಸುವ ಮೂಲಕ ಏನನ್ನಾದರೂ ಸಾಧಿಸಲು ಹೊರಟರೆ ಅದು ಮತ್ತಷ್ಟು ಸಮಸ್ಯೆಗಳಿಗೆ ಕಾರಣವಾಗುತ್ತದೆ ಎಂಬುದನ್ನು ಇವರಿಗೆ ಹೇಳುವವರಾರು?



ಡಾಲರ್ ಪ್ರಾಬಲ್ಯದ ಪರಿಣಾಮಗಳೂ ಮತ್ತು ಅವನತಿಯ ಪ್ರಕ್ರಿಯೆಯೂ...........

ಪುಟ 13 ರಿಂದ

ಕುಗ್ಗಿಸಬೇಕಾಗುತ್ತದೆ. ಈ ಉದ್ದೇಶಕ್ಕಾಗಿ ನಿರುದ್ಯೋಗವನ್ನು ಹೆಚ್ಚಿಸಬೇಕಾಗುತ್ತದೆ. ಕಾರ್ಮಿಕರ ಪ್ರತಿರೋಧವನ್ನು ದುರ್ಬಲಗೊಳಿಸುವ ಮೂಲಕ ಈ ಅಪಮೌಲ್ಯವು ಒಂದು ವೇಳೆ ಫಲಕಾರಿಯಾದರೂ, ಇತರ ಬಂಡವಾಳಶಾಹಿ ದೇಶಗಳಿಂದ ಪ್ರತೀಕಾರವನ್ನು ಪ್ರಚೋದಿಸುತ್ತದೆ, ಏಕೆಂದರೆ, ತನ್ನ ಚಾಲ್ತಿ ಖಾತೆ ಕೊರತೆಯನ್ನು ಕಡಿಮೆ ಮಾಡಿಕೊಳುವ ಸಲುವಾಗಿ, ಅವರಿಗೆ ನಷ್ಟವನ್ನುಂಟುಮಾಡುವ ಮೂಲಕವೇ ಯುಎಸ್ ತನ್ನ ಮಾರಾಟವನ್ನು ವಿಸ್ತರಿಸಿಕೊಳ್ಳಬೇಕಾಗುತ್ತದೆ.

ಹಾಗಾಗಿ, ಡಾಲರ್ ಒಂದು ವೇಳೆ ಮೀಸಲು ಕರೆನ್ಸಿಯಾಗಿರದಿದ್ದರೆ, ಅಮೆರಿಕವು ಬಂಡವಾಳಶಾಹಿ ಜಗತ್ತಿನ ನಾಯಕನಾಗಿ ಉಳಿಯುತ್ತಿರಲಿಲ್ಲ. ಅದು ಮುಂದುವರಿದ ಇತರ ಬಂಡವಾಳಶಾಹಿ ದೇಶಗಳೊಂದಿಗೆ "ನನ್ನ-ನೆರೆಯವನು ಹಾಳಾಗಲಿ" (beggar-my-neighbour) ಎನ್ನುವ ರೀತಿಯ ಘರ್ಷಣೆಯಲ್ಲಿ ತೊಡಗಿಕೊಳ್ಳುತ್ತಿತ್ತು ಅಂದರೆ, ಪ್ರತಿಯೊಂದು ದೇಶವೂ ಇತರರಿಂದ ಮಾರುಕಟ್ಟೆಗಳನ್ನು ಕಸಿದುಕೊಳ್ಳುವ ಘರ್ಷಣೆಯಲ್ಲಿ ತೊಡಗಿಕೊಳ್ಳುತ್ತಿದ್ದವು ಮತ್ತು ಅದರಿಂದಾಗಿ ಇಂದಿಗಿಂತಲೂ ಹೆಚ್ಚು ಬಲವಾದ ಕಾರ್ಮಿಕರ ಪ್ರತಿರೋಧವನ್ನು ಎದುರಿಸಬೇಕಾಗುತ್ತಿತ್ತು. ಮತ್ತು, ಕಾರ್ಮಿಕರ ವೇತನ–ಚೌಕಾಸಿ ಶಕ್ತಿಯನ್ನು ಕುಗ್ಗಿಸುವ ಸಲುವಾಗಿ ಅಮೆರಿಕದೊಳಗೆ ನಿರುದ್ಯೋಗವನ್ನು ಒಂದು ವೇಳೆ ಹೆಚ್ಚಿಸಿದ್ದರೆ, ಅದು ಇಡೀ ಬಂಡವಾಳಶಾಹಿ ಜಗತ್ತಿನ ಆರ್ಥಿಕ ಚಟುವಟಿಕೆಗಳನ್ನು ಕೆಳ ಮಟ್ಟಕ್ಕೆ ಇಳಿಸುತ್ತದೆ. ಮುಂದುವರಿದ ಇತರ ಬಂಡವಾಳಶಾಹಿ ದೇಶಗಳು ಈ ರೀತಿಯ ಕೆಳ ಮಟ್ಟದ ಆರ್ಥಿಕ ಚಟುವಟಿಕೆಗಳ ಪರಿಣಾಮವನ್ನು ತಮ್ಮ ತಮ್ಮ ಸರ್ಕಾರದ ಹಸ್ತಕ್ಷೇಪದ ಮೂಲಕ ಎದುರಿಸುವುದು ಸಾಧ್ಯವಿಲ್ಲ. ಏಕೆಂದರೆ, ಜಾಗತೀಕರಣಗೊಂಡ ಹಣಕಾಸು ಬಂಡವಾಳದ ಜಗತ್ತಿನಲ್ಲಿ ಯಾವ ದೇಶದ ಸರ್ಕಾರವೂ ಕ್ರಿಯಾಶೀಲವಾಗಿ ತನ್ನ ಅರ್ಥವ್ಯವಸ್ಥೆಯಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ.

ಸಮಕಾಲೀನ ಸಾಮ್ರಾಜ್ಯಶಾಹಿಗೆ ಬಲ

ಇದೆಲ್ಲವೂ, ಮೀಸಲು ಕರೆನ್ಸಿಯಾಗಿ ಡಾಲರ್ ನಿರ್ವಹಿಸುವ ಪಾತ್ರವು ಯುಎಸ್‌ಗೆ ಮಾತ್ರವಲ್ಲ, ಇಡೀ ಮುಂದುವರಿದ ಬಂಡವಾಳಶಾಹಿ ಜಗತ್ತಿಗೆ ಮತ್ತು ಇಡೀ ವ್ಯವಸ್ಥೆಗೆ ಏಕೆ ಪ್ರಯೋಜನಕಾರಿಯಾಗಿದೆ ಎಂಬುದರ ವಿವರಣೆಯೇ. ಡಾಲರ್, ವ್ಯವಸ್ಥೆಗೆ ಸುಸಂಬದ್ಧತೆಯನ್ನು ನೀಡುತ್ತದೆ ಮತ್ತು ಅದನ್ನು ಸರಾಗವಾಗಿ ಕಾರ್ಯನಿರ್ವಹಿಸುವಂತೆ ಮಾಡುತ್ತದೆ. ಇಡೀ ಸಾಮ್ರಾಜ್ಯಶಾಹಿ ಏರ್ಪಾಟನ್ನು ಡಾಲರ್ ನೋಡಿಕೊಳ್ಳುತ್ತಿದೆ, ಹೇಗೆಂದರೆ, ಬಂಡವಾಳಶಾಹಿ ವ್ಯವಸ್ಥೆಯು ಸಾಮ್ರಾಜ್ಯಶಾಹಿಯ ಮೇಲೆ ನಿಂತಿದೆ.

ಮೀಸಲು ಕರೆನ್ಸಿಯಾಗಿರುವ ಡಾಲರ್, ಸಂಪತ್ತನ್ನು ಇಟ್ಟುಕೊಳ್ಳುವ ಮಾಧ್ಯಮ ಮಾತ್ರವಲ್ಲ, ಚಲಾವಣೆಯ ಮಾಧ್ಯಮವೂ ಹೌದು. ಚಲಾವಣೆಯ ಮಾಧ್ಯಮವಾಗದ ಹೊರತು ಅದು ಸಂಪತ್ತನ್ನು ಇಟ್ಟುಕೊಳ್ಳುವ ಮಾಧ್ಯಮವಾಗುವುದು ಸಾಧ್ಯವಿಲ್ಲ. ದೇಶ ದೇಶಗಳು ಪರಸ್ಪರ ವ್ಯಾಪಾರ ನಡೆಸಲು ಡಾಲರ್‌ಗಳ ಅಗತ್ಯವಿದೆ. ವಿಶ್ವ ಮಾರುಕಟ್ಟೆಯಲ್ಲಿ ಡಾಲರ್ ಮೇಲಿನ ಬೇಡಿಕೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಮೂರನೇ ಜಗತ್ತಿನ ದೇಶಗಳಲ್ಲಿ ಉತ್ಪಾದಿಸಲಾಗುವ ಯಾವುದೇ ಕಚ್ಚಾ ವಸ್ತುವಿನ ಅಥವಾ ಉಷ್ಣವಲಯದ ಕೂಲಿ ಸರಕುಗಳ (ಆಹಾರ, ಹಾಲು, ಹಣ್ಣು, ಇತ್ಯಾದಿ ಅವಶ್ಯಕ ವಸ್ತುಗಳ) ಕೊರತೆ ಇದ್ದ ಸಂದರ್ಭದಲ್ಲಿ ಡಾಲರ್ ಬೆಲೆ ಏರಿಕೆಯಾಗುತ್ತದೆ. ಈ ಹಣದುಬ್ಬರದ ವ್ಯಾಪ್ತಿಯು, ಏಕೈಕ ಉತ್ಪನ್ನವಾಗಿರುವ ಅಥವಾ ಏಕೈಕ ಪ್ರಮುಖ ಉತ್ಪನ್ನವಾಗಿರುವ ಅರ್ಥವ್ಯವಸ್ಥೆಯಲ್ಲಿ, ಒಂದು ಶ್ರೇಣಿಯ ಉತ್ಪನ್ನಗಳಿಗೆ ಕೇವಲ ಒಂದು ಕಚ್ಚಾ ವಸ್ತುವಾಗಿರುವ ಅರ್ಥವ್ಯವಸ್ಥೆಗೆ ಹೋಲಿಸಿದರೆ, ಹೆಚ್ಚಿಗೆ ಇರುತ್ತದೆ. ಅಂದರೆ, ಗಣನೀಯ ಮೌಲ್ಯವರ್ಧನೆ ಇರುವ ಮುಂದುವರಿದ ಬಂಡವಾಳಶಾಹಿ ಅರ್ಥವ್ಯವಸ್ಥೆಗಳಿಗೆ ಹೋಲಿಸಿದರೆ ಮೂರನೇ ಜಗತ್ತಿನ ಅರ್ಥವ್ಯವಸ್ಥೆಗಳಲ್ಲಿ ಹಣದುಬ್ಬರವು ಹೆಚ್ಚು ವ್ಯಾಪಕವಾಗಿರುತ್ತದೆ. ಈ ಹೆಚ್ಚಿನ ಮಟ್ಟದ ಹಣದುಬ್ಬರದಿಂದಾಗಿ, ಡಾಲರ್‌ಗೆ ಹೋಲಿಸಿದರೆ, ಮೂರನೇ ಜಗತ್ತಿನ ದೇಶಗಳ ಕರೆನ್ಸಿಗಳು ಅಪಮೌಲ್ಯಗೊಳ್ಳುವ ನಿರೀಕ್ಷೆಯಲ್ಲಿ ಹಣಕಾಸು ಬಂಡವಾಳವು ಅಲ್ಲಿಂದ ಹೊರ ಹರಿಯುತ್ತದೆ. ಬಂಡವಾಳದ ಈ ಹೊರ ಹರಿವು, ಅಪಮೌಲ್ಯವನ್ನು ನಿಜಗೊಳಿಸಬಹುದು ಮತ್ತು ಈ ವಿದ್ಯಮಾನವು ಮುಂದುವರಿಯುತ್ತಲೇ ಹೋಗಬಹುದು. ಈ ರೀತಿಯ ಅಪಮೌಲ್ಯವನ್ನು ನಿಲ್ಲಿಸಲು, "ಮಿತವ್ಯಯ" ಕ್ರಮಗಳನ್ನು ಮೂರನೇ ಜಗತ್ತಿನ ದೇಶಗಳ ಮೇಲೆ ಹೇರಲಾಗುತ್ತದೆ. ಅದರ ಪರಿಣಾಮವಾಗಿ, ಹೆಚ್ಚಿನ ನಿರುದ್ಯೋಗವನ್ನು ಸೃಷ್ಟಿಸಲಾಗುತ್ತದೆ ಮತ್ತು ಆದಾಯವನ್ನು ಕುಗ್ಗಿಸಲಾಗುತ್ತದೆ.

ಕೂಲಿ ಸರಕುಗಳಿಗೆ ಮತ್ತು ಕಚ್ಚಾ ವಸ್ತುಗಳಿಗೆ ಮೆಟ್ರೊಪಾಲಿಟನ್ ದೇಶಗಳಲ್ಲಿ ಹೆಚ್ಚುತ್ತಿರುವ ಬೇಡಿಕೆಯನ್ನು ಅವುಗಳ ಉತ್ಪಾದನೆಯಲ್ಲಿ ಹೆಚ್ಚಳವಿಲ್ಲದಿದ್ದರೂ ಸಹ ಪೂರೈಸಲಾಗುತ್ತದೆ. ಅಂದರೆ, ಮೂರನೇ ಜಗತ್ತಿನ ದೇಶಗಳ ವರಮಾನಗಳನ್ನು ಕುಗ್ಗಿಸುವ ಮೂಲಕ ಆ ದೇಶಗಳಲ್ಲಿ ಈ ವೇತನ ಸರಕುಗಳಿಗೆ ಮತ್ತು ಕಚ್ಚಾ ವಸ್ತುಗಳಿಗೆ ಇರುವ ಬೇಡಿಕೆಯನ್ನು ಕುಗ್ಗಿಸಿ, ಅವುಗಳನ್ನು ಮೆಟ್ರೊಪಾಲಿಟನ್ ದೇಶಗಳಿಗೆ ಪೂರೈಕೆ ಮಾಡಲಾಗುತ್ತದೆ. ಮೂರನೇ ಜಗತ್ತಿನ ದೇಶಗಳು ಡಾಲರ್‌ಗಳನ್ನು ಬಳಸದಿದ್ದರೆ ಮತ್ತು ಅವು ವ್ಯಾಪಾರವನ್ನು ತಮ್ಮ ತಮ್ಮೊಳಗೆ ಹೆಚ್ಚಿಸಿಕೊಂಡಿದ್ದರೆ ಇದು ಸಂಭವಿಸುತ್ತಿರಲಿಲ್ಲ. ಡಾಲರ್ ಹೊಂದಿರುವ ಪ್ರಾಬಲ್ಯವು ಈ ರೀತಿಯಲ್ಲಿ ಸಮಕಾಲೀನ ಸಾಮ್ರಾಜ್ಯಶಾಹಿಗೆ ಬಲ ತುಂಬುತ್ತದೆ.

ಡಾಲರ್ ಹೊಂದಿರುವ ಈ ಪ್ರಾಬಲ್ಯವು ಈಗ ಅಪಾಯದಲ್ಲಿದೆ. ವ್ಯಾಪಾರ ಏರ್ಪಾಟುಗಳು ಈಗ ಸ್ಥಳೀಯ ಕರೆನ್ಸಿಗಳ ಮೂಲಕ ನಡೆಯುತ್ತಿವೆ. ಅಥವಾ, ವರದಿಗಳ ಪ್ರಕಾರ, ಬ್ರಿಕ್ಸ್ ದೇಶಗಳು (ಬ್ರೆಸಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾ) ಪರಿಚಯಿಸಲು ಯೋಜಿಸುತ್ತಿರುವ ಹೊಸ ಕರೆನ್ಸಿಗಳ ಜಾರಿಯ ಮೂಲಕ ವ್ಯಾಪಾರ ಏರ್ಪಾಟುಗಳು ಬಲಗೊಳ್ಳುತ್ತವೆ. ಹಾಗೆ ನೋಡಿದರೆ, ಈ ಬೆಳವಣಿಗೆಯನ್ನು ಮುಂದುವರಿದ ಬಂಡವಾಳಶಾಹಿ ದೇಶಗಳು ವಿಧಿಸಿದ "ನಿರ್ಬಂಧ"ಗಳನ್ನು ಎದುರಿಸುತ್ತಿರುವ ದೇಶಗಳು ಉತ್ತೇಜಿಸುತ್ತಿವೆ. ಇವೆಲ್ಲವೂ ಡಾಲರ್ ಪ್ರಾಬಲ್ಯದ ಕುಸಿತ ಸನ್ನಿಹಿತವಾಗಿದೆ ಎಂಬುದನ್ನು ಸೂಚಿಸುತ್ತವೆ ಎಂದಲ್ಲ. ಆದರೂ, ಕಾಲ ಕ್ರಮದಲ್ಲಿ ಡಾಲರ್ ಅವನತಿಯ ಪ್ರಕ್ರಿಯೆ ಆರಂಭವಾಗುವುದಂತೂ ಖರೇ.



ಪಶ್ಚಿಮ ಬಂಗಾಳದಲ್ಲಿ ಪಂಚಾಯತ್ ಚುನಾವಣೆ ಪ್ರಜಾಪ್ರಭುತ್ವ ಮತ್ತೆ ಉದಯವಾಗುವುದೇ?

ಪಶ್ಚಿಮ ಬಂಗಾಳದಲ್ಲಿ ಜುಲೈ 8 ರಂದು ವಿವಿಧ ಹಂತಗಳ ಪಂಚಾಯತ್ ಚುನಾವಣೆ ನಡೆಯಲಿದೆ. 3317 ಗ್ರಾಮ ಪಂಚಾಯಿತಿಗಳು, 387 ಪಂಚಾಯಿತಿ ಸಮಿತಿಗಳು ಮತ್ತು 20 ಜಿಲ್ಲಾ ಪರಿಷತ್‌ಗಳಲ್ಲಿ ಒಟ್ಟು 73,897 ಪ್ರತಿನಿಧಿಗಳು ಆಯ್ಕೆಯಾಗಬೇಕಿದೆ. ಒಟ್ಟು 5.6 ಕೋಟಿ ಮತದಾರರಿದ್ದಾರೆ.

ತೃಣಮೂಲ ಕಾಂಗ್ರೆಸ್ ಆಡಳಿತದಲ್ಲಿ ಬಂಗಾಳದಲ್ಲಿ ಪ್ರಜಾಪ್ರಭುತ್ವ ಸಾಧ್ಯವಿಲ್ಲ ಎಂಬುದರಲ್ಲಿ ಸಂದೇಹವಿಲ್ಲ. ತೃಣಮೂಲ ಅಧಿಕಾರಕ್ಕೆ ಬಂದ ನಂತರ ಯಾವುದೇ ಚುನಾವಣೆ ಶಾಂತಿಯುತವಾಗಿ ನಡೆದಿಲ್ಲ. ತೃಣಮೂಲದ ಲಕ್ಷಣವೆಂದರೆ ಹಿಂಸೆ, ಕೊಲೆ, ಲೂಟಿ, ಮತ್ತು ಪ್ರಜಾಸತ್ತಾತ್ಮಕ ವಿಧ್ವಂಸಕ. ಮುಂಬರುವ ಪಂಚಾಯಿತಿ ಚುನಾವಣೆಯಲ್ಲೂ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ. ಈ ಬಾರಿಯೂ ವ್ಯಾಪಕ ದಾಳಿ, ವಿರೋಧಿಗಳನ್ನು ಬಗ್ಗು ಬಡಿಯುವುದು, ವಿಧ್ವಂಸಕ ಕೃತ್ಯಗಳು, ವಿವಾದಗಳು, ನ್ಯಾಯಾಲಯದ ಮಧ್ಯಸ್ಥಿಕೆಗಳು ನಡೆಯುತ್ತಿವೆ.

ಮಾಜಿ ಮುಖ್ಯ ಕಾರ್ಯದರ್ಶಿ ರಾಜೀವ್ ಸಿನ್ಹಾ ಅವರು ರಾಜ್ಯ ಚುನಾವಣಾ ಆಯುಕ್ತರಾಗಿ ಅಧಿಕಾರ ವಹಿಸಿಕೊಂಡ ಒಂದು ದಿನದ ನಂತರ ಚುನಾವಣೆಯನ್ನು ಘೋಷಿಸಲಾಯಿತು. ಸರ್ಕಾರದ ಸೂಚನೆಯಂತೆ ಸರ್ವಪಕ್ಷ ಸಭೆ ಕರೆಯದೆ ಯಾರ ಸಲಹೆಯನ್ನೂ ಪಡೆಯದೆ ಏಕಪಕ್ಷೀಯವಾಗಿ ಚುನಾವಣೆ ಘೋಷಣೆ ಮಾಡಲಾಗಿದೆ. 2018 ರ ಚುನಾವಣೆಯಲ್ಲಿ ಭಾರಿ ದಂಗೆ ಕಂಡಿತು. ಹೆಚ್ಚಿನ ಸ್ಥಳಗಳಲ್ಲಿ, ಆಡಳಿತಾರೂಢ ತೃಣಮೂಲವು ಎದುರಾಳಿಗಳಿಗೆ ತಮ್ಮ ಪತ್ರಗಳನ್ನು ಸಲ್ಲಿಸಲು ಸಹ ಅನುಮತಿಸದೆ ಹೆಚ್ಚಿನ ಸ್ಥಾನಗಳನ್ನು ಗೆದ್ದಿದೆ. ಆದರೆ ಈ ಬಾರಿ ಪರಿಸ್ಥಿತಿ ಭಿನ್ನವಾಗಿದೆ. 2018 ರ ಪುನರಾವರ್ತನೆಗೆ ಅವಕಾಶ ನೀಡುವುದಿಲ್ಲ ಎಂದು ಖಚಿತಪಡಿಸಿಕೊಳ್ಳಲು ಸಿಪಿಐ(ಎಂ) ಮತ್ತು ಎಡರಂಗ ಬಹಳ ಹಿಂದೆಯೇ ಮುಂದೆ ಬಂದಿವೆ. ದಾಳಿಯನ್ನು ಎದುರಿಸುವುದಾಗಿ ಮತ್ತು ತೃಣಮೂಲದ ಅತಿರೇಕದ ಭ್ರಷ್ಟಾಚಾರ ಮತ್ತು ಲೂಟಿಯನ್ನು ಕೊನೆಗೊಳಿಸಲು ಹೋರಾಡುವುದಾಗಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮುಹಮ್ಮದ್ ಸಲೀಂ ಘೋಷಿಸಿದರು.

ದಾಳಿಗಳನ್ನು ಎದುರಿಸಿಯೂ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಯಶಸ್ವಿ

ತೃಣಮೂಲ ದಾಳಿಯನ್ನು ಎದುರಿಸಿ, ಎಡರಂಗ ಮತ್ತು ಇತರ ವಿರೋಧ ಪಕ್ಷಗಳು ತಮ್ಮ ಪತ್ರಗಳನ್ನು ಸಲ್ಲಿಸಲು ಸಾಧ್ಯವಾಯಿತು. ನಾಮಪತ್ರ ಹಿಂಪಡೆಯಲು ಕೊನೆಯ ದಿನದ ನಂತರ, ಚುನಾವಣಾ ಆಯೋಗದ ಲೆಕ್ಕಾಚಾರದ ಪ್ರಕಾರ, ಸಿಪಿಐ(ಎಂ) 63,229 ಗ್ರಾಮ ಪಂಚಾಯತ್ ಸ್ಥಾನಗಳಲ್ಲಿ 35,411, 9730 ಪಂಚಾಯತ್ ಸಮಿತಿ ಸ್ಥಾನಗಳಲ್ಲಿ 6752 ಮತ್ತು 928 ಜಿಲ್ಲಾ ಪರಿಷತ್ ಸ್ಥಾನಗಳಲ್ಲಿ 747 ಸ್ಥಾನಗಳನ್ನು ಹೊಂದಿದೆ. ಎಡರಂಗದ ಘಟಕಗಳೂ ಈ ಬಾರಿ ಹೆಚ್ಚು ಸ್ಥಾನಗಳಲ್ಲಿ ತಮ್ಮ ನಾಮಪತ್ರಗಳನ್ನು ಸಲ್ಲಿಸುವಲ್ಲಿ ಯಶಸ್ವಿಯಾಗಿದ್ದಾರೆ. ಎಡರಂಗವು ಎಲ್ಲಾ ಮೂರು ಹಂತಗಳಲ್ಲಿ ಸುಮಾರು 54,000 ಅಭ್ಯರ್ಥಿಗಳನ್ನು ಹೊಂದಿದೆ. ಹಲವು ಸ್ಥಾನಗಳಲ್ಲಿ ಎಡರಂಗ ಇತರ ಪ್ರಜಾಸತ್ತಾತ್ಮಕ ಪಕ್ಷಗಳೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಸ್ವತಂತ್ರ ಅಭ್ಯರ್ಥಿಗಳನ್ನೂ ಬೆಂಬಲಿಸುತ್ತದೆ. ಕಳೆದ ಕೆಲವು ತಿಂಗಳುಗಳಲ್ಲಿ, ತೃಣಮೂಲದ ಭ್ರಷ್ಟಾಚಾರ ಮತ್ತು ಆಕ್ರಮಣಶೀಲತೆಯ ವಿರುದ್ಧ ಜನರನ್ನು ಸಂಘಟಿಸುವ ಮೂಲಕ ಸಿಪಿಐ(ಎಂ) ಆಯೋಜಿಸಿದ ಆಂದೋಲನ ಮತ್ತು ಪ್ರತಿರೋಧವು ಜನರಲ್ಲಿ ನಂಬಿಕೆಯನ್ನು ಮೂಡಿಸಿದೆ.

ವ್ಯಾಪಕ ದಾಳಿ

ಚುನಾವಣೆ ಘೋಷಣೆಯಾದ ದಿನದಿಂದಲೇ ತೃಣಮೂಲ ವ್ಯಾಪಕ ದಾಳಿ ನಡೆಸಿತು. ಇದು ಇನ್ನೂ ಮುಂದುವರಿದಿದೆ. ಈಗಾಗಲೇ ಒಂಬತ್ತು ಮಂದಿ ಸಾವನ್ನಪ್ಪಿದ್ದಾರೆ. ನೂರಾರು ಜನರು ಗಾಯಗೊಂಡರು. ಹತ್ಯೆಯಾದವರಲ್ಲಿ ಮೂವರು ಸಿಪಿಐ(ಎಂ) ಕಾರ್ಯಕರ್ತರು. ಹಲವೆಡೆ ಸಿಪಿಐ(ಎಂ) ಕಚೇರಿಗಳ ಮೇಲೆ ದಾಳಿ ನಡೆಸಲಾಗಿದ್ದು, ಮುಖಂಡರು ಹಾಗೂ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಲಾಗಿದೆ. ತೃಣಮೂಲ ಹಲವು ಕಡೆ ಬಿಡಿಒ ಕಚೇರಿಗಳನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡಿತು. ದಾಳಿ ವರದಿ ಮಾಡಿದ ಪತ್ರಕರ್ತರನ್ನೂ ಥಳಿಸಲಾಗಿದೆ. ಸಿಪಿಐ(ಎಂ) ನೇತೃತ್ವದಲ್ಲಿ ಬಿಡಿಒ ಕಚೇರಿಗೆ ನಡೆದ ಮೆರವಣಿಗೆಯಲ್ಲಿ ತೃಣಮೂಲ ಕಾರ್ಯಕರ್ತರು ಬಾಂಬ್‌ಗಳನ್ನು ಎಸೆದರು ಮತ್ತು ಗುಂಡು ಹಾರಿಸಿದರು, ಉತ್ತರ ದಿನಜ್‌ಪುರ ಜಿಲ್ಲೆಯ ಚೋಪ್ರಾದಲ್ಲಿ ಅಭ್ಯರ್ಥಿಗಳು ನಾಮಪತ್ರಗಳನ್ನು ಸಲ್ಲಿಸಲು ಮುಂದಾದರು. ಈ ದಾಳಿಯಲ್ಲಿ ಪಕ್ಷದ ಇಬ್ಬರು ಕಾರ್ಯಕರ್ತರು ಸಾವನ್ನಪ್ಪಿದ್ದರು. ಅಭ್ಯರ್ಥಿಗಳು ಸೇರಿ 20 ಮಂದಿ ಗಾಯಗೊಂಡಿದ್ದಾರೆ. ದಕ್ಷಿಣ 24 ಪರಗಣ ಜಿಲ್ಲೆಯ ಭಾಂಗ್‌ನಲ್ಲಿ ಐಎಸ್‌ಎಫ್–ತೃಣಮೂಲ ಎನ್‌ಕೌಂಟರ್‌ನಲ್ಲಿ ಮೂವರು ಸಾವನ್ನಪ್ಪಿದ್ದಾರೆ. ಮುರ್ಷಿದಾಬಾದ್‌ನಲ್ಲಿ ಕಾಂಗ್ರೆಸ್ ಕಾರ್ಯಕರ್ತನನ್ನು ಹತ್ಯೆ ಮಾಡಲಾಗಿದೆ.

ತೃಣಮೂಲ ಉಗ್ರರು ಅಭ್ಯರ್ಥಿಗಳ ಮನೆಗಳಿಗೆ ನುಗ್ಗಿ ಬೆದರಿಕೆ ಹಾಕುತ್ತಿದ್ದಾರೆ. ದಾಳಿ ಮತ್ತು ಭದ್ರತಾ ಲೋಪವನ್ನು ಪ್ರತಿಭಟಿಸಿ ಎಡಪಕ್ಷಗಳು ರಾಜ್ಯ ಚುನಾವಣಾ ಆಯೋಗದ ಕಚೇರಿ ಎದುರು ಬೃಹತ್ ಪ್ರತಿಭಟನಾ ರ‍್ಯಾಲಿಯನ್ನು ಆಯೋಜಿಸಿದ್ದವು. ಸಿಪಿಐ(ಎಂ) ಎಡರಂಗದ ನೇತೃತ್ವದಲ್ಲಿ ರಾಜ್ಯಾದ್ಯಂತ ಪ್ರತಿಭಟನೆಗಳನ್ನು ನಡೆಸಲಾಯಿತು.

ತೃಣಮೂಲ ಗುಂಪುಗಳ ನಡುವೆ ಜಗಳ

ಏತನ್ಮಧ್ಯೆ, ತೃಣಮೂಲದಲ್ಲಿ ಉಮೇದುವಾರಿಕೆ ಕುರಿತು ಗುಂಪುಗಳ ನಡುವೆ ಜಗಳ ನಡೆಯುತ್ತಿದೆ. ಈ ಬಾರಿ ಮಮತಾ ಅವರ ಸೋದರಳಿಯ ಅಭಿಷೇಕ್ ಬ್ಯಾನರ್ಜಿ ಅಭ್ಯರ್ಥಿಯನ್ನು ಆಯ್ಕೆಮಾಡಿದ್ದಾರೆ. ಇದು ಜಿಲ್ಲೆಯ ಸ್ಥಳೀಯ ಮುಖಂಡರನ್ನು ಕೆರಳಿಸಿದೆ. ಸೀಟು ವಂಚಿತರಾದವರು ಸ್ವತಂತ್ರ ಅಭ್ಯರ್ಥಿಗಳಾಗಿದ್ದಾರೆ. ಹಲವರು ಬಿಜೆಪಿಯಲ್ಲಿ ಆಶ್ರಯ ಪಡೆದಿದ್ದಾರೆ. ತೃಣಮೂಲ ಗುಂಪಿನ ಸಮರವೂ ಜೋರಾಗಿದೆ. ಕೇಂದ್ರ ಪಡೆಗಳನ್ನು ನಿಯೋಜಿಸಬೇಕು ಮತ್ತು ಎಲ್ಲಾ ಬೂತ್‌ಗಳಲ್ಲಿ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಬೇಕು ಎಂದು ಕಲ್ಕತ್ತಾ ಹೈಕೋರ್ಟ್ ನಿರ್ದೇಶಿಸಿದೆ. ರಾಜ್ಯಪಾಲ ಸಿ.ವಿ.ಆನಂದ ಬೋಸ್ ದಾಳಿಕೋರರ ವಿರುದ್ಧ ಕ್ರಮಕೈಗೊಳ್ಳುವಂತೆ ಆಗ್ರಹಿಸಿದರು. ರಾಜ್ಯಪಾಲರು ಚುನಾವಣಾ ಆಯೋಗವನ್ನು ರಾಜಭವನಕ್ಕೆ ಕರೆಸಿ ವರದಿ ಕೇಳಿದ್ದು, ಆಯೋಗದ ಕಾರ್ಯಚಟುವಟಿಕೆಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ದೂರು ದಾಖಲಿಸಲು ರಾಜಭವನದಲ್ಲಿ ವಿಶೇಷ ಸೆಲ್ ತೆರೆಯಲಾಗಿದೆ.

ತೃಣಮೂಲ ಮತ್ತು ಬಿಜೆಪಿಯನ್ನು ಸೋಲಿಸುವುದು, ದಾಳಿ ಮತ್ತು ಲೂಟಿಯನ್ನು ಕೊನೆಗೊಳಿಸುವ ಮೂಲಕ ಜನಪ್ರಿಯ ಪಂಚಾಯತ್‌ಗಳನ್ನು ರಚಿಸುವುದು, ಜನರಿಗೆ ಅಧಿಕಾರವನ್ನು ತರುವುದು, ಪಂಚಾಯತಿಗಳನ್ನು ಭ್ರಷ್ಟಾಚಾರ ಮುಕ್ತಗೊಳಿಸುವುದು, ಸ್ವಾಯತ್ತತೆ ಕಾಪಾಡುವುದು ಮತ್ತು ಜನಾಧಿಕಾರವನ್ನು ಉಳಿಸಿಕೊಳ್ಳುವ ಬೇಡಿಕೆಗಳೊಂದಿಗೆ ಎಡರಂಗವು ಚುನಾವಣೆಯನ್ನು ಎದುರಿಸುತ್ತಿದೆ. ಎಡರಂಗ ಪ್ರಚಾರದಲ್ಲಿ ಉತ್ತಮ ಸಾರ್ವಜನಿಕ ಸಹಭಾಗಿತ್ವ ಗೋಚರಿಸುತ್ತಿದೆ.

ಉತ್ತರ ಕನ್ನಡದಲ್ಲಿ ಬಿಜೆಪಿಗೆ ಹೀನಾಯ ಸೋಲು...... ಪುಟ 5 ರಿಂದ

ಚೈತ್ರ ಕೊಠಾರ್ಕರ್ 2918 ಮತಗಳನ್ನು ಪಡೆದು ಜಿಲ್ಲೆಯಲ್ಲಿ 5 ಕ್ಷೇತ್ರದಲ್ಲಿ ಮೂರನೇ ಸ್ಥಾನದಲ್ಲಿದೆ.

ಮತ ಸೆಳೆಯುವ ಪ್ರಚಾರದ ಬಗ್ಗೆ:

ಬಿಜೆಪಿ ಪ್ರಚಾರಕ್ಕೆ ಪ್ರಧಾನಿ ನರೇಂದ್ರ ಮೋದಿ, ಯೋಗಿ ಆದಿತ್ಯ ನಾಥ ಒಳಗೊಂಡು ಬಂದುಹೋಗಿದ್ದಾರೆ. ಚುನಾವಣೆಯ ನೋಮಿನೇಶನ್‌ಗೂ ಬಂದಿದ್ದಾರೆ. ಗೋವಾ, ಉತ್ತರ ಪ್ರದೇಶ್, ಮಹಾರಾಷ್ಟ್ರ, ಮಧ್ಯಪ್ರದೇಶ್ ದ ಹಾಲಿ ಸುಮಾರು 18 ಮಂತ್ರಿಗಳು, ಶಾಸಕರು, ಸಂಸದರು ಮಾಜಿಗಳು ಠಿಕಾಣಿ ಹೂಡಿದ್ದರು ಮತ್ತು ಆರ್.ಎಸ್.ಎಸ್ ನ ಮುಖಂಡರು ಪ್ರತಿ ಗ್ರಾಮ ಪಂಚಾಯತ್ ಮೇಲುಸುವಾರಿ ಮಾಡಿದ್ದಾರೆ.

ಕಾಂಗ್ರೆಸ್ ನಿಂದ ಪ್ರಚಾರಕ್ಕೆ ಪ್ರಿಯಾಂಕಾ ಗಾಂಧಿ, ಸಿದ್ದರಾಮಯ್ಯ ಇತರರು ಬಂದಿದ್ದಾರೆ. ಚುನಾವಣೆಯ ಪೂರ್ವ ಕಾಂಗ್ರೆಸ್ ಅದ್ಯಕ್ಷ ಡಿ.ಕೆ. ಶಿವಕುಮಾರ್ ಬಂದುಹೋಗಿದ್ದಾರೆ. ಗೋವಾ, ಝಾರ್ಖಂಡ್, ಮಹಾರಾಷ್ಟ್ರ ಕಾಂಗ್ರೆಸ್ ನಾಯಕರು ಬಂದು ಹೋಗಿದ್ದಾರೆ. ಜೆಡಿಎಸ್ ನ ಕುಮಾರ ಸ್ವಾಮಿ ಹಳಿಯಾಳ, ಜೋಯಿಡಾ, ಕುಮಟಾ ಹೊನ್ನಾವರಕ್ಕೆ ಬಂದಿದ್ದಾರೆ. ಆದರೆ ಬಿಜೆಪಿಯಷ್ಟು ಯೋಜಿತ ಪ್ರಚಾರ ಬೇರೆಯವರಿಂದ ಆಗಿಲ್ಲ ಅನಿಸುತ್ತದೆ.

ಗೆಲುವಿಗೆ ಅಥವಾ ಸೋಲಿಗೆ ಏನೆಲ್ಲ ಕಾರಣವಾಗಿರಬಹುದು?

ಬಿಜೆಪಿಗೆ ಎಲ್ಲವೂ ಇತ್ತು ಇಲ್ಲಿ ನೋಡಿ. ಹಾಲಿ ಚುನಾಯಿತ ಸ್ಥಾನಗಳಲ್ಲಿ ಬಲಾಬಲ ಬಿಜೆಪಿಯದೇ ಇತ್ತು. ಹೇಗೆಂದರೆ, ಸಂಸದರು ಬಿಜೆಪಿ. ಅನಂತಕುಮಾರ್ ಹೆಗಡೆ, ಶಿಕ್ಷಕ ಮತದಾರ ಕ್ಷೇತ್ರ ಬಸವರಾಜ್ ಹೊರಟ್ಟಿ, ಹುಬ್ಬಳ್ಳಿ, ಸ್ಥಳೀಯ ಸಂಸ್ಥೆ ಚುನಾಯಿತ ಪ್ರತಿನಿಧಿಗಳಿಂದ ಗಣಪತಿ ಉಳ್ವೇಕರ್ ಕಾರವಾರ, (ಉಕ ವ್ಯಾಪ್ತಿ) ಪಶ್ಚಿಮ ಪದವಿಧರ ಮತದಾರ ಕ್ಷೇತ್ರ ವಿ.ಎಸ್. ಸಂಕನೂರು, (ಗದಗ, ಧಾರವಾಡ, ಹಾವೇರಿ, ಉಕ) ನಾಮನಿರ್ದೇಶಿತ ಎಂಎಲ್ ಸಿ ಶಾಂತಾರಾಮ ಸಿದ್ದಿ, ಯಲ್ಲಾಪುರ ಹೀಗೆ ಎಲ್ಲರೂ ಬಿಜೆಪಿಯವರೇ ಆಗಿದ್ದಾರೆ.

ಜಾತಿ ಆಧಾರಿತವಾಗಿ ನೋಡಿದಾಗ, ನಾಮದಾರಿ, ಮೀನುಗಾರ, ಹವ್ಯಕ, ಶೆಟ್ಟಿ, ಕೋಮಾರಪಂತ್ ಕೊಂಕಣ ಮರಾಠಾ ಲಿಂಗಾಯತ, ಬುಡಕಟ್ಟು ಹೀಗೆ ಬಿಜೆಪಿಯ ಪ್ರತಿನಿಧಿಗಳ ಹಿನ್ನೆಲೆ ಇತ್ತು ಮತ್ತು ಬಹುತೇಕ ಸಹಕಾರಿ ಸಂಘಗಳಲ್ಲಿ ಕಾಂಗ್ರೆಸ್ ಬಿಜೆಪಿ ಸಮಾನ ಗೆಲುವಿದೆ. ಆದರೆ ಜಿಲ್ಲಾ ಮಟ್ಟದಲ್ಲಿ ಈ ಬಾರಿ ಬಿಜೆಪಿ ಮುಂದಿದೆ.

ರಾಜ್ಯದಲ್ಲೇ ಮೂರನೇ ಅತಿದೊಡ್ಡ ಜಿಲ್ಲಾ ಪಂಚಾಯತ್ ಉತ್ತರ ಕನ್ನಡ ಜಿಲ್ಲಾ ಪಂಚಾಯತ್ ಗೆ 39 ಸ್ಥಾನದಲ್ಲಿ ಕಾಂಗ್ರೆಸ್ ಬಿಜೆಪಿ ಬಹುತೇಕ ಸಮಾನ ಗೆಲುವಿತ್ತು. (ಈಗ 54 ಜಿಪಂ ಕ್ಷೇತ್ರಗಳಾಗಿವೆ.) ತಾ.ಪಂ, ಪಟ್ಟಣ ಪಂಚಾಯತ್ ನಗರ ಸಭೆ ಕೂಡ ಬಿಜೆಪಿ ಕೆಲವೆಡೆ ಜಾಸ್ತಿ ಇದೆ. ಗ್ರಾಮ ಪಂಚಾಯತ್ ಪಕ್ಷ ಚಿನ್ಹೆ ಇಲ್ಲದಿದ್ದರೂ ಕಾಂಗ್ರೆಸ್ ಬಿಜೆಪಿ ಬಹುತೇಕ ಸರಿಸಮಾನವಾಗಿ ಇವೆ.

ಉಕ ದಲ್ಲಿ ಪ್ರಧಾನಿ ಮೋದಿ, ಅಮಿತ್ ಶಾ, ಯೋಗಿ ಮುಂತಾದವರ ಭಾಷಣ, ವರ್ಚಸ್ಸು ಬಿಜೆಪಿಯನ್ನು ಗೆಲುವಿಗೆ ಒಯ್ಯಲು ಸಹಾಯವಾಗಿಲ್ಲ, ಆದರೆ ಮತಗಳು ಹೆಚ್ಚು ಬಂದವು ಎಂಬುದು ನಿಜ.

ಇಷ್ಟೆಲ್ಲ ಇದ್ದ ಬಿಜೆಪಿ ಸೋಲಿಗೆ ಕಾರಣವೇನು ಎಂದು ನೋಡಿದಾಗ ಕಾಂಗ್ರೆಸ್ ನೀಡಿದ ಭರವಸೆಗಳು, ಉಚಿತಗಳೇ ಅದರ ಗೆಲುವಿಗೆ ಕಾರಣವೇ ಎಂದು ಪ್ರಶ್ನಿಸಿಕೊಂಡರೆ ಅದೂ ಸಂಪೂರ್ಣ ಕಾರಣವಲ್ಲ. ಜನ ಬಿಜೆಪಿಯಿಂದ ರೋಸಿ ಹೋಗಿದ್ದರು. ಬೇರೆ ಪರ್ಯಾಯವಿರಲಿಲ್ಲ. ಜೊತೆಗೆ ಬಡ ಜನತೆಯು ಕಾಂಗ್ರೆಸ್ ನೀಡಿದ ಗ್ಯಾರಂಟಿ ಕಾರ್ಡನ್ನೂ ನಂಬಿದರು. ಬಿಜೆಪಿಯ ಹಾಲಿ ಶಾಸಕರುಗಳ ವರ್ತನೆ, ದುರಾಡಳಿತದಿಂದ ಬೇಸತ್ತಿದ್ದರು.

ಕೋಮುಕೆಂಡದ ಉಂಡೆ ಬಿಜೆಪಿ ಸಂಸದ ಅನಂತನ ಅವಾಂತರ

ಜಿಲ್ಲೆಯ ಸಂಸದ ಅನಂತ ಕುಮಾರ್ ಹೆಗಡೆ ಪ್ರಚಾರಕ್ಕೆ ಎಲ್ಲಿಯೂ ಬಂದಿಲ್ಲ. ವಿಕಾರವಾದ ಹೇಳಿಕೆಗಳನ್ನು ಆಗಾಗ ಕೊಡುತ್ತಲೇ ಇದ್ದದ್ದು ಎಂಬುದನ್ನು ಜಿಲ್ಲೆಯ ಪ್ರಜ್ಞಾವಂತರು ಗಮನಿಸಿದ್ದಾರೆ. ಆ ಹೇಳಿಕೆಗಳು ಬಿಜೆಪಿಗೇ ಮುಳುವಾಯಿತು ಎಂಬುದು ಸತ್ಯ.

ಹಿನ್ನೆಲೆಗೆ ಸರಿದ ಜಿಲ್ಲೆಯ ಅಭಿವೃದ್ಧಿ ಪ್ರಶ್ನೆ. ವ್ಯಾಪಕವಾಗಿ ಹಂಚಿಕೆಯಾದ ಹಣ ಮತ್ತು ವಸ್ತುಗಳು. ಜಿಲ್ಲೆಯ ಅಭಿವೃದ್ಧಿಯ ಪ್ರಶ್ನೆಯಾಗಲಿ, ನಿರುದ್ಯೋಗ ಹೋಗಲಾಡಿಸುವುದಾಗಲೀ ಹೆಚ್ಚು ಚರ್ಚೆ ಆಗದೇ ಇರುವುದು, ಕೋಟ್ಯಾಂತರ ರೂಪಾಯಿ ಹಂಚಿಕೆ ಆಗಿರುವುದು, ಚೆಕ್ ಪೋಸ್ಟ್ ಗಳಲ್ಲಿ ಹಿಡಿದಿರುವುದು ನಿಚ್ಚಳ ನಿದರ್ಶನ.

ಚುನಾವಣೆಯಲ್ಲಿ ದುಡಿಯುವ ವರ್ಗದ ಕರ್ತವ್ಯ: ಬಿಜೆಪಿಯನ್ನು ಸೋಲಿಸುವ ನಿಟ್ಟಿನಲ್ಲಿ ದುಡಿಯುವ ವರ್ಗದ ಪಕ್ಷವಾದ ಸಿಪಿಐ(ಎಂ) ಮತ್ತು ಸಾಮೂಹಿಕ ಮತ್ತು ವರ್ಗ ಸಂಘಟನೆಗಳು ಗಣನೀಯವಾದ ರೀತಿಯಲ್ಲಿ ಕೆಲಸ ಮಾಡಿದವು. ಜಿಲ್ಲೆಯಲ್ಲಿ ತನ್ನದೇ ಆದ ರೀತಿಯಲ್ಲಿ ಪ್ರಚಾರವನ್ನು ನಡೆಸಲಾಗಿತ್ತು. ಕೆಲವು ಪ್ರದೇಶ ನಿರ್ದಿಷ್ಟವಾಗಿಟ್ಟುಕೊಂಡು ರೈತಾಪಿ ಕೂಲಿಕಾರರ ಮಧ್ಯೆ ಮತ್ತು ಕಾರ್ಮಿಕರು, ಮಹಿಳೆಯರು ಯುವಜನರ ಮಧ್ಯೆ ಸಾಧ್ಯವಿದ್ದಷ್ಟು ಜಾಗ್ರತಿ ಮೂಡಿಸುವ ಕೆಲಸ ಮಾಡಲಾಗಿತ್ತು. ಕೋಮುವಾದಕ್ಕೆ ವಿರುದ್ಧವಾಗಿ ಜಾತ್ಯಾತೀತ ಶಕ್ತಿಗಳನ್ನು ಗೆಲ್ಲಿಸುವ ನಿಟ್ಟಿನಲ್ಲಿ ದುಡಿಯುವ ವರ್ಗ ತಮ್ಮ ಜವಾಬ್ದಾರಿಯನ್ನು ಗಣನೀಯವಾಗಿ ಚಲಾಯಿಸಿದ್ದಾರೆ.

ಚುನಾವಣೆಯ ಫಲಿತಾಂಶದಲ್ಲಿ ಬಿಜೆಪಿಯನ್ನು ಸೋಲಿಸಲಾಗಿದ್ದರೂ ಕೋಮುವಾದವನ್ನು ಕಿತ್ತೆಸೆಯುವ ಗಂಭೀರ ಜವಾಬ್ದಾರಿ ಹಾಗೇ ಇದೆ. ಜೊತೆಗೆ ಕಾಂಗ್ರೆಸ್ ನ ನೀತಿಗಳು ಜನತೆಗೆ ಮಾರಕವಾದಾಗ ಅದರ ವಿರುದ್ಧ ಸಿಡಿದೇಳುವ ಜನರನ್ನು ಸಂಘಟಿಸುವ ಕರ್ತವ್ಯ ದುಡಿಯುವ ವರ್ಗಕ್ಕೆ ಇದ್ದೇಇದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE JULY 3-9, 2023 Price: Rs. 10/- Date of Publication: 30 JUNE 2023 RNI No. KARKAN /2006/17926 Posted on 03-07-2023
Posted at BG PSO, BG - 560026 **Posted at Periodical Rate -** Rs. 2

ಫ್ರಾನ್ಸ್ ನಲ್ಲಿ ಪೊಲೀಸ್ ಹಿಂಸಾಚಾರ ವಿರೋಧಿಸಿ ವ್ಯಾಪಕ ದಂಗೆ



ಪ್ಯಾರೀಸ್ ಜುಲೈ 1: ಪೊಲೀಸ್ ಅಧಿಕಾರಿಯಿಂದ ಹತ್ಯೆಗೀಡಾದ ಫ್ರೆಂಚ್-ಅಲ್ಜೀರಿಯನ್ ಹದಿಹರೆಯದ ನಹೆಲ್ ಗೆ ನ್ಯಾಯಕ್ಕಾಗಿ ಫ್ರಾನ್ಸ್‌ನಾದ್ಯಂತ 4 ದಿನಗಳಿಂದ ಸತತವಾಗಿ ಹಗಲು-ರಾತ್ರಿ ಪ್ರತಿಭಟನೆಗಳು ಮುಂದುವರೆದಿವೆ. ಈ ಪ್ರತಿಭಟನೆಗಳನ್ನು ತಡೆಯಲು ಫ್ರಾನ್ಸ್‌ನ ಪ್ರಮುಖ ನಗರಗಳಲ್ಲಿ 40,000 ಕ್ಕೂ ಹೆಚ್ಚು ಭದ್ರತಾ ಸಿಬ್ಬಂದಿಯನ್ನು ನಿಯೋಜಿಸುವಷ್ಟು ಮತ್ತು ಫ್ರೆಂಚ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಯುರೋ ಕೂಟದ ಶೃಂಗಸಭೆಯಿಂದ ಬೇಗನೆ ಫ್ರಾನ್ಸ್‌ಗೆ ಹಿಂತಿರುಗಬೇಕಾದಷ್ಟು ಪರಿಸ್ಥಿತಿ ಗಂಭೀರವಾಗಿದೆ. ಭಾರೀ ಪ್ರತಿಭಟನೆಗಳ ನಂತರ ನಹೆಲ್ ಗೆ ಗುಂಡು ಹಾರಿಸಿದ ಅಧಿಕಾರಿಯನ್ನು "ಅಧಿಕಾರದಲ್ಲಿರುವ ವ್ಯಕ್ತಿಯಿಂದ ಸ್ವಯಂಪ್ರೇರಿತ ನರಹತ್ಯೆ" ಆರೋಪಕ್ಕಾಗಿ ಬಂಧಿಸಲಾಗಿದೆ.

ಜಗದ ಸುತ್ತ

ವಸಂತರಾಜ ಎನ್.ಕೆ.

ಜೂನ್ 27 ರ ಮಂಗಳವಾರ ಬೆಳಿಗ್ಗೆ ಪ್ಯಾರಿಸ್ ಉಪನಗರವಾದ ನಾಂಟೆರ್ರೆಯಲ್ಲಿ ಪೋಲೀಸರ ಗುಂಡಿಗೆ ಬಲಿಯಾದ 17 ವರ್ಷದ ಫ್ರೆಂಚ್ ಅಲ್ಜೀರಿಯನ್ ನೇಲ್ ಎಂ ಹತ್ಯೆಯನ್ನು ಖಂಡಿಸಿ ಫ್ರಾನ್ಸ್‌ನಲ್ಲಿ ಬೃಹತ್ ಪ್ರತಿಭಟನೆಗಳು ಮುಂದುವರೆದಿದೆ. ಜೂನ್ 29 ರಂದು ನಹೆಲ್ ಅವರ ನೆನಪಿಗಾಗಿ ಭಾರೀ ಮೆರವಣಿಗೆ ತೆಗೆಯಲಾಯಿತು. ಅವರ ತಾಯಿ ಸಹ ಅದರಲ್ಲಿ ಭಾಗವಹಿಸಿದ್ದರು.

ಪ್ಯಾರಿಸ್, ಮಾರ್ಸೆಲೆ, ಲಿಯಾನ್ ಮತ್ತು ಲಿಲ್ಲೆ ಸೇರಿದಂತೆ ಹಲವಾರು ಸ್ಥಳಗಳಲ್ಲಿ ಪ್ರತಿಭಟನೆಗಳು ಹಿಂಸಾತ್ಮಕವಾದವು. ವರದಿಗಳ ಪ್ರಕಾರ, ಪ್ರತಿಭಟನೆಗಳನ್ನು ನಿಗ್ರಹಿಸಲು ಫ್ರಾನ್ಸ್‌ನ ವಿವಿಧ ನಗರಗಳಲ್ಲಿ 40,000 ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಶನಿವಾರ (ಜುಲೈ 1) ನಹೆಲ್ ಶವಸಂಸ್ಕಾರ ನಡೆಯಲಿದ್ದು ಇನ್ನಷ್ಟು ಹೆಚ್ಚಿನ ಹಿಂಸಾಚಾರ ನಡೆಯಬಹುದು ಎಂದು ಭಾವಿಸಿ, ಶುಕ್ರವಾರ (ಜೂನ್ 30) ರಾತ್ರಿ ವೇಳೆಗೆ ಸುಮಾರು 1100ಕ್ಕೂ ಹೆಚ್ಚು ಪ್ರತಿಭಟನಾಕಾರರನ್ನು ಬಂಧಿಸಲಾಗಿದೆ. ಎಂದು ಆಂತರಿಕ ಸಚಿವ ಗೆರಾಲ್ಡ್ ಡಾರ್ಮಾನಿನ್ ಹೇಳಿದ್ದಾರೆ. ತುರ್ತು ಪರಿಸ್ಥಿತಿ ಹೇರುವುದೂ ಅಗತ್ಯವಾಗಬಹುದೆಂದೂ ಹೇಳಲಾಗಿದೆ.

ಮಂಗಳವಾರ (ಜೂನ್ 27) ಬೆಳಗ್ಗೆ, ಡೆಲಿವರಿ ಚಾಲಕ ನಹೆಲ್ ಎಂ, ಬಾಡಿಗೆ ಕಾರಿನಲ್ಲಿ ಹೋಗುತ್ತಿದ್ದಾಗ ಟ್ರಾಫಿಕ್ ಸ್ಟಾಪ್‌ನಲ್ಲಿ ಪೊಲೀಸರು ಗುಂಡು ಹಾರಿಸಿ ಕೊಂದರು. ಪೋಲಿಸ್ ಅಧಿಕಾರಿಗಳು ಕಾರು ನಿಲ್ಲಿಸಲು ಹೇಳಿದಾಗ ಕಾರು ನಿಲ್ಲಿಸದೆ, ನಹೆಲ್ ಅವರ ಮೇಲೆ ಕಾರು ಹತ್ತಿಸುವ ಬೆದರಿಕೆ ಹಾಕಿದ್ದ ಎಂದು ಪೊಲೀಸರು ಆರಂಭದಲ್ಲಿ ವರದಿ ಮಾಡಿದ್ದರು. ಆದರೆ ಸಾಮಾಜಿಕ ಮಾಧ್ಯಮದಲ್ಲಿ ಪ್ರಸಾರವಾದ ವೀಡಿಯೊವು ಈ ಹೇಳಿಕೆಗೆ ವಿರುದ್ಧವಾಗಿದೆ, ಅವರ ಕಾರನ್ನು ನಿಲ್ಲಿಸಿದ ಇಬ್ಬರು ಅಧಿಕಾರಿಗಳಲ್ಲಿ ಒಬ್ಬರು ನಹೆಲ್ ತಲೆಗೆ ಗುರಿಯಿಟ್ಟು ಗುಂಡು ಹಾರಿಸಿದ್ದಾರೆ ಎಂದು ತೋರಿಸುತ್ತದೆ.

ಇದೊಂದು ಕಾನೂನುಬಾಹಿರ ವರ್ಣದ್ವೇಷದ ಹತ್ಯೆ ಎಂದು ಖಂಡಿಸಿ ಫ್ರಾನ್ಸ್‌ನಾದ್ಯಂತ ಸ್ವಯಂಪ್ರೇರಿತ ಪ್ರತಿಭಟನೆಗಳು ಪ್ರಾರಂಭವಾದವು. ಪ್ರತಿಭಟನೆಗಳ ತೀವ್ರತೆಯಿಂದಾಗಿ ಶುಕ್ರವಾರ (ಜೂನ್ 29) ಬ್ರಸೆಲ್ಸ್‌ನಲ್ಲಿ ನಡೆದ ಯುರೋ ಕೂಟ ಶೃಂಗಸಭೆಯಲ್ಲಿದ್ದ ಫ್ರೆಂಚ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಫ್ರಾನ್ಸ್‌ಗೆ ಹಿಂತಿರುಗಬೇಕಾಯಿತು. ನಹೆಲ್ ಗೆ ಗುಂಡು ಹಾರಿಸಿದ ಅಧಿಕಾರಿಯನ್ನು "ಅಧಿಕಾರದಲ್ಲಿರುವ ವ್ಯಕ್ತಿಯಿಂದ ಸ್ವಯಂಪ್ರೇರಿತ ನರಹತ್ಯೆ" ಆರೋಪಕ್ಕಾಗಿ ಬಂಧಿಸಲಾಗಿದೆ.

ಎಡಪಂಥೀಯ ಗುಂಪುಗಳು ನಹೆಲ್ ಗೆ ನ್ಯಾಯವನ್ನು ಒತ್ತಾಯಿಸುವ ಪ್ರತಿಭಟನೆಯಲ್ಲಿ ಭಾಗವಹಿಸಿದವು. ಆದರೆ ಪ್ರತಿಭಟನೆಯ ದಮನವನ್ನು ಸಮರ್ಥಿಸಿಕೊಳ್ಳಲು ಪ್ರಭುತ್ವ ಅಪಪ್ರಚಾರ ಮಾಡಿ ಗಮನ ಬೇರೆಡೆ ತಿರುಗಿಸಲು ಆಸ್ಪದ ಕೊಡದಂತೆ ಹಿಂಸಾಚಾರದಿಂದ ದೂರವಿರಲು ಪ್ರತಿಭಟನಾಕಾರರಿಗೆ ಅವು ಮನವಿ ಮಾಡಿವೆ.

"ವಾಹನ ನಿಲ್ಲಿಸಲು ಕೊಟ್ಟ ಆದೇಶವನ್ನು ಪಾಲಿಸದ ಚಾಲಕರನ್ನು ನಿಶ್ಚಲಗೊಳಿಸಲು ಸಾಧ್ಯವಾಗದಿದ್ದಾಗ ಮತ್ತು ಅವರ ಓಟದಿಂದಾಗಿ ವಾಹನದ ಪ್ರಯಾಣಿಕರ ಅಥವಾ ಇತರರ ಜೀವಕ್ಕೆ ಅಪಾಯವಿರುವಾಗ" ಪೊಲೀಸರಿಗೆ ಗುಂಡು ಹಾರಿಸಲು ಅಧಿಕಾರ ಕೊಡುವ 2017ರ ಕಾನೂನನ್ನು ರದ್ದುಗೊಳಿಸುವಂತೆ ವಿವಿಧ ಗುಂಪುಗಳು ಒತ್ತಾಯಿಸಿವೆ ಎಂದು ಫ್ರಾನ್ಸಿನ ಪ್ರಸಿದ್ಧ ಪತ್ರಿಕೆ 'ಲಾ ಹ್ಯುಮಾನಿಟೆ' ವರದಿ ಮಾಡಿದೆ.

"ಪೊಲೀಸ್ ಒಬ್ಬರು 17 ವರ್ಷದ ಹುಡುಗನನ್ನು ಸೂಕ್ತ ಕಾರಣವಿಲ್ಲದೆ ಕೊಂದರು. ದೃಶ್ಯದ ವಿಡಿಯೋ ಇಂತಹ ಕಾರ್ಯಾಚರಣೆ ಅಗತ್ಯವಾಗಿರಲಿಲ್ಲವೆಂದು ಸ್ಪಷ್ಟವಾಗಿ ತೋರಿಸುತ್ತದೆ. ಪೊಲೀಸರಿಗೆ ಯಾರ ಜೀವನ್ಮರಣದ ಮೇಲೂ ಅಧಿಕಾರವಿಲ್ಲ. ಈ ಪೋಲೀಸರ ವಿರುದ್ಧ ನ್ಯಾಯಾಂಗವು ನ್ಯಾಯಯುತವಾದ ಶಿಕ್ಷೆಯನ್ನು ಪ್ರಕಟಿಸಬೇಕು, ಎಂದು ಫ್ರಾನ್ಸಿನ ಯುವ ಕಮ್ಯುನಿಸ್ಟ್ ಚಳುವಳಿ **(MJCF)** ನ ಪ್ರಧಾನ ಕಾರ್ಯದರ್ಶಿ ಅಸ್ಸಾನ್ ಲೇಕ್‌ಹೌಲ್, ಜೂನ್ 30 ರಂದು ಹೇಳಿಕೆ ನೀಡಿದ್ದಾರೆ.

ಇದೊಂದು ಅಪರೂಪದ ಘಟನೆಯಲ್ಲ. ವರ್ಣದ್ವೇಷದ ಧೋರಣೆ ಫ್ರಾನ್ಸಿನ ಪೊಲೀಸರಲ್ಲಿ ವ್ಯಾಪಕವಾಗಿದೆ. ಹಾಗಾಗಿ ಅಲ್ಜೀರಿಯಾ ಮುಂತಾದ ಫ್ರೆಂಚ್ ಆಫ್ರಿಕಾದ ಮಾಜಿ ವಸಾಹತುಗಳಿಂದ ಬಂದ ವಲಸೆಗಾರರ 2–3 ನೆಯ ಪೀಳಿಗೆಯ ಜನ ಸಹ ನಿತ್ಯ ಈ ವರ್ಣದ್ವೇವನ್ನು ಎದುರಿಸುತ್ತಿದ್ದಾರೆ. ಬರಿಯ ವರ್ಣದ್ವೇಷದ ಧೋರಣೆ ಮಾತ್ರ ಈ ದಂಗೆಗಳಿಗೆ ಕಾರಣವೂ ಅಲ್ಲ. ಅವರು ಸಮಾಜದಲ್ಲಿ ಕೆಳವರ್ಗಗಳಿಗೆ ಸೇರಿದ್ದು ಅವರ ಜೀವನ ಇತ್ತೀಚಿನ ವರ್ಷಗಳಲ್ಲಿ ಯುರೋಪ್ ಎದುರಿಸುತ್ತಿರುವ ಆರ್ಥಿಕ ಬಿಕ್ಕಟ್ಟಿನಿಂದ ದುರ್ಭರವಾಗಿದೆ. ಅದರ ವಿರುದ್ಧ ಅವರ ಹೋರಾಟಗಳನ್ನು ಫ್ರೆಂಚ್ ಪ್ರಭುತ್ವ ಭಾರೀ ಹಿಂಸಾಚಾರ ಬಳಸಿ ದಮನ ಮಾಡುತ್ತಿದೆ. ಭಯೋತ್ಪಾದನೆ, ಇಸ್ಲಾಮ್–ಭೀತಿ ಗಳ ಭೂತ ತೋರಿಸಿ ಪೋಲಿಸರಿಗೆ ವಿಪರೀತ ದಮನದ ಅಧಿಕಾರಗಳನ್ನು ಕೊಡಲಾಗಿದೆ. ಇದರ ವಿರುದ್ಧವೂ ಜನಕ್ಕೆ ಆಕ್ರೋಶವಿದೆ. ವರ್ಣದ್ವೇಷದ ಕಾನೂನುಬಾಹಿರ ಹತ್ಯೆಯ ಈ ಘಟನೆಯಿಂದಾಗಿ ಈ ಆಕ್ರೋಶ ಸ್ಫೋಟಿಸಿದೆ, ಅಷ್ಟೇ.

ಜೂನ್ 30 ರಂದು, ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಹೈ ಕಮಿಷನರ್ ಕಚೇರಿಯ ವಕ್ತಾರರಾದ ರವೀನಾ ಶಮ್ದಾಸನಿ ಅವರು ಫ್ರೆಂಚ್ ಸರ್ಕಾರವನ್ನು "ಕಾನೂನು ಜಾರಿಯಲ್ಲಿನ ವರ್ಣಭೇದ ನೀತಿ ಮತ್ತು ತಾರತಮ್ಯದ ಆಳವಾದ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸುವಂತೆ" ಕೇಳಿಕೊಂಡಿದ್ದಾರೆ.

ಫ್ರೆಂಚ್ ಪೋಲೀಸರು ಇದೇ ರೀತಿಯ ಕಾನೂನುಬಾಹಿರ ಹತ್ಯೆಗಳಿಗೆ ಈ ಹಿಂದೆಯೂ ಟೀಕೆಗಳನ್ನು ಎದುರಿಸಿದ್ದಾರೆ. ಜುಲೈ 19, 2016 ರಂದು, ಮಾಲಿಯನ್ ಫ್ರೆಂಚ್ ವ್ಯಕ್ತಿ, ಆಡಮಾ ಟ್ರೊರೆ ಅವರನ್ನು ಅವರ 24 ನೇ ಹುಟ್ಟುಹಬ್ಬದಂದು ಫ್ರೆಂಚ್ ನ್ಯಾಷನಲ್ ಜೆಂಡಾರ್ಮಿಯ ಮೂವರು ಪೋಲೀಸ್ ಅಧಿಕಾರಿಗಳು ಬ್ಯೂಮಾಂಟ್–ಸುರ್–ಒಯಿಸ್‌ನಲ್ಲಿ ಬಂಧಿಸುವಾಗ ಅತಿಯಾದ ಬಲವನ್ನು ಬಳಸಿದ್ದರಿಂದ ಕೊಲೆಯಾಗಿದ್ದರು. ಈ ಘಟನೆ ವ್ಯಾಪಕ ಪ್ರತಿಭಟನೆಗೆ ಕಾರಣವಾಗಿತ್ತು. 2019 ರಲ್ಲಿ, ಪ್ಯಾರಿಸ್‌ನಲ್ಲಿ ದಾಖಲೆರಹಿತ ವಲಸೆ ಕಾರ್ಮಿಕರು ಆಯೋಜಿಸಿದ್ದ ಬ್ಲಾಕ್ ವೆಸ್ಟ್ ಪ್ರತಿಭಟನೆಗಳ ವಿರುದ್ಧ ಪೊಲೀಸ್ ಹಿಂಸಾಚಾರವನ್ನು ವ್ಯಾಪಕವಾಗಿ ಖಂಡಿಸಲಾಯಿತು.

ಉನ್ನತ ಶಿಕ್ಷಣದಲ್ಲಿ ಮೀಸಲಾತಿ ಅಸಂವಿಧಾನಿಕ: ಯು.ಎಸ್ ಸುಪ್ರೀಂ ಕೋರ್ಟು

ಜೂನ್ 29 ರಂದು, ಯು.ಎಸ್ ಸುಪ್ರೀಂ ಕೋರ್ಟು ಉನ್ನತ ಶಿಕ್ಷಣಕ್ಕೆ ಜನಾಂಗ–ಆಧಾರಿತ ಪ್ರವೇಶ ನೀತಿಗಳು ಅಸಂವಿಧಾನಿಕ ಎಂದು ತೀರ್ಪು ನೀಡಿದೆ. ಈ ಮೀಸಲಾತಿಯಂತಹ ವ್ಯವಸ್ಥೆಯನ್ನು ಯು.ಎಸ್ ನಲ್ಲಿ 'ಸಕಾರಾತ್ಮಕ ತಾರತಮ್ಯ' (ಪಾಸಿಟಿವ್ ಡಿಸ್ಕ್ರಿಮಿನೇಶನ್ ಅಥವಾ 'ದೃಢೀಕರಣ ಕ್ರಮ' – ಅಫರ್ಮೇಟಿವ್ ಆಕ್ಶನ್) ಎಂದು ಕರೆಯಲಾಗುತ್ತದೆ. ಎಲ್ಲರಿಗೂ ಕಾನೂನಿನ ಸಮಾನ ರಕ್ಷಣೆ ನೀಡುವ 14 ನೇ ತಿದ್ದುಪಡಿಯ ಹಕ್ಕನ್ನು ಈ ಕ್ರಮ ಉಲ್ಲಂಘಿಸುತ್ತದೆ ಎಂದು ಕೋರ್ಟು ಹೇಳಿದೆ.



ಈ ತೀರ್ಪು ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳಿಗೆ ಪ್ರವೇಶಕ್ಕೆ ಜನಾಂಗದ ಅಂಶವನ್ನು ಪರಿಗಣಿಸುವುದನ್ನು ಅಸಾಧ್ಯವಾಗಿಸುತ್ತದೆ. ಜನಾಂಗ–ಆಧಾರಿತ 'ಸಕಾರಾತ್ಮಕ ತಾರತಮ್ಯ' ಕ್ರಮವಿಲ್ಲದೆ, ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ಪಡೆಯುವ ಕರಿಯ (ಆಫ್ರಿಕನ್–ಅಮೆರಿಕನ್) ಮತ್ತು ಲ್ಯಾಟಿನೊ (ದಕ್ಷಿಣ ಮತ್ತು ಮಧ್ಯ ಅಮೆರಿಕಾದ ಸ್ಥಳೀಯ) ವಿದ್ಯಾರ್ಥಿಗಳ ಸಂಖ್ಯೆಯು ಕುಸಿಯುತ್ತದೆ ಎಂದು ಪುರಾವೆಗಳು ತೋರಿಸುತ್ತವೆ. ಆ ಮೂಲಕ ಹೆಚ್ಚು ಗಳಿಕೆಯ ಉತ್ತಮ ಉದ್ಯೋಗಗಳಿಂದಲೂ ಅವರನ್ನು ವಂಚಿತರನ್ನಾಗಿಸುತ್ತದೆ. ಇನ್ನೂ ಸಾಂಸ್ಥಿಕ ವರ್ಣಭೇದ ನೀತಿಯಿಂದ ಪೀಡಿತವಾಗಿರುವ ಮತ್ತು ಕಳೆದ ಕೆಲವು ದಶಕಗಳಲ್ಲಿ ಜನಾಂಗೀಯ ಸಂಪತ್ತಿನ ಅಂತರ ಹೆಚ್ಚುತ್ತಿರುವ ಯು.ಎಸ್ ನಲ್ಲಿ ಜನಾಂಗೀಯ ನ್ಯಾಯ ಕ್ಕೆ ದೊಡ್ಡ ಪೆಟ್ಟು ನೀಡುತ್ತದೆ.

ಯು.ಎಸ್ ವಿಶ್ವವಿದ್ಯಾನಿಲಯಗಳಲ್ಲಿನ 'ದೃಢೀಕರಣ ಕ್ರಮ' ದ ನೀತಿಗಳನ್ನು ಕಾನೂನಾಗಿ ಕ್ರೋಡೀಕರಿಸಲಾಗಿಲ್ಲ. ಹೀಗಾಗಿ ಉನ್ನತ ಶಿಕ್ಷಣ ಸಂಸ್ಥೆಯಿಂದ ಸಂಸ್ಥೆಗೆ ನೀತಿಗಳು ವ್ಯಾಪಕವಾಗಿ ಬದಲಾಗುತ್ತದೆ. ನಾಗರಿಕ ಹಕ್ಕುಗಳ ಚಳುವಳಿ ಮತ್ತು 1960 ಮತ್ತು 70 ರ ಇತರ ಜನಾಂಗೀಯ ನ್ಯಾಯ ಹೋರಾಟಗಳ ನಂತರ ಯು.ಎಸ್ ವಿಶ್ವವಿದ್ಯಾನಿಲಯಗಳು ಶ್ವೇತವರ್ಣೇತರ – ನಿರ್ದಿಷ್ಟವಾಗಿ ಕರಿಯ ಮತ್ತು ಲ್ಯಾಟಿನೋ ವಿದ್ಯಾರ್ಥಿಗಳು – ವಿದ್ಯಾರ್ಥಿಗಳ ಪ್ರವೇಶಕ್ಕೆ ಆದ್ಯತೆ ನೀಡಲಾರಂಭಿಸಿದವು. ಈ ಆದ್ಯತೆಯನ್ನು ತೊಡೆದು ಹಾಕಿದ ವಿಶ್ವವಿದ್ಯಾನಿಲಯಗಳಲ್ಲಿ ಕರಿಯ ಮತ್ತು ಲ್ಯಾಟಿನೋ ವಿದ್ಯಾರ್ಥಿಗಳ ಸಂಖ್ಯೆ ಕುಸಿದಿದೆ.. 1995 ರಲ್ಲಿ, ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯ ದೃಢೀಕರಣ ಕ್ರಮವನ್ನು ನಿಷೇಧಿಸಿತು. 1998 ರಲ್ಲಿ, ನಿಷೇಧದಿಂದ ಪ್ರಭಾವಿತವಾದ ಮೊದಲ ವರ್ಷ, ಅದರ ಎರಡು ಪ್ರಮುಖ ಸಂಸ್ಥೆಗಳಲ್ಲಿ ಕಪ್ಪು ಮತ್ತು ಲ್ಯಾಟಿನೋ ಮೊದಲ ವರ್ಷದ ವಿದ್ಯಾರ್ಥಿಗಳ ಸಂಖ್ಯೆ ಸುಮಾರು ಅರ್ಧದಷ್ಟು ಕಡಿಮೆಯಾಯಿತು.

ಯು.ಎಸ್ ಸುಪ್ರೀಂ ಕೋರ್ಟ್ ಕಳೆದ ವರ್ಷ ಜೂನ್ 24 ರಂದು ರಾಷ್ಟ್ರವ್ಯಾಪಿ ಗರ್ಭಪಾತದ ಪುಟ 10 ಕ್ಕೆ

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**